
# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್–2025




ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ
ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.

## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.

---

**Ph : 080-29731414 Mobile : 9035007003**
**Email: bss1constructions@gmail.com**


ತಿರುಪತಿ ಹುಂಡಿ ಸಿಬ್ಬಂದಿಯಿಂದ ಚಿನ್ನದ ಕಳವು
ದೇವರು ಅವರ ಇಷ್ಟಾರ್ಥಗಳನ್ನ ಬೇಗ
ಕೊಡ್ತಾ ಇರ್ಲಿಲ್ಲ ಅಂತೀಯಾ ?
©Ashok Hemmige


" ಕಂಟ್ರಾಕ್ಟರುಗಳ ಬಾಕಿ ಕ್ರಮೇಣ ಪೂರೈಕೆ "
- ಸುದ್ದಿ
" ಅದೃಷ್ಟ ಖುಲಾಯಿಸಿದ್ರೆ, ಅದು ಬೇರೆಯೋರ
ಸಮಸ್ಯೆ ಆಗ್ಬೋದು ಅಲ್ವೇನ್ರೀ ?"
©Ashok Hemmige

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

Certificate No.: MC-2068



Established in 1978 we are a multi-speciality, tertiary care hospital.

CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್


ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ವಾರ್ಷಿಕ ಚಂದಾ : ರೂ. 100/–

ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 42

ಸಂಚಿಕೆ – 06

ಮಾರ್ಚ್ – 2025


## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಮತ್ತೆ ವರ್ಕ್‌ಶಾಪಂತೆ! | ಕವಿತಾ ಹೆಗಡೆ ಅಭಯಂ | 5 |
| ಬಾಣಂತಿ ಲೇಹ್ಯ | ಡಾ. ಶ್ಯಾಮಲಾ ರವಿಶಂಕರ್ | 8 |
| ಹಳೆಯದಕ್ಕೆ ಡಿಮ್ಯಾಂಡಪ್ಪೋ | ಸಹನ ಪ್ರಸಾದ್ | 11 |
| ಲೇಟ್ ಲತೀಫ್ ವರ್ಸಸ್...... | ಚಿತ್ರಾ ರಾಮಚಂದ್ರನ್ | 14 |
| ಮಲ್ಲಯ್ಯನ ಮಾತು, ಜಾಹೀರಾತು.... | ಸುಮನಾ | 18 |
| ಸ್ಕೂಲ್ ಸಿಲಬಸ್ನಲ್ಲಿ ಕ್ರಿಕೆಟ್ | ಇ.ಆರ್. ರಾಮಚಂದ್ರನ್ | 22 |
| ಪದಬಂಧ | ರಾಜಾಸಂಗಮೇಶ ಎನ್. | 25 |
| ಸಲಾಂ ಬೀದಿನಾಯ್ | ನಳಿನಿ ಟಿ. ಭೀಮಪ್ಪ | 26 |
| ಆನ್‌ಲೈನ್ ಮತ್ತು ಆನ್ ಲೇನ್.... | ಕೆ.ಎಸ್.ಸೋಮೇಶ್ವರ | 29 |
| ಬೊಚ್ಚುಬಾಯಿ ಬಕಾಸುರ | ಪ್ರಭಾ | 32 |
| ಮಲೆನಾಡಿನ ಚಿತ್ರಗಳು | ಪುಷ್ಪಲತಾ.ಟಿ.ಜಿ | 35 |
| ಧೂಮ್ ಮಚಾಲೆ ಧೂಮ್...... | ಸುಮಾ ರಮೇಶ್, ಹಾಸನ. | 37 |
| ತುಂತುರು | ದಂನಆ | 39 |


ವ್ಯಂಗ್ಯ ಚಿತ್ರಗಳು : ಹೊರಪುಟ : ಸುನೀಲ್ ಅಗರ್ವಾಲ್

ಒಳಪುಟಗಳು : ರಾಂಕಿ ಬೆಳ್ಳೂರ್, ರಘುಪತಿ ಶೃಂಗೇರಿ, ಅಶೋಕ್ ಹೆಮ್ಮಿಗೆ


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*

email: koravanjiaparanji@gmail.com ಮೊಬೈಲ್: 9845264304



ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com


**For Online payment of Subscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ಸರಣಿ ಗೆಲುವು; ಕ್ರಿಕೆಟ್

–ಸುದ್ದಿ

ಈಗಲಾದರೂ ಗಂಭೀರ್ ಅವರು ನಸುನಗೆ ಬೀರಬಹುದು !

* * *

ನಮ್ಮ ಪ್ರಧಾನಿ–ಟ್ರಂಪ್ ಭೇಟಿ

–ಸುದ್ದಿ

ಮನೆಗೆ ಕರೆದು ಮಂಗಳಾರತಿ ಮಾಡಿದರಂತೆ ಪಾಪ !!

* * *

ಪತನದ ಹಾದಿಯಲ್ಲಿ ರಾಜ್ಯದ ಆರ್ಥಿಕತೆ

–ಪತ್ರಿಕೆ

ತಜ್ಞರ ಸಮಿತಿ ಅಧ್ಯಯನ ಮಾಡುತ್ತಾರೋ !?

* * *

ಕೆಲಸದ ಒತ್ತಡ ತಗ್ಗಿಸುವಂತೆ ಮನವಿ

–ಬಿ.ಬಿ.ಎಂ.ಪಿ ಸಿಬ್ಬಂದಿ

ಅಯ್ಯೋ ಪಾಪ !?

* * *

ಕೆ.ಪಿ.ಎಸ್.ಸಿ ಪರೀಕ್ಷೆ ; ಭಾರಿ ಅಕ್ರಮ

–ದಿನಪತ್ರಿಕೆ

ಇದನ್ನು 'ಸಕ್ರಮ' ಮಾಡಲು ಯೋಜನೆ !?

* * *

ಭಾರತಕ್ಕೆ ಟೆಸ್ಲಾ ಪ್ರವೇಶ !?

–ಸುದ್ದಿ

ವಿನಾಶ ಕಾಲೇ ವಿಪರೀತ ಬುದ್ಧಿಹಿ !

* * *

'ಮುಡಾ' ಸಿ.ಎಂ. ನಿರಾಳ

–ದಿನಪತ್ರಿಕೆ

ಈ ದುರಂತ ನಾಟಕಕ್ಕೆ ತೆರೆಬಿತ್ತು !

* * *

ಹಳ್ಳಿಯಲ್ಲಿ ಯಶಸ್ವಿ ಉದ್ಯೋಗ ಮೇಳ

ಈತರಹ ಒಳ್ಳೆ ಸುದ್ದಿಗಳಿಗೆ ಪ್ರಾಮುಖ್ಯತೆ ಕೊಡಬೇಕು !

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**


ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಘೋಷಿಸಿದ " ಮನೆಮನೆಯಲ್ಲೂ ಗ್ರಂಥಾಲಯ" ಎಂಬ ಮಂತ್ರ ನಮ್ಮ ಮನೆಯಲ್ಲಂತೂ ನಮ್ಮ ತಂದೆಯವರ ಕಾಲದಿಂದ ನಡೆದು ಬಂದಿದೆ. ಅವರಿದ್ದಾಗ ಇದ್ದ ಸುಮಾರು ಐದು ಸಾವಿರ ಪುಸ್ತಕಗಳ ಸಂಗ್ರಹ, ನನ್ನ ಓದಿನ ಅಭಿರುಚಿ ಬೆಳೆಯುತ್ತ ಹೋದಂತೆ ಏಳು ಸಾವಿರಕ್ಕೇರಿತು. ಈ ಕಲೆಕ್ಷನ್ನಿನ ಅನೇಕ ಪುಸ್ತಕಗಳು ವಿಶ್ವಕೋಶ, ನಿಘಂಟುಗಳು, ತತ್ವಶಾಸ್ತ್ರಗಳಿಗೆ ಸಂಬಂಧಿಸಿದ್ದವು. ಇಷ್ಟು ದೊಡ್ಡ ಪುಸ್ತಕ ರಾಶಿಯನ್ನು ಸಂಭಾಳಿಸುವ ಕಾರ್ಯದ ಹೊರೆಯನ್ನು ಕಡಿಮೆ ಮಾಡಲು ಈ ಸಂಗ್ರಹದ ಒಂದು ದೊಡ್ಡ ಭಾಗವನ್ನು ಹರಿಹರಪುರ ದಲ್ಲಿರುವ ಪ್ರಭೋಧಿನಿ ಗುರುಕುಲದ ಗ್ರಂಥಾಲಯಕ್ಕೆ ನೀಡಿದೆ.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಮೊನ್ನೆ ನನ್ನ ಈ ಮೆಚ್ಚಿನ ಪುಸ್ತಕಗಳ ಮೇಲೆ ಕಣ್ಣಾಡಿಸುತ್ತಿದ್ದಾಗ ನನ್ನ ಕಣ್ಣಿಗೆ ಬಿದ್ದ ಪುಸ್ತಕ, ಜೆ.ಬಿ.ರಂಗಸ್ವಾಮಿಯವರ "ನಿನ್ನೆ ಮೊನ್ನೆ ನಮ್ಮ ಜನ" ಎಂಬ ಲೇಖನಗಳ ಸಂಕಲನ. ಜೇಬರ್ ಅವರನ್ನು ನಾನು ಮೊದಲು ಭೇಟಿ ಮಾಡಿದ್ದು, ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಸಮಾರಂಭವೊಂದರಲ್ಲಿ. ಅಂದು ಲೇಖಕಿ ಭುವನೇಶ್ವರಿ ಹೆಗಡೆಯವರ "ನಕ್ಕು ಹಗುರಾಗಿ" ಪುಸ್ತಕವನ್ನು ಬಿಡುಗಡೆ ಮಾಡಲು ಜೇಬರ್ ಅವರು ಬಂದಿದ್ದರು. ಅದಾದ ನಂತರ ನಾನು ಪಾಶ್ಚಾತ್ಯ ನಗೆಗಾರರ ಮೇಲೆ ಒಂದು ಲೇಖನ ಸರಣಿಯನ್ನು ಅಪರಂಜಿಯಲ್ಲಿ ಬರೆದಿದ್ದಾಗ ಅದರ ಬಗ್ಗೆ ಅವರು ಹಲವು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಅವರ ಈ ಪುಸ್ತಕದಲ್ಲಿ ಎಲ್ಲ ಲೇಖನಗಳು ಅವರ ಸ್ವಂತ ಅನುಭವಗಳನ್ನು ತಮ್ಮದೇ ಆದ ನೇರ ಭಾಷೆಯಲ್ಲಿ ಹಿಡಿದಿಟ್ಟಿರುವ ಸಮರ್ಥ ಯತ್ನ. ಅವರಂತೆಯೇ ನನಗೂ ತೇಜಸ್ವಿ, ಲಂಕೇಶ್ ಮುಂತಾದವರುಗಳೊಂದಿಗೆ ಆಪ್ತ ಸಂಪರ್ಕವಿತ್ತು. ಆದರೆ ಜೇಬರ್ ಅವರಷ್ಟು ನಿರ್ಭಿಡೆಯಿಂದ, ಸತ್ಯನಿಷ್ಠೆಯಿಂದ, ಪೂರ್ವಾಗ್ರಹವಿಲ್ಲದೆ ಬಹು ಸರಳವಾದ ಶೈಲಿಯಲ್ಲಿ ಅಂತಹ ಅನುಭವಗಳನ್ನು ದಾಖಲಿಸುವುದು ಅಷ್ಟು ಸುಲಭದ ಕೆಲಸವಲ್ಲ ಎಂಬುದು ನನ್ನ ಅನಿಸಿಕೆ. ನಾಗತಿಹಳ್ಳಿ ಚಂದ್ರಶೇಖರ ಅವರು ಹೇಳುವಂತೆ, "ಈ ಬರಹಗಳ ವಿಶೇಷವೆಂದರೆ ಇವು ಖಾಕಿ ಬಟ್ಟೆಯೊಳಗಿನ ಸಾಮಾನ್ಯ ವ್ಯಕ್ತಿಯ ದಿಗಿಲು, ಅಸಹಾಯಕತೆ, ಅವಮಾನ, ದ್ವಂದ್ವ, ಗೊಂದಲ, ಕ್ರೌರ್ಯ, ತರತಮ, ಚಡಪಡಿಕೆ, ಸಂಭ್ರಮ ಮತ್ತು ವಿಷಾದಗಳನ್ನು ಹೇಳುತ್ತವೆ. ನಿವೃತ್ತನ ಹಳಹಳಿಕೆಯ ಉತ್ಪ್ರೇಕ್ಷೆಗಳಲ್ಲ. ಸಾಹಸಗಳ ಮರು ನೆನಪಲ್ಲ. ಸಹಜತೆ ಮತ್ತು ಸರಳತೆಗಳಿಂದ ಕೂಡಿವೆ. ಸರಳವಾಗಿ ಬರೆಯುವುದೇ ಕಷ್ಟದ ಕೆಲಸ. ಜಗುಲಿಯ ಮೇಲೆ ನಾಲ್ಕು ಜನ ಕೂರಿಸಿಕೊಂಡು ಟೀ ಕುಡಿಯುತ್ತಾ ಹರಟಿದಂತಿದೆ. ಗಣ್ಯರನ್ನು ಕುರಿತ ಬರಹಗಳು ಅರ್ಥವತ್ತಾಗಿದ್ದರೆ, ದಸರೆ, ಪೈಲ್ವಾನರು, ಕಾಶಿಯಲ್ಲಿ ಸಿಕ್ಕವರು, ಅಪರಾಧೀ ಜಗತ್ತಿನ ಬರಹಗಳು ಚಿತ್ರವತ್ತಾಗಿವೆ. ಸ್ವನಿಂದೆ ಮತ್ತು ಪರನಿಂದೆಗಳು ಸಂಯಮ ಸಾಧಿಸಿವೆ. ಹಾಸ್ಯಪ್ರಜ್ಞೆ ಅತಿರೇಕಕ್ಕೆ ಹೋಗಿಲ್ಲ. ...."

ರಾಶಿಯವರಿಗಿದ್ದಂತೆ ಜೇಬರ್ ಅವರಿಗೆ ಅಪಾರ ವೈವಿಧ್ಯಮಯ ಹಿನ್ನೆಲೆಗಳ ಜನಸಂಪರ್ಕದ ಸೌಭಾಗ್ಯ ದೊರಕಿತ್ತು. ಇಂತಹ ಶ್ರೀಮಂತ ಅನುಭವಗಳನ್ನು ಕಣ್ಣಿಗೆ ಕಟ್ಟುವ ಹಾಗೆ ದಾಖಲಿಸಿರುವ ಲೇಖನಗಳಲ್ಲಿ ಒಂದು ಚೂರೂ ಕೃತಕತೆ ನುಸುಳಿಲ್ಲ. ಮುನ್ನುಡಿಯಲ್ಲಿ ಕೃಷ್ಣೇಗೌಡರು ಹೇಳುವಂತೆ, ಜೇಬರ್ ಅವರು ಬಳಸಿರುವ ಭಾಷೆ

ಚಪ್ಪರಿಸಿಕೊಂಡು ಓದುವಂತೆ ಇದೆ. ಇಂದಿರಾ, ರಾಜೀವ್, ಪ್ರಭುಶಂಕರ, ಡಾ. ರಾಜ್ ಮತ್ತು ಇತರ ಅನೇಕ ಲೇಖನಗಳು ಬಹು ಸ್ವಾರಸ್ಯವಾಗಿ ಮೂಡಿಬಂದಿವೆ. ಪುಸ್ತಕ ಕೈಗೆತ್ತಿಕೊಂಡ ಮೇಲೆ ಕೇವಲ ಎರಡೇ ಘಂಟೆಗಳಲ್ಲಿ ಓದಿ ಮುಗಿಸಿದೆ. ನಿಜ ಹೇಳಬೇಕಂದರೆ, ತೇಜಸ್ವಿಯವರ ಪರಿಸರದ ಕಥೆ ಪುಸ್ತಕವನ್ನೂ ಹೀಗೇ ಬರಗೆಟ್ಟಂತೆ ಓದಿದ ನೆನಪು.

ಜೇಬರ್ ಅವರ ಲೇಖನಿಯಿಂದ ಇಂತಹ ಇನ್ನೂ ಅನೇಕ ಪುಸ್ತಕಗಳ ಮೂಡಿಬರಲಿ ಎಂದು ಅಶಿಸುವೆ. ■



# ಮತ್ತೆ ವರ್ಕ್‌ಶಾಪಂತೆ!

**ಕವಿತಾ ಹೆಗಡೆ ಅಭಯಂ**

ವಾಹ್! ಈ ಟೀಚರ್‌ಗಳ ವೃತ್ತಿಪರತೆಯನ್ನು ಹೆಚ್ಚಿಸುವ ವರ್ಕ್‌ಶಾಪ್‌ಗಳು ಎಂಥಾ ಅದ್ಭುತ ಮಾರಾಯ್ರೆ! ಇಂಥಾ ಮಜಾ ಮಾತ್ರ ಎಲ್ಲೂ ಇರಲ್ಲ ಗೊತ್ತಾ? ಎಂಥದ್ದೋ ಫಾರಿನ್ ಸಕ್ಸಸ್ ಸೂತ್ರ ಹಿಡಿದುಕೊಂಡು ಇಂಡಿಯನ್ ಟೀಚರ್ ಕುತ್ತಿಗೆಗೆ ಬಿಗಿಯೋ ಕೆಲಸ ಸುಮ್ನೇನಾ? ಪ್ರೊಫೆಷನಲ್ ಡೆವಲಪ್ಮೆಂಟ್ ಹೆಸರಲ್ಲಿ ಟೀಚರುಗಳು ಒಪ್ಪಿಕೊಳ್ಳೋ ತ್ರಾಸಿಗೆ ಲೆಕ್ಕವೇ ಇಲ್ಲ.

ಶನಿವಾರ ವರ್ಕ್‌ಶಾಪ್ ಎನ್ನುವ ಮೆಸೇಜ್ ಬರೋದೂ ಒಂದೇ, ಬಾಂಬು ಬೀಳೋದೂ ಒಂದೇ. "ಹಾಫ್ ಡೇ ಅಲ್ಲಾ, ಶಾಪಿಂಗ್ ಹೋಗೋಣು, ತವರು ಮನೀಗ್ ಹೊಂಟೀನಿ, ಫನ್‌ಕ್ಷನ್ ಐತಿ, ಗೆಸ್ಟ್ ಬರ್ತಾರ, ಇಲ್ಲಾ ಚಲೋ ನಿದ್ದಿ ಮಾಡ್ಬೇಕು" ಎನ್ನುತ್ತ ಒಬ್ಬೊಬ್ಬರು ಒಂದೊಂದು ಥರ ಒಂದು ವಾರ ಕಂಡ ಎಲ್ಲಾ ಕನಸನ್ನು ಸುತ್ತಿ ಅಟ್ಟಕ್ಕೆ ಎಸೆದು,  ಬಲಿ ಪೀಠಕ್ಕೆ ಏರಲು ತಯಾರಾಗಿ ಹೊರಟ ಲುಕ್ಕಲ್ಲಿ ಬಡಜೀವಗಳು ವರ್ಕ್ ಶಾಪಿಗೆ ಹೊರಡುತ್ತವೆ.

ಕೊರೊನಾ ಕಾಲದಲ್ಲಿ ಎಲ್ಲಾ ಆನ್‌ಲೈನ್ ವೆಬಿನಾರ್ ಇದ್ದಾಗ ತಿಂತಾ, ಕುಡೀತಾ, ಮಲಗಿಕೊಂಡು ಎಲ್ಲೆಲ್ಲೋ ಹೇಗೇಗೋ ನೈಟಿ ಬರ್ಮುಡಾದಲ್ಲಿ ಲಾಗಿನ್ ಆಗೋದು ತುಂಬಾ ಸಾಮಾನ್ಯವಾಗಿಬಿಟ್ಟಿತ್ತು. ಆ ರಿಸೋರ್ಸ್ ಪರ್ಸನ್‌ಗಳೋ, ಇಂಥಾ ಕಿಲಾಡಿಗಳನ್ನು ಹಿಡಿಯೋಕೆ ಅಂತಲೇ ಹುಟ್ಟಿದ ಹಾಗೆ ಒಬ್ಬರನ್ನು ಹೆಸರಿಸಿ ನೀವು ಮುಖ ತೋರಿಸಿ ಉತ್ತರ ಹೇಳಿ ಅಂದ ತಕ್ಷಣವೇ ನೆಟ್ವರ್ಕ್ ಪ್ರಾಬ್ಲಮ್ ಅಂತ ಎಸ್ಕೇಪ್ ಆಗೋದನ್ನು ಮಕ್ಕಳೇ ಶಿಕ್ಷಕರಿಗೆ ಕಲಿಸಿದ್ದು ಗೊತ್ತಾ?

ಈಗೀಗ ಅಲ್ಲಲ್ಲಿ ಆನ್‌ಲೈನ್ ವರ್ಕ್‌ಶಾಪ್ ಇದ್ದರೂ ಅವು ಅಷ್ಟು ಎಫೆಕ್ಟಿವ್ ಅನಿಸೋಲ್ಲ. ಯಾರು ಎಷ್ಟೇ ಹಿಡಿಯೋಕೆ ಪ್ರಯತ್ನ ಮಾಡಿದರೂ ಯಾರೂ ಅಷ್ಟು ಕೇರ್ ಮಾಡಲ್ಲ. ಹಾಗಾಗಿ ಮತ್ತೆ ಆಫ್ ಲೈನ್ ವರ್ಕ್ ಶಾಪ್ ಬಂದು ಬಾಗಿಲ ಮುಂದಿನ ಭೂತವಾಗಿಬಿಟ್ಟಿದೆ.

ಇನ್ನು ಈ ವರ್ಕ್‌ಶಾಪ್ ಯಾವುದೋ ಬೇರೆ ಊರಲ್ಲಿ ಅಂದರಂತೂ ಸತ್ತ ಹಾಗೆ. ಬೆಳಬೆಳಿಗ್ಗೆ ಎಂಟು–ಎಂಟೂವರೆಗೆ ರಿಪೋರ್ಟ್ ಮಾಡಿಕೊಳ್ಳಿ ಅಂತಾರೆ, ಅಲ್ರೀ, ಒಂದೋ ಎರಡೋ ತಾಸು ಜರ್ನಿ ಇರೋ ಊರಿಗೆ ನಿದ್ದೆಗೆಟ್ಟ ಮುಖದ ಕೂದಲು ಕೆದರಿದ ಟೀಚರುಳಗನ್ನು ಕರೆಸಿಬಿಡ್ತಾರೆ. ಪ್ರಯಾಣದ ಆಯಾಸದಿಂದ ಸುಧಾರಿಸಿಕೊಳ್ಳೋಕೆ ಬಿಡದೆ  ಗಬ್ ಗಬಕ್ ಅಂತ ಬ್ರೇಕ್ ಫಾಸ್ಟ್ ನುಂಗಿಸಿ ವರ್ಕ್ ಶಾಪ್ ಹಾಲಿಗೆ ದೂಡಿ ಬಿಟ್ಟರೆ ಎಲ್ಲಿ ಬರಬೇಕು ಎಫೆಕ್ಟಿವ್ ಲರ್ನಿಂಗ್?

ಇನ್ನೇನು ಎಸಿ ಚಳಿಗೋ ಫ್ಯಾನ್ ತಗುಲದ ಮೂಲೆಯ ಸೆಕೆಗೋ ಅಡ್ಜಸ್ಟ್ ಆಗುವಷ್ಟರಲ್ಲಿ ವರ್ಕ್ ಶಾಪ್ ಉದ್ಘಾಟನೆ ಶುರು!

ಎಲ್ಲಕ್ಕಿಂತ ಸಂಕಟ ಅಂದರೆ ತಮ್ಮದೇ ಸ್ಕೂಲಿನ  ಫ್ರೆಂಡ್ಸ್ ಜೊತೆ ಕೂತವರನ್ನು ಒಂದು ಆಕ್ಟಿವಿಟಿ ಕೊಟ್ಟ ಶಾಸ್ತ್ರ ಮಾಡಿ ಹೊಸಬರ ಜೊತೆ ಗ್ರೂಪ್ ಮಾಡೋದು. ಗುರುತು ಪರಿಚಯ ಇಲ್ಲದ ಹೊಸ ಮುಖಗಳ ಜೊತೆ ಇಡೀ ದಿನ ಕೂರೋದು, ಆಕ್ಟಿವ್ ಆಗಿ ಪಾರ್ಟಿಸಿಪೇಟ್ ಮಾಡೋದು ಅಂದರೆ ಒಲ್ಲದ ಗಂಡನ ಜೊತೆ ಸಂಸಾರ ಮಾಡಿದ ಹಾಗೇ ಅಲ್ವಾ?

ಇನ್ನು ಐಸ್ ಬ್ರೇಕರ್ ಆಕ್ಟಿವಿಟಿ ಅಂತ ದೊಡ್ಡ ಹೆಸರು ಕೊಟ್ಟ ಫನ್ನಿ ಆಕ್ಟಿವಿಟಿ ಮಾಡಿಸುವುದು ಒಮ್ಮೊಮ್ಮೆ ಮಜಾ, ಇಲ್ಲ ಸಜಾ. ದಿನವಿಡೀ ಒಂದಲ್ಲ ಒಂದು ಆಕ್ಟಿವಿಟಿ ಮಾಡಿಸುತ್ತ ಅದಕ್ಕೆ ಶಿಕ್ಷಕರು ಏನು ಕಳಪೆ ಉತ್ತರ ಕೊಟ್ಟರೂ "ವೇರಿ ನೈಸ್.. ಎಕ್ಸಲೆಂಟ್..ಔಟ್ ಸ್ಟ್ಯಾಂಡಿಂಗ್" ಎನ್ನುತ್ತ ಹುರಿದುಂಬಿಸಿ ಒಳ್ಳೇ ಟ್ರೈನರ್ ಎನಿಸಿಕೊಳ್ಳುವ ಹಂಬಲದವರು ಬೇರೆ. ಫೀಡ್ ಬ್ಯಾಕ್ ನಲ್ಲಿ ಎಲ್ಲಾ ಪಾಸಿಟಿವ್ ಇರ್ಲಿ ಎಂದು ಸಿಟ್ಟು ಬಂದರೂ, ಸುಸ್ತಾದರೂ, ಎಂಥಾ ಮಳ್ಳು ಪ್ರಶ್ನೆ ಎನಿಸಿದರೂ, ಮುಸುಡಿಗೆ ಒಂದು ಇಕ್ಕಬೇಕು ಅನಿಸಿದರೂ, ಥೂ ಎಂದು ಉಗಿಯುವಷ್ಟು ಕೋಪ ಬಂದರೂ ಬಿಳೀ ಬಿನಾಕಾ ಸ್ಮೈಲಿನಲ್ಲೇ ಇಡೀ ದಿನ ಕಳೆಯುವ ಆಷಾಢಭೂತಿತನ ತೋರುವ ಸಂಪನ್ಮೂಲ ವ್ಯಕ್ತಿಗಳನ್ನು ನೋಡಿದರೆ ಅಯ್ಯೋ ಪಾಪ ಅನಿಸಿಬಿಡುತ್ತೆ.




ಒಮ್ಮೊಮ್ಮೆ ತಾವು ಮಾಡಿಸೋ ಆಕ್ಟಿವಿಟಿ ಸೂಕ್ತವಲ್ಲ ಎಂಬುದೇ ತಿಳಿಯದ ಮುಗ್ಧರಾದ ಅಥವಾ ತಿಳಿದೂ ಮಾಡುವ ಅನಿವಾರ್ಯತೆಯಿಂದ ಹುಟ್ಟಿದ ಹುಸಿ ನಗು ಬೀರುವ ಸಂಪನ್ಮೂಲ ವ್ಯಕ್ತಿಗಳಿಗೆ ಶಿಕ್ಷಣ ರತ್ನ ಅವಾರ್ಡ್ ಮೊದಲು ಕೊಡ್ಬೇಕು. ಅಂಥದ್ದೊಂದು ಗೋಳು ನೋಡಿದರೆ ಅನುಭವ ಇರೋ ಶಿಕ್ಷಕರಿಗೆ ನಗು ತಡೆಯೋಕಾಗಲ್ಲ.

ಟೀಮ್ ಬಿಲ್ಡಿಂಗ್, ಕೊಲೇಬೋರೇಷನ್, ಹ್ಯಾಪಿ ಕ್ಲಾಸ್ ರೂಮ್ ಅಂತೆಲ್ಲ ದೊಡ್ಡ ದೊಡ್ಡ ಶಬ್ದ ಕೇಳಿದಾಗ ಟೀಚರುಗಳಿಗೆ ವಾಸ್ತವದಲ್ಲಿ ಏನು ಸಾಧ್ಯ ಎಂಬ ಕಲ್ಪನೆ ಇರೋದರಿಂದ ಹುಸಿ ನಗು ನಕ್ಕು ಹಾ.. ಹಾ ಹಾ ಎಂದು ತಲೆದೂಗಿಬಿಡುತ್ತಾರೆ. ಎಂದೂ ಕ್ಲಾಸಿಗೆ ಹೋಗದ ಸಾಫ್ಟ್ ಸ್ಕಿಲ್ ಟ್ರೈನರು ಇನ್ನೋವೆಟಿವ್ ಟೀಚಿಂಗ್ ಬಗ್ಗೆ ಮಾತನಾಡುವಾಗ ಹಾಗೆ ಮಾಡಿದರೆ ಕ್ಲಾಸಲ್ಲಿ ಆಗೋ ಗದ್ದಲ ನೋಡಿ ರೌಂಡ್ಸ್ ಮುಗಿಸಿ ಹೋಗೋ ಪ್ರಿನ್ಸಿಪಾಲರು ಓಡಿ ಬಂದು ಕ್ಲಾಸ್ ಕಂಟ್ರೋಲ್ ಮಾಡಕ್ಕಾಗಲ್ಲ ಎಂದು ಉಗಿದ ಹಾಗನ್ನಿಸಿ ಅಲ್ಲೇ ಭರವಸೆ ಹೊರಟುಹೋಗುತ್ತೆ.

ಎಲ್ಲಕ್ಕಿಂತ ಮಜಾ ಅಂದರೆ ತಾವು ತಮ್ಮ ಸ್ಕೂಲಲ್ಲಿ ಮಾಡೋ ಬೆಸ್ಟ್ ಪ್ರಾಕ್ಟೀಸ್ ಶೇರ್ ಮಾಡಿ ಅಂದಾಗ ಕೆಲವು ಟೀಚರುಗಳು ಮಾಡೋ ಅವಾಂತರ ಕೇಳಿ ನಕ್ಕು ಹೊಟ್ಟೆ ಹುಣ್ಣಾಗುತ್ತೆ. ತಾವು ಎಷ್ಟು ಫೂಲಿಶ್ ಎಂದು ಕೆಲವರಿಗೆ ಅಲ್ಲೇ ತಿಳಿಯುತ್ತೆ.

ಕೊಟ್ಟ ಆಕ್ಟಿವಿಟಿಯೇ ಒಂದು, ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡು ಇನ್ನೊಂದೇ ಮಾಡುವವರು ಇಡೀ ವರ್ಕ್ ಶಾಪಿನ ನಗೆ ಗುಳಿಗೆಗಳು.

ಸಣ್ಣ ಮಕ್ಕಳ ಹಾಗೆ ಚಾರ್ಟು, ಕಲರ್ಸ್ ಹರಡಿಕೊಂಡು ಚಿತ್ರ ವಿಚಿತ್ರ ಸ್ವಭಾವದ ಗ್ರೂಪ್ ಮೆಂಬರ್ಸ್ ಜೊತೆ ಏಗೋ ಕರ್ಮಕ್ಕೆ ಬಂದಿದ್ದೂ ಮರೆತುಹೋಗೋದಿದೆ.

ಲಾಭ ಏನಪ್ಪಾ ಅಂದರೆ ಬಿಟ್ಟಿ ಊಟ ತಿಂಡಿ ಟೀ ಕಾಫಿ, ಎಂದೂ ಕಣ್ಣೆತ್ತಿ ನೋಡದ ಒಂದಿಷ್ಟು ರಿಸೋರ್ಸ್ ಕಿಟ್ ಅಷ್ಟೇ.

ಇಡೀ ದಿನ ಕಣ್ಣು ಮುಚ್ಚಿ ಬರುತ್ತಿದ್ದರೂ ಭಾರೀ ಚುರುಕು ಎನ್ನುವಹಾಗೆ ನಟಿಸುವ, ಕಣ್ಣು ಬಿಟ್ಟುಕೊಂಡೇ ನಿದ್ರಿಸುವ ಟೀಚರುಗಳ ತಾಕತ್ತಿಗೆ ಯಾರೂ ಸಾಟಿಯಿಲ್ಲ ಅಲ್ವಾ?

ಇಲ್ಲಿ ಇಡೀ ದಿನ ವಿಚಿತ್ರ ಕಾಟ ಅನುಭವಿಸುವಾಗ ದಿನಾ ತಾವು ಮಕ್ಕಳನ್ನು ಹೀಗೇ ಆಟ ಆಡಿಸೋದು ನೆನಪಾಗಿ 'ಅಯ್ಯೋ ನನ್ನ ಬಂಗಾರದಂಥ ಮಕ್ಕಳೇ... ವಿನಾಕಾರಣ ನಿಮ್ಮನ್ನು ಕಾಡ್ತಾ ಇದ್ನಾ' ಎಂಬ ಜ್ಞಾನೋದಯದ ಸ್ಪಾಟ್ ಆಗುತ್ತೆ ಆ ವರ್ಕ್ ಶಾಪ್ ಹಾಲ್. ಆದರೂ ವಾಪಸ್ಸು ಬಂದಮೇಲೆ ಯಥಾ ಬುದ್ಧಿ....

ಇಷ್ಟೆಲ್ಲ ಪ್ರಹಸನ ಮಾಡಿದ ಮೇಲೂ ಫೀಡ್ ಬ್ಯಾಕ್ ಸೆಷನ್ ಬಂದಾಗ 'ಇದೊಂದು ಅದ್ಭುತ ವರ್ಕ್ ಶಾಪ್ ಆಗಿತ್ತು, ನಾನು ಎಷ್ಟೊಂದು ಕಲಿತೆ, ಖಂಡಿತ ಸ್ಕೂಲಿಗೆ ಹೋಗಿ ಇಂಪ್ಲಿಮೆಂಟ್ ಮಾಡ್ತೀನಿ' ಅಂದ ಮರುಕ್ಷಣವೇ ಹೈ ಟೀ ಸೇವಿಸಿ ಎಲ್ಲ ಮರೆತು ತಮ್ಮ ಹಳೇ ಬುದ್ಧಿಯನ್ನೇ ಮುಂದುವರಿಸುವ ಟೀಚರುಗಳು ದೇಶದ ನಿಜವಾದ ಪಿಲ್ಲರುಗಳು.

ಹೊಸದಾಗಿ ನೇಮಕವಾಗಿರೋ ಟೀಚರುಗಳು ಉತ್ಸಾಹಕ್ಕೋ ಭಯಕ್ಕೋ ಸ್ವಲ್ಪವಾದರೂ ಕಲಿತರೆ ಸೀನಿಯರ್ ಟೀಚರುಗಳಿಗೆ ಎಲ್ಲ ಗೊತ್ತಿರೋ ಕಾರಣ ಮನಸ್ಸಲ್ಲೇ ನಗುತ್ತ ಕುಳಿತುಕೊಳ್ಳುತ್ತಾರೆ.

ವೃತ್ತಿಯಲ್ಲಿ ನಾವೀನ್ಯ, ಪ್ರಾವೀಣ್ಯ ಎಲ್ಲಾ ಬೇಕು ನಿಜ, ಆದರೆ ಪ್ರಾಕ್ಟಿಕಲ್ ಆಗಿ ಸಾಧ್ಯವಾಗೋ ರೀತಿ ವರ್ಕ್ ಶಾಪ್ ಇದ್ದರೆ ಅದು ಖಂಡಿತ ಒಳ್ಳೇದು. ಆದರೆ ಹೊಟ್ಟೆ ಬಿರಿ ಊಟ ಮಾಡಿದ ಮೇಲೆ ನಿದ್ದೆ ಮಾಡೋಕೆ ಬಿಡದೆ ಇರೋ ವರ್ಕ್ ಶಾಪ್ ನ್ಯಾಯವಾ ನೀವೇ ಹೇಳಿ. ■



# ಬಾಣಂತಿ ಲೇಹ್ಯ

✍ಡಾ. ಶ್ಯಾಮಲಾ ರವಿಶಂಕರ್

ನಮ್ಮ ಗೆಳತಿಯರ ಗುಂಪು ಸೇರಿದಾಗ ಮಾಧುರಿ ನನ್ನ ಮೇಲೆ ಆರೋಪ ಹೊರಸಿದಳು, "ನಿನ್ನ ಮಾತು ನಂಬಿದ್ದಕ್ಕೆ ನಾನು ಅದೂ ಈಗ ಬಾಣಂತಿ ಲೇಹ್ಯ ತಿನ್ನ ಬೇಕಾಯಿತು" ಎಲ್ಲರೂ ಒಟ್ಟಿಗೆ ನಕ್ಕಿದ್ದೂ ಅಲ್ಲದೆ "ಏನಾಯ್ಥಮ್ಮ, ಅಂತಹ ಪರಿಸ್ಥಿತಿ ಯಾಕೆ ಹೇಗೆ ಒದಗಿತು ?" "ಅಂದಾಗ, ಅಮೆರಿಕಾಗೆ ಮಗಳ ಬಾಣಂತನಕ್ಕೆ ಅಂತ ಹೋದಾಗ ಲೇಹ್ಯನ ನೋಡಿ ಹಾಗೆ ಹೀಗೆ ತಿರುಗಿಸಿ ನೋಡಿ ನೂರೆಂಟು ಪ್ರಶ್ನೆ ಕೇಳಿದ, ಕಸ್ಟಮ್ಸ್ ಆಫಿಸರು. ನಾನು "ಅದು ನನ್ನ ಡಿಜೆಷನ್ಗೆ ಮನೆ ಮದ್ದು, ಅಸಿಡಿಟಿಗೆ ತೊಗೋಬೇಕುನಾನು, ಅಂದೆ. ಹಾಗಾದ್ರೆ ತಿಂದು ತೋರ್ಸು ಅನ್ನೋದಾ ?ಹಾಗಾಗಿ ತಿನ್ನಬೇಕಾಗಿ ಬಂತು "ಕನ್ವಿನ್ಸ್ ಆದನೋ ಇಲ್ವೋ ಗೊತ್ತಿಲ್ಲ, ಆಗಿರಬೇಕು, ಅಸಹ್ಯದ ಮುಖ ತೋರಿ ಕ್ಲಿಯರ್ ಮಾಡಿದಾಂತ ಇಟ್ಕೊಳ್ಳಿ" "ಅಂದಳು. ಮಿಕ್ಕವರು, "ಅಲ್ವೇ, ಕಟೆಂಟ್ಸ್ ಲೇಬಲ್ ಮೇಲೆ ಇರತ್ತಲ್ಲಾ, ತೋರಿಸಬೇಕಿತ್ತು" ಅಂದರು. "ಅದು ನಮ್ಮ ಮ್ಯಾಟ್ರಿಲೀನಿಯಲ್ ನೋ ಹೌ . ಎಲ್ಲಿಂದ ಲೇಬಲ್ಲು ತಂದು ಹಾಕ್ಲಿ?"

ಲೀಲಾ ತನ್ನಜ್ಜಿಯ ಲೇಹ್ಯ ಪ್ರಕರಣ ಹೇಳಿದಳು :

ನಮ್ಮ ಒಟ್ಟು ಕುಟುಂಬದಲ್ಲಿ ಹತ್ತು ಕಸಿನ್ಸ್ ನನ್ನ ಒಡ ಹುಟ್ಟಿದವರೂ ಸೇರಿ.. ಮೊರ್ ದ ಮೆರಿಯರ್, ಇನ್ನು ಕೇಳಬೇಕಾ ? ದಿನಾ ಒಂದೊಂದು ತರಲೆ ತೆಗಿಯೋದು, ಉಗಿಸಿ ಕೊಳ್ಳೋದು ಇಲ್ಲದಿದ್ರೆ ನಮ್ಮ ಜೀವನ ಸಾರ್ಥಕ ಅಲ್ಲ ಅನ್ನೋ ಹಾಗೆ ಇದ್ದಿವಿ. ಹೀಗಿದ್ದಾಗ ನಮ್ಮಲ್ಲೇ ಹಿರಿಯವಳಾದ ತ್ರಿಪುರ, ಬೆಳ್ಳಗೆ ತೆಳ್ಳಗಿದ್ದು ತನ್ನ ರೂಪದ ಬಗ್ಗೆ ಬಹಳ ಜಂಭ ಪಡ್ತಿದ್ಳು. ಅವಳಿಗೆ ಮದುವೆ ಆದ ಮರು ವರ್ಷ ಬಾಣಂತನಕ್ಕೆ ಬಂದಿಳಿದಾಗ ಅವಳ ಆಕಾರ ನೋಡಿ ಇವಳಿಗೆ ದೇವರು ಸರಿಯಾಗಿ ಬುದ್ಧಿ ಕಲಿಸಿದ ಅಂತ ಅಂದ್ಕೊಂಡ್ವಿ. ! ಅವಳನ್ನ ಹಿರಿಯರು ಅದ್ಯಾಕೆ ಅಷ್ಟು ಮುದ್ದು ಮಾಡ್ತಿದ್ದಾರೆ ? ಮನೇಲಿ ಅದೇನು ಸಂಭ್ರಮ ? ಇವೆಲ್ಲ ನಮಗೆ ವಿಚಿತ್ರ ಅನ್ನಿಸ್ತು. ಸೀಮಂತಕ್ಕೆ ಜನ ಬರೋದೇನು, ಗಿಫ್ಟುಗಳನ್ನ ಕೊಡೋದೇನು, ಇವೆಲ್ಲಕ್ಕೂ ಮೂಕ ಪ್ರೇಕ್ಷಕರು ನಾವು .ಇಷ್ಟು ದಪ್ಪ ಆದ್ರೂ ಇನ್ನೂ ತಿನಸುಗಳನ್ನೂ ಕಬಳಿಸ್ತಾ ಇದ್ದಾಳಲ್ಲಾ ಅಂತ ಬೇರೆ ಕಾಳಜಿ ನಮಗೆ. ಪಾಪ ಅವಳು ನಮ್ಮ ಎಲ್ಲರಿಗೂ ಹಂಚಿ ತೃಪ್ತಿ ಪಡಿಸೋಕೂ ಪ್ರಯತ್ನ ಮಾಡಿದಳು. ಇದೇ ದಿನಗಳಲ್ಲಿ ಅಮ್ಮ, ಸುಗ್ರೀವಾಜ್ಞೆ ಅಜ್ಜಿಯ ಮೇಲುಸ್ತುವಾರಿಲಿ ಏನೋ ಪಾಕ ಇಳಿಸೋ ಯತ್ನದಲ್ಲಿದ್ದರು. ನಮ್ಮ ಚಪಲೇಂದ್ರಿಯಕ್ಕೆ ಎಲ್ಲೆಯೇ ಇರಲಿಲ್ಲ. ಅಪ್ಪ, ಚಿಕ್ಕಪ್ಪ ಸಾಮಾನಿನ ಪಟ್ಟಿ ಹಿಡಿದು ಊರೆಲ್ಲಾ ತಿರುಗಿ ತಿಮ್ಮಣ್ಣರಾಗಿ ಕನಿಷ್ಠ ಪಕ್ಷ 108 ಐಟಮ್ಮುಗಳಾದ್ರೂ ಇರಬಹುದು. ಅವನ್ನ ಒದಗಿಸಿ ಉಸ್ಸಪ್ಪ ಅಂತ ಕೂತರು.

ತಿಂಡಿ ಪ್ರಿಯರಾದ ನಮ್ಮ ಕಪಿ ವೃಂದದ ಕಣ್ಣು ತಪ್ಪಿಸಿ, ದೃಷ್ಟಿ ಬೀಳ್ಬಾರದಲ್ಲ, ತಿಂಡಿ ತಯಾರಿ ಶುರು ಆಯಿತು. ಸಣ್ಣ ಇದ್ದಲು ಬೆಂಕಿಯ ಮೇಲೆ ಢಡೂತಿ ಬಾಂಡ್ಲಿ ಇಟ್ಟು ನಮ್ಮನ್ನೆಲ್ಲಾ ಹೊರಕ್ಕೆ ಅಟ್ಟಿ ಬಾಗಿಲು ನಮ್ಮ ಮುಖದ ಮೇಲೆ ಬಡಿದು ಚಿಲಕ ಭದ್ರ ಪಡಿಸಿದರು ಅಜ್ಜಿ. ಅವರಾಗೇ ಕರೆಯೋ ವರೆಗೂ ನಮಗೆ ಪ್ರವೇಶವಿಲ್ಲ ಎನ್ನೋ ಕಟ್ಟಾಜ್ಞೆ ಸುಗ್ರೀವಾಜ್ಞೆನೇ ಅಂದ್ಕೊಳ್ಳಿ, ಹೊರಡಿಸಿದರು. ಆಜ್ಞೆ ಮೀರಿದವರಿಗೆ ರಾತ್ರಿ ಊಟ ಮೈನಸ್ ! ಬಿರುಕು ಬಿಟ್ಟ ಬಾಗಿಲ ಸಂದೀಲಿ ಇಣುಕಿ ತಲೆ ಮೇಲೆ ಮೊಟ್ಟಿಸಿಕೊಂಡಿದ್ದೂ ಆಯಿತು ಇಷ್ಟು ಗುಟ್ಟಾಗಿ ಮಾಡ್ತಿರೋ ತಿಂಡಿ ಅಂದ್ರೆ ನಮ್ಮ

ಚಪಲ ಸಹಸ್ರಾರಕ್ಕೇರಿತು. ಕುತೂಹಲಕ್ಕೆ ಎಣೆಯೇ ಇಲ್ಲ ನೂರ್ಮಡಿ ಹೆಚ್ಚಾಯಿತು. ಆದ್ರೆ ? ವಿಧಿಯಿಲ್ಲ, ಒಬ್ಬರಿಗೊಬ್ಬರು ಸಮಾಧಾನ ಹೇಳಿಕೊಂಡು, ಅಂಗಳದಲ್ಲಿದ್ದ ಸೀಬೆಮರದ ಪೀಚು ಕಾಯಿಗಳನ್ನೂ ಬಿಡದೆ. ಹುಣಸೆ ಕಾಯಿಗಳಿಗೆ ಕಲ್ಲು ಹೊಡೆದು ಅದು ಹಿತ್ತಲ ಬಾಗಿಲಿಗೆ ಬಡಿದು ಒಳಗಿಂದ ಹೊರಟ ಅಜ್ಜಿಯ ಗುಟುರಿಗೆ ಹೆದರಿ, ವಾಸನೆ ಬಂದ ಕಿಟಕಿಯ ಕೆಳಗೆ ನಿಂತು ಅದನ್ನ ಆಸ್ವಾದಿಸುತ್ತಾ ಲೋಕಾತೀತ ಸ್ಥಿತಿ ತಲುಪಿದೆವು. ಆದ್ರೆ ಆ ವಾಸನೆ ನಮ್ಮನ್ನು ಏನು ಕೆರಳಿಸಿತೋ, ಒಂದು ಯೋಜನೆ ರೂಪುಗೊಂಡಿತು. ಡಿಸ್ಕವರೀಸ್ ಹಾಪ್ಪೆನ್ ಡ್ಯೂರಿಂಗ್ ಕ್ರೈಸಿಸ್.



ಕಿಟಕಿಯೋ ನಮಗೆ ಎಟುಕುವಂತಿರಲಿಲ್ಲ. ಈ ಕಾಲದ ಹಾಗೆ ಫ್ರೆಂಚ್ ವಿಂಡೋಸಾ ? ಚಿಕ್ಕ 15" ಬೈ 15" ಅದರ ವೈಭವಕ್ಕೆ ಎರಡು ಬಾಗಿಲುಗಳು ಬೇರೆ.. ಸರಿ. ದೊಡ್ಡ ಆಕಾರವಿದ್ದ ರಂಗ ನಾಲ್ಕು ಕಾಲ ಪ್ರಾಣಿ ತರ ಕೈ ಕಾಲು ಊರಿ ಚತುಷ್ಪಾದಿ, ಅವನ ಮೇಲೆ ಕಿಟ್ಟ ತ್ರಿಪಾದಿ {ಒಂದು ಕೈ ಮೇಲಿನವರ ಸಪೋರ್ಟಿಗೆ ಎತ್ತಿದ್ದರ ಪ್ರಯುಕ್ತ }, ಕಡೆಗೆ ಪುಟ್ಟದಾಗಿದ್ದ ರಾಮಿ ಇವರ ಮೇಲೆ ಹತ್ತಿನಿಂತ, ದ್ವಿಪದಿಯಾಗಿ. ನಮಗೇನು ಹಂಡಿ ತೋಡನ ಗೊತ್ತಿರಲಿಲ್ಲ, ಆದರೂ ಅಜ್ಜಿ ಹೇಳಿದ್ದ ಕೃಷ್ಣನ ಲೀಲೆಯ ಸಮಯೋಚಿತ ಅನುಕರಣೆ. ಒಬ್ಬರಾದ ಮೇಲೊಬ್ಬರಂತೆ ಎದ್ದೂ ಬಿದ್ದೂ ಶತ ಪ್ರಯಾಸ ಮಾಡಿ ನಾಸಿಕೇಂದ್ರಕ್ಕೆ ಸಾಂತ್ವನ ನೀಡಿದ್ದಾಯ್ತು ಹೆಚ್ಚು ನೀಡಿದ್ದು ರಾಮಿ. ಅವನ ಪ್ರಕಾರ ಕುದಿಯುತ್ತಿದ್ದ ಗೊಜ್ಜಿಗೆ ಒಂದು ಚಿಕ್ಕ ಪುಸ್ತಕದಿಂದ ಎರಡು ಮೂರು ತಿಳಿ ಹಳದಿಯ ಹಾಳೆಗಳನ್ನು ಹಾಕಿದ್ದಿದು ತಿಳಿಯಿತು. ಅಜ್ಜಿಯು 'ಹೇ, ಹುಷಾರು ಬಂಗಾರ ಹೆಚ್ಚಾಗ ಬಾರದು' ಅಂದದ್ದನ್ನು ಕೇಳಿಸಿಕೊಂಡ ನಮಗೆ ಅದರ ಕಾಲ್ಪನಿಕ ರುಚಿ ತಾರಕಕ್ಕೇರಿತು. ಅಷ್ಟರಲ್ಲಿ ಚಿಲಕ ತೆಗೆದ ಶಬ್ದ ! ಯಾವ ಮರಥಾನ್ ಪಂಥವೂ ಇಲ್ಲದೆ ಓಡಿದ್ವಿ ನೋಡಿ ಒಳಗೆ. ನಮ್ಮ ಚೇಷ್ಟೆ ತಿಳಿದಿದ್ದ ಅಜ್ಜಿ ಆ ಬಾಂಡ್ಲಿ ಹಾಗೂ ಮಗುಚೊ ಕೈನ ನೆನೆಯೋಕೆ ಹಾಕಿ ಬಿಟ್ಟಿದ್ದರು ! ನಾವಾದರೋ ನಾ ಮುಂದೋ ತಾನು ಮುಂದೋ ಅನ್ನೋಹಾಗೆ ಬಾಂಡ್ಲಿಗೇ ತಲೆ ಹಾಕಿ ನೆಕ್ಕೋ ಲೆಕ್ಕ ಹಾಕ್ಕೊಂಡಿದ್ವಿ ಆಗಾಗ ಅಮ್ಮ ಅಜ್ಜಿ ಕಣ್ಣು ತಪ್ಪಿಸಿ ನೈವೇದ್ಯಕ್ಕಲ್ಲದ ತಿನಿಸುಗಳನ್ನ ನಮ್ಮ ಕಡೆಗೆ ಗುಟ್ಟಾಗಿ ರವಾನಿಸ್ತಾ ಇದ್ದರು. ಇಂದು ಅವರು ಉಶ್ಶಪ್ಪಾ ಅಂತ ಕುಳಿತಲ್ಲೇ ತೂಕಡಿಸ್ತಾಯಿದ್ದರು.

ಇಷ್ಟಕ್ಕೂ ಆಪಾಟಿ ತಿಂಡಿ ಎಲ್ಲಿ ಬಚ್ಚಿಟ್ಟಿದ್ರೋ ನಮಗಂತೂ ವಾಸನೆಲೇ ತೃಪ್ತಿ. ಪಟ್ಟುಕೋಬೇಕಾಯಿತು ಇದಾದ ಕೆಲವೇ ದಿನಗಳಲ್ಲಿ ಅಕ್ಕ ಮುದ್ದಾದ ಹೆಣ್ಣು ಮಗುವನ್ನುಹೆಡೆದು ಹೊಟ್ಟೆ ಸಣ್ಣದಾಗಿ ಮಾಡ್ಕೊಂಡು ಆಸ್ಪತ್ರೆಯಿಂದ ಬಂದು ಚಿಕ್ಕ ಕೋಣೆ ಸೇರಿದಳು. ಅಲ್ಲಿಂದಲೂ ನಾವುಗಳು ಗಡೀಪಾರು. ಆಗಾಗ ಮಗುವನ್ನು ತಂದು ತೋರಿಸೋವ್ರು ಅಮ್ಮ. ಅಕ್ಕ ಅಲ್ಲಿ ಕೂತು ಗುಟ್ಟಾಗಿ ಆ ವಿಶಿಷ್ಟ ಭಕ್ಷ್ಯ ಮೇಯುತ್ತಿದ್ದಾಳೆಂದು ನಮ್ಮನಾಸಿಕೇಂದ್ರಿಯ ಸಿಗ್ನಲ್ ಕಳಿಸ್ತಾ ಇರ್ತಿತ್ತು. ನಮ್ಮಗಳ

ಮನಸ್ಸಿನ ಕಣ್ಣು ಅವಳ ಮೇಲೆ ಬೇಕಾದಷ್ಟು ದೃಷ್ಟಿ ಹಾಕಿತ್ತು.

ಒಂದು ದಿನ ಅವಳು ಹೊರಗೆ ಬರೋ ಯತ್ನ ಮಾಡ್ತಿದ್ದಾಗ ಅವಳು ಮತ್ತೆ ಊದಿದ್ದಳು, ಬಾಗಿಲು ಸಡಲಿಸಬೇಕಾಗ ಬಂತು. ನಾವೆಲ್ಲಾ ಸೇರಿ ತುಕ್ಕು ಹಿಡಿದಿದ್ದ ಹಿಂಜನ್ನೇ ಧ್ವಂಸ ಮಾಡಿ ಅವಳಿಗೆ ಬಿಡುಗಡೆ ಕೊಡಿಸಿ ಧನ್ಯರಾದೆವು. ಏನು ತಿಂದೆಯೇ ಇಷ್ಟು ಊದೋಕೆ ಅಂತ ಗೋಳಾಡಿಸಿದ್ದಕ್ಕೆ ಹಿಡಿಶಾಪ ಹಾಕಿದ್ಲು ಹಾಲಿಗೆ, ತುಪ್ಪದಲ್ಲಿ ಮುಳುಗಿಸಿದ ಊಟಕ್ಕೆ ಹಾಗೂ ಬಾಣಂತಿ ಲೇಹ್ಯಕ್ಕೆ.! ಈಗ ಗೊತ್ತಾಯಿತು ಆ ತಿಂಡಿಯ ಹೆಸರು 'ಬಾಣಂತಿ ಲೇಹ್ಯ' ಅಂತ ! ಯಪ್ಪೋ. ಅಂತ ನಮ್ಮಚಪಲ ಮಂಗಮಾಯವಾಯಿತು ಅದು ತಿಂಡಿ ಅಲ್ಲ, ಫುಟ್ ಬಾಲ್ ಪಂಪು ಅಂದುಕೊಂಡು ಶಾಂತವಾದೆವು, ಎಂದು ಲೀಲಾ ಮುಗಿಸಿದಾಗ ತುಟಿಕ್ ಪಿಟಕ್ ಎನ್ನದೆ ಕೇಳುತ್ತಿದ್ದ ನಮಗೆ ಯಾವುದೋ ಕಾಲದಲ್ಲಿ ಕಳೆದು ಹೋದ ಅನುಭವ !

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಹೋಗಲಿ ಬಿಡು ಅಪ್ಪಾ, ಮೇಷ್ಟ್ರು ಕೇಳಿದರೆ " ಅಪ್ಪಾ ಲೆಕ್ಕ ಮಾಡಿ ಕೊಡಲಿಲ್ಲ, ಅಮ್ಮಾ ಮಾಡಿದಳು ಅಂತ ಹೇಳಿಬಿಡ್ತೇನೆ. "

# ಹಳೆಯದಕ್ಕೆ ಡಿಮ್ಯಾಂಡಪ್ಪೋ

ಸಹನ ಪ್ರಸಾದ್

"ಮೋಮ್, ಬೇಗ ಅಡುಗೆ ಮನೆ ಮುಗ್ಸಿ ಜಾಗ ಖಾಲಿ ಮಾಡು, ನನಗೆ ರೀಲ್ಸ್ ಮಾಡಿ ಪೋಸ್ಟ್ ಮಾಡುವುದಿದೆ" ಮಗಳ ಮಾತು ಕೇಳಿ ಪ್ರಕೃತಿಯ ಕೈ ಚುರುಕಾಯಿತು. ಒಗ್ಗರಣೆ ಹಾಕಿ ಪಾತ್ರೆ ಮುಚ್ಚಿಟ್ಟು ಹೊರಬಂದಾಗ, ಯಾವುದೋ ಹಳೆ ಸೀರೆ ಉಟ್ಟು, ಕೂದಲು ಕೆದರಿಕೊಂಡು, ಕೆನ್ನೆಗೆ ಇಳಿದ ಕಣ್ಣಿಗೆ ಬಳಿದ ಕಾಡಿಗೆ, ಕರಿಮಣಿಗಳನ್ನು ಮಾತ್ರ ಪೋಣಿಸಿದ ಸರ, ಮುಖಕ್ಕೆ ಅಲ್ಲಲ್ಲಿ ಮೆತ್ತಿದ ಕಪ್ಪು ಬಣ್ಣ ನೋಡಿ, ಇವತ್ತು ಯಾವುದೋ ಬಡ ಗೃಹಿಣಿಯ ಪಾತ್ರ ಇರಬೇಕು, ಅದಕ್ಕೆ ಈ ಗೆಟಪ್ಪು, ಛೇ ಇದೇ ರೀತಿ ಇವಳ ಬದುಕು ಆಗದಿದ್ದರೆ ಸಾಕು ಎಂದು ನಿಟ್ಟುಸಿರು ಬಿಟ್ಟು ತನ್ನ ಕೋಣೆಗೆ ನಡೆದಳು.

ಮುದ್ದಿನ ಮಗಳು ಕಾವ್ಯ, ತನ್ನ ಹೆಸರು ಕೈರಾ ಎಂದು ಬದಲಾಯಿಸಿ, ದಿನ ನಿತ್ಯ ರೀಲ್ಸ್, ವೀಡಿಯೋಸ್ ಎಂತೆಲ್ಲ ಒದ್ದಾಡುವುದು ತಾಯಿ ಹೃದಯಕ್ಕೆ ಮೊದಮೊದಲು ಹೆಮ್ಮೆಯಾದರೂ, ಸಮಯ ಕಳೆದಂತೆ ಬೇಸರ ಮೂಡಿಸಲು ಶುರುವಾಯ್ತು. ಸದಾ ಹೊಸ ಕಂಟೆಂಟ್, ನೂತನ ವಿಡಿಯೋಗಳನ್ನು ಮಾಡುವ ಧಾವಂತ, ಒತ್ತಡದಲ್ಲಿ ಕೈರಾಳಿಗೆ ಊಟ, ನಿದ್ರೆ ಯಾವುದೂ ಬೇಡವಾಗಿತ್ತು, ಘಳಿಗೆಗೊಮ್ಮೆ ತಾನು ಹಾಕಿದ ವಿಡಿಯೋ ನೋಡುವುದು, ಎಷ್ಟು ಹಿಂಬಾಲಕರು, ಯಾರ್ಯಾರು ಏನು ಕಾಮೆಂಟ್ ಹಾಕಿದ್ದಾರೆ, ಈ ರೀತಿ ಯೋಚನೆಗಳೇ. ಮನೆಯ ಬೀರುವಿನ ತುಂಬಾ ಹೊಸ ವಿನ್ಯಾಸದ ಉಡುಪುಗಳು, ಮೇಕಪ್ ಸಾಮಾಗ್ರಿಗಳು. ಮೊದ ಮೊದಲು ಸಾಕಷ್ಟು ಚೆನ್ನಾಗಿಯೇ ನಡೆಯಿತು. ಸುಮಾರು ಹಿಂಬಾಲಕರೂ ಸಿಕ್ಕರು. ಆದರೆ ಇವಳಂತೆಯೇ ಬಹಳಷ್ಟು ಜನ ಅಪ್ಲೋಡ್ ಮಾಡಲು ಶುರು ಮಾಡಿ ಅಲ್ಲಿಯೂ ಟ್ರಾಫಿಕ್ ಜಾಮ್ ಆಗಿ, ಇವಳಿಗೆ ಬೇಡಿಕೆ ಇಳಿಯಿತು. ಅವರನ್ನು ಮೀರಿಸಬೇಕಾದರೆ ಹೊಸ ತರಹದ ಪ್ರಯೋಗ ಮಾಡಬೇಕು, ಇಲ್ಲವಾದರೆ ನಿಷೇದವಾಗಿರುವ ವಿಷಯಗಳ ಬಗ್ಗೆ ಮಾತನಾಡಬೇಕು.

ಅಶ್ಲೀಲವಾದದ್ದು, ಬೇರೆಯವರಿಗೆ ನೋವುಂಟು ಮಾಡುವ ವಿಷಯಗಳು, ನಮ್ಮ ಸಂಸ್ಕೃತಿಗೆ ಧಕ್ಕೆ ಆಗುವಂತಹ ಕಂಟೆಂಟ್ ಇರಕೂಡದು ಎಂದು ಷರತ್ತು ಹಾಕಿದೆ, ಅದಕ್ಕೆ ನನಗಿನ್ನೂ ಯಶಸ್ಸು ಸಿಕ್ಕಿಲ್ಲ ಎಂದು ಕೈರಾ ತಾಯಿಯ ಮೇಲೆ ಉರಿ ಕಾರಿದರೂ ಪ್ರಕೃತಿ ತನ್ನ ನಿಲುವು ಬದಲಾಯಿಸಲಿಲ್ಲ. ಹೀಗಾಗಿ ಬಡ ಗೃಹಿಣಿ, ಮಧ್ಯಮ ವರ್ಗದ ಮಹಿಳೆ, ಗಂಡನ ಮನೆಯವರಿಂದ ಶೋಷಣೆಗೆ ಒಳಗಾಗಿರುವ ಹೆಣ್ಣು, ಈ ರೀತಿ ಟಾಪಿಕ್ ಬಗ್ಗೆ ವಿಡಿಯೋ ಮಾಡಿ ಕೊಂಚ ಖ್ಯಾತಿ ಪಡೆಯುವ ಆಸೆ ಕೈರಾಳದ್ದು.

ಮೊಬೈಲ್ ನೋಡುತ್ತಾ ಕುಳಿತ ಪ್ರಕೃತಿಗೆ ಬೇಸರ ಮೂಡಿ ಎದ್ದಳು. ಎಷ್ಟು ಹೊತ್ತಾದರೂ ಮುಗಿದಿಲ್ಲವಲ್ಲ ಎಂದು ಅಡುಗೆ ಮನೆಗೆ ಇಣುಕಿದಾಗ ಕಂಡದ್ದು, ಉಪ್ಪಿನಕಾಯಿ ಬಾಟಲಿಯ ಮುಚ್ಚಳವನ್ನು ತೆಗೆಯುವುದು ಹೇಗೆ ಎಂದು ವಿಡಿಯೋ ಮಾಡುತ್ತಿರುವ ಕೈರಾ. ಮೊದಲೇ ಬಾಟಲಿನ ಮುಚ್ಚಳ ಸಡಿಲಗೊಳಿಸಿದರಿಂದ, ಅದನ್ನು ಕ್ಯಾಮೆರಾದ ಎದುರು ಸೆರಗಿನಲ್ಲಿ ಹಿಡಿದು ತಿರುಗಿಸಿದಾಗ, ಬಾಟಲಿ ಕೈಯಿಂದ ಜಾರಿ ಒಡೆದು, ಅಡುಗೆ ಮನೆಯಲ್ಲಿ ಎಲ್ಲೆಡೆ ಉಪ್ಪಿನಕಾಯಿಯ ಹೋಳು, ಅದರಲ್ಲಿದ್ದ ಎಣ್ಣೆಯ ಕಲೆಗಳು. ಇದರಿಂದ ಧೈರ್ಯಗುಂದದೆ ಸ್ಕ್ರಿಪ್ಟ್ ಬದಲಿಸಿ, ಆ ಬಡ ಗೃಹಿಣಿ ಅಳುತ್ತಾ "ಅಯ್ಯೋ, ಇದ್ದದ್ದೇ ಒಂದು ಬಾಟಲು, ಅದನ್ನು ಒಡೆದು ಹೋಯಿತು, ಗಂಡನಿಗೆ ಊಟಕ್ಕೆ ಗಂಜಿ, ಅದಕ್ಕೆ ನೆಂಚಿಕೊಳ್ಳಲು ಏನೂ ಇಲ್ಲವಲ್ಲ" ಎಂದು ಗೋಳು ಹೇಳುತ್ತಾ

ಇರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗುತ್ತಿತ್ತು. ಆ ಕ್ಯಾಮೆರಾಗೆ ತೆತ್ತ ಬೆಲೆಗೆ ಒಂದೆರಡು ಭಾರಿ ಸೀರೆ ಕೊಳ್ಳಬಹುದಿತ್ತು. ಒಂದು ಸ್ಟಾಂಡ್ ಮೇಲೆ ನಿಂತ ಆ ಕಾಮೆರಾಗೆ ಅಷ್ಟೊಂದು ಬೆಲೆಯೇ ಎಂದು ಸಿಟ್ಟಿನಲ್ಲಿ ಇರುತ್ತಿದ್ದ ಅವಳಿಗೆ ತನ್ನ ಅಡುಗೆ ಮನೆಯ ಅವಸ್ಥೆ ಕಂಡು ಪಿತ್ತ ನೆತ್ತಿಗೇರಿತು. "ಬಾಟಲಿ ಮುಚ್ಚಳ ತೆಗೆಯುವುದು ಹೇಳಿಕೊಡಬೇಕಾ ? ಅದರ ಬದಲು ಯಾವುದಾದರೂ ಅಡುಗೆ ಬಗ್ಗೆ ತಿಳಿಸಬಹುದಲ್ವಾ?" ಪ್ರಕೃತಿಯ ಮಾತಿಗೆ ಕೈರಾ ನಕ್ಕಳು." ಮೋಮ್, ಮುಕ್ಕಾಲು ರೀಲ್ಸ್, ಶಾರ್ಟ್ಸ್ ಅಡುಗೆಯದೇ ಇರುತ್ತದೆ. ಹೊಸತು ಏನಾದರೂ ತೋರಿಸಿದರೆ ಜನ ನೋಡುವ ಸಾಧ್ಯತೆ ಹೆಚ್ಚು. ಈಗಿನ ಕಾಲದವರಿಗೆ ಬಾಟಲಿ ಮುಚ್ಚಳ ತೆಗೆಯುವುದು ಗೊತ್ತಿರಲ್ಲ. ಅಮ್ಮ ಅಪ್ಪನನ್ನು ಕೇಳಲು ಅಡ್ಡ ಬರುತ್ತೆ. ಆನ್ಲೈನ್ ಆದರೆ ಯಾರ ಹಂಗಿಲ್ಲದೆ ನೋಡಬಹುದು!" ಹತ್ತಿರ ಬಂದ ಕೈರಾ ಮುದ್ದುಗರೆದಳು." ಸಾರಿ, ಬಾಟಲಿ ಮುಚ್ಚಳ ಲೂಸ್ ಆಗಿದ್ದು ಕೈ ಜಾರಿ ರಂಪ ಆಯ್ತು. ತಕ್ಷಣವೇ ಸ್ಕ್ರಿಪ್ಟ್ ಬದಲಾಯಿಸಿ ಬೇರೆ ವಿಡಿಯೋ ಮಾಡಿದೆ." ಪ್ರಕೃತಿ ಹುಬ್ಬು ಗಂಟಿಕ್ಕಿದಳು. "ಬಾಟಲಿ ಮುಚ್ಚಳ ಬಡ ಹೆಂಗಸು ತೆರೆದು ತೋರಿಸಬೇಕಾ? ನಿನ್ನ ಸೀರೆ ನೋಡಿದರೆ ಬೇಸರ ಆಗುತ್ತೆ. ಎಲ್ಲಿ ಸಿಕ್ತು?" ಕೈರಾ ಅಮ್ಮನ ಕೆನ್ನೆ ತಟ್ಟಿದಳು." ಬಡ ಹೆಂಗಸು ತೋರಿಸಿದರೆ ಎಲ್ಲರೂ ನೋಡ್ತಾರೆ. ಸಿರಿವಂತ ಹೆಣ್ಣು ಮಕ್ಕಳನ್ನು ನೋಡಿ ಸಾಕಾಗಿದೆ ಎಲ್ಲರಿಗೂ. ಹಾ, ಸೀರೆ ಬಾಡಿಗೆಯದು. ಈ ರೀತಿಯ ಸೀರೆಗಳಿಗೆ ಭಾರಿ ಡಿಮ್ಯಾಂಡ್". ಕೈ ಬೀಸಿ ನಡೆದಳು ಕೈರಾ. "ಖ್ಯಾತ ಯೌಟ್ಯುಬರ್ ಹೆಣ್ಣಿನ ತಾಯಿ ಎಂದ ಮೇಲೆ ಅಡುಗೆ ಮನೆ ಸ್ವಚ್ಛ ಮಾಡಲು ಬೇಸರ ಮಾಡಿಕೊಳ್ಳಬೇಡ!" ಅವಡುಗಚ್ಚಿ ಸಿಟ್ಟು ತಡೆದಳು ಪ್ರಕೃತಿ.




ದುರದೃಷ್ಟವಶಾತ್, ಬಡ ಹೆಂಗಸಿನ ವಿಡಿಯೋ ಹಿಟ್ ಆಗಲಿಲ್ಲ. "ದಿನಕ್ಕೊಂದು ದಿರಿಸು" ಎಂಬ ಸೀರೀಸ್ ಶುರು ಮಾಡುವೆ ಎಂದು ಪ್ರತಿದಿನ ಒಂದೊಂದು ರೀತಿಯ ಬಟ್ಟೆ ಧರಿಸಿ, ವಿಡಿಯೋ ಮಾಡಲು ಹೋಗಿ, ಚಿತ್ರ ವಿಚಿತ್ರ ಬಟ್ಟೆಗಳು ಮನೆಗೆ ಬಂದವು. ಮಗಳ ಅವತಾರ ನೋಡಲು ಆಗದೆ ಪ್ರಕೃತಿ ತನ್ನ ಸಾಮಾಜಿಕ ಜಾಲತಾಣದ ಚಟುವಟಿಕೆ ಕಡಿಮೆ ಮಾಡಿದಳು. "ಲೈಕ್ ಭಿಕ್ಷೆಗೆ" ಮಗಳು ಬೇಡಿದಾಗ ಮನಸ್ಸಿಲ್ಲದ ಮನಸ್ಸಿನಿಂದ ಲೈಕ್ ಹಾಕಿದಳು. ಲೇಡೀಸ್ ಗ್ರೂಪ್ ಅಲ್ಲಿ ಲಿಂಕ್ ಹಾಕಿ, ಎಲ್ಲರೂ ಲೈಕ್ ಒತ್ತಿ ಎಂದಾಗ ಒಬ್ಬರೂ ಉತ್ತರಿಸಲಿಲ್ಲ. ಕೆಲವರು ತನ್ನನ್ನು ಬೆಂಬಲಿಸುವುದು ನಿಲ್ಲಿಸಿದ್ದು ಅವಳ ಗಮನಕ್ಕೆ ಬಂತು. ಎದುರಿಗೆ ಸಿಕ್ಕಾಗ ಅವರ ವ್ಯಂಗ್ಯ ನಗು ನೋಡಿ ಮಗಳ ಮೇಲೆ ಸಿಟ್ಟು ಉಕ್ಕಿತು,

ಆದರೂ ಹೆತ್ತವರಿಗೆ ಹೆಗ್ಗಣ ಮುದ್ದಲ್ಲವೇ?

"ಪ್ರತಿದಿನ ಆರೋಗ್ಯ" ಎಂಬ ಸರಣಿ ಶುರುವಾಗಿ ಅದು ಸಹ ಫ್ಲಾಪ್ ಆಯಿತು. ಏನೇನೋ ಸೊಪ್ಪು, ಸದೆ, ತರಕಾರಿ ಹಾಕಿದ ಜ್ಯೂಸು ಕುಡಿದು ಕೈರಾಳಿಗೆ ವಾಂತಿ, ಭೇದಿ ಶುರುವಾಯಿತು. ಸಧ್ಯ, ನನ್ನನ್ನು ಕುಡಿ ಎನ್ನಲಿಲ್ಲಎಂದು ಖುಷಿ ಪಟ್ಟ ಪ್ರಕೃತಿಗೆ ಮಾರನೆಯ ದಿನ, ಮಗಳ ಅಕೌಂಟಿನಲ್ಲಿ ತನ್ನ ಎಳೆ ವಯಸ್ಸಿನ ಪಟಗಳು ಕಂಡು ಅಚ್ಚರಿಯಾಯಿತು. ಜತೆಗೆ ಅದಕ್ಕೆ ಬಂದ ಅಪಾರ ಮೆಚ್ಚುಗೆಗಳು, ವೀವ್ಸ್ ನೋಡಿ ಹುಬ್ಬೇರಿತು. "ಅಮ್ಮ!" ಎಂದು ಕೂಗುತ್ತ ಬಂದ ಮಗಳನ್ನು ನೋಡಿ ಹುಬ್ಬುಗಂಟಿಕ್ಕಿದಳು. "ಸಧ್ಯ ಮೋಮ್ ಅನ್ನದೆ ಅಮ್ಮ ಎಂದು ಕರೆದೆಯಲ್ಲ, ಎಲ್ಲಿ ಸಿಕ್ಕಿತು ನನ್ನ ಹಳೆಯ ಪಟಗಳು?" ಕೈರಾ ನಕ್ಕಳು." ಅಟ್ಟದಿಂದ ಇಳಿಸಿದೆ. ನನ್ನ ಅಮ್ಮ ಎನ್ನುವ ಸರಣಿ ವೀಡಿಯೋಸ್ ಶುರು ಮಾಡಿರುವೆ. ನಿನ್ನ ಹಳೆ ಕಾಲದ ಲಂಗ, ಜಂಪರು, ಓಲೆ, ಸರ, ಬಳೆಗಳು ಎಲ್ಲರ ಮೆಚ್ಚುಗೆಗಳಿಸಿವೆ. ನಿನ್ನ ಬಾಲ್ಯ, ಯೌವನದ ಎಲ್ಲ ಪಟಗಳನ್ನು ವಿಡಿಯೋ ಮಾಡಿ ಹಾಕುವೆ!"

ಮಗಳು ದೊಡ್ಡ ಕೆಲಸ ಮಾಡಿ ಕೈ ತುಂಬಾ ಸಂಪಾದಿಸುತ್ತಾಳೆ ಎಂದು ಆಸೆ ಹೊತ್ತಿದ್ದ ಪ್ರಕೃತಿ ಇಂದು ಪರಮ ಸುಖಿ. ಮೂರು ತಿಂಗಳಲ್ಲಿ, ಕೈರಾಳ ಪ್ರಭಾವ ಹೆಚ್ಚಿದೆ. ಪ್ರಕೃತಿಗೆ ಸಹ ಬೇಡಿಕೆ ಉಂಟಾಗಿದೆ. ಜತೆಗೆ ಹಳೆ ಕಾಲದ ಆಭರಣಗಳನ್ನು ಮಾಡುವ ಸಣ್ಣ ಕೈಗಾರಿಕಾ ಘಟಕ ಕೂಡ ಶುರುವಾಗಿದೆ. "ನನ್ನ ಅಮ್ಮ" ಈಗ "ಎಲ್ಲರ ಅಮ್ಮ" ಆಗಿ ಖ್ಯಾತನಾಮಳಾಗಿದ್ದಾಳೆ. ಅವಳ ಉಡುಪುಗಳು, ಅವಳು ಬೆಳೆದ ಪರಿಸರ, ಅವಳ ಅಜ್ಜಿ, ಅತ್ತೆ, ಅಕ್ಕಂದಿರ ಪಟಗಳು, ಯಾವುದೇ ಮೇಕಪ್ ಇಲ್ಲದೆ ಚಂದ ಕಾಣುವ ಪರಿ ಎಲ್ಲರಿಗೂ ಮೆಚ್ಚುಗೆಯಾಗಿದೆ.

■



# ಲೇಟ್ ಲತೀಫ್ ವರ್ಸಸ್ ಅರ್ಜೆಂಟ್ ಮೇಷ್ಟ್ರು !

**ಚಿತ್ರಾ ರಾಮಚಂದ್ರನ್**

ಎಲ್ಲರಿಗೂ ಇರುವುದು ದಿನಕ್ಕೆ 24 ಗಂಟೆಗಳ ಕಾಲ ಅಷ್ಟೇ. ಅವರವರ ಸಮಯವನ್ನು ಹೇಗೆ ಪಾಲಿಸಬೇಕೆಂಬುದು ಅವರವರಿಗೆ ಬಿಟ್ಟಿದ್ದು. ನಿತ್ಯ ಜೀವನದ ಪ್ರತಿಯೊಂದು ಘಟನೆಗೂ ಸಮಯ ನಿಗದಿಪಡಿಸಿಕೊಂಡು ಬದುಕುತ್ತಾರೆ ಕೆಲವು ವ್ಯಕ್ತಿಗಳು. ಇವರು ಹತ್ತು ಗಂಟೆಗೆ ಸ್ನೇಹಿತರನ್ನು ಭೇಟಿಯಾಗುವುದಾಗಿ ಮಾತು ಕೊಟ್ಟಿದ್ದರೆ, 'ಚುಕ್ಕಿಯ ಮೇಲೆ' (ಆನ್ ಡಾಟ್) ಹತ್ತು ಗಂಟೆಗೆ ಸರಿಯಾಗಿ ಸ್ನೇಹಿತರ ಮನೆ ಗಡಿಯಾರ ಮತ್ತು ಕರೆಗಂಟೆ ಒಟ್ಟಿಗೆ ಸೇರಿ ಯುಗಳ ಗೀತೆ ಹಾಡಿ ಸ್ನೇಹಿತರು ನಿರೀಕ್ಷಿಸುತ್ತಿದ್ದ 'ಪಾರ್ಟಿ' ಹಾಜರ್ ಎಂಬುದನ್ನು ಸೂಚಿಸುತ್ತವೆ. ಈ ಟ್ರ್ಯಾಫಿಕ್ ಯುಗದಲ್ಲೂ ಇಂತಹ ಪವಾಡ ಮಾಡುವವರನ್ನು ಶಿಸ್ತಿನ ಸಿಪಾಯಿ ಎನ್ನಬಹುದೇ ?

ಪ್ರತಿ ದಿನವೂ ಶಾಲೆಗೆ ತಡವಾಗಿ ಹೋಗಿ ಶಿಕ್ಷೆಗೆ ಒಳಗಾಗುವ ಹುಡುಗ, ಪಾರ್ಟಿ ಮುಗಿಯುತ್ತಿರುವ ಸಮಯಕ್ಕೆ ತಲುಪಿ, ಇತರರ ಸಮಯವನ್ನು ಹಾಳುಮಾಡುತ್ತಿರುವ ಪರಿವೆಯೇ ಇಲ್ಲದೆ ಮಾತನಾಡುತ್ತ ನಿಧಾನವಾಗಿ ತಿನ್ನುತ್ತಲೇ ಇರುವ ಯುವಕ, ಸಿನೆಮಾ ಶುರುವಾದ ಮೇಲೆ, ಕತ್ತಲೆಯಲ್ಲಿ ಅವರಿವರ ಕಾಲುಗಳನ್ನು ತುಳಿಯುತ್ತ, ಎಲ್ಲರ ಕೈಯಲ್ಲಿ 'ಪಿಚ್' ಎನ್ನಿಸಿಕೊಂಡು ತನ್ನ ಸೀಟ್ ಹುಡುಕುವ ಗಣ್ಯ ವ್ಯಕ್ತಿ ! ನಿರ್ದಿಷ್ಟ ಸಮಯಕ್ಕೆ ಹಾಜರ್ ಆಗಬೇಕಾದ ಸ್ಥಳಗಳಿಗೆ ಬಹಳ ತಡವಾಗಿ ಹೋಗುವುದನ್ನು ರೂಢಿಸಿಕೊಂಡಿರುವ ಇಂತಹ ವ್ಯಕ್ತಿಗಳನ್ನು 'ಲೇಟ್ ಲತೀಫ್' ಎಂದು ಕರೆಯುವುದು ತಾತ ಮುತ್ತಾತನ ಕಾಲದಿಂದಲೂ ಬಂದಿರುವ ಪದ್ಧತಿ.

ಲತೀಫ್ ಎಂಬಾತ ಯಾರು ? ಅವನ ಹೆಸರಿಗೆ 'ಲೇಟ್' ಎಂಬ ಬಿರುದನ್ನು ಯಾರು, ಏಕೆ ಅಂಟಿಸಿರಬಹುದು ಎಂಬ ತಲೆ ಕೊರೆಯುವ ಪ್ರಶ್ನೆಗೆ ಯಾವ ಮನುಷ್ಯ ಪ್ರಾಣಿಯಿಂದಲೂ ಸೂಕ್ತ ಉತ್ತರ ಸಿಕ್ಕಲಿಲ್ಲ. ಗೂಗಲ್ ಗುರು, ಪರಮ ಗುರು ಮೆಟಾ ಏ ಐ ಬಳಿ ಮೊರೆಹೋದರೂ ಯಾವ ಪ್ರಯೋಜನವೂ ಇಲ್ಲ ! ಸರಿ ! ಈ ಸಂಶೋಧನೆಯ ಗೋಜಿಗೆಲ್ಲ ನಾವು ಹೋಗುವುದು ಬೇಡ ಬಿಡಿ.

ಶಿಸ್ತಿನ ಸಿಪಾಯಿ, ಲೇಟ್ ಲತೀಫ್ ನಂತರ, ಅರ್ಜಂಟ್ ಮೇಷ್ಟ್ರು ಎಂದು ನಮ್ಮ ಮನೆಯವರೆಲ್ಲ ನಾಮಕರಣ ಮಾಡಿರುವ ಮೂರನೆಯ ಮನುಷ್ಯ ವರ್ಗ ಒಂದು ಇದೆ ! ಒಂದು ಸಮಾರಂಭಕ್ಕೆ ಹೋಗುವುದಿದ್ದರೆ "ಬೇಗ ಹೊರಡು ! ಬೇಗ ಬೇಗ !" ಎಂದು ಮನೆಯವರನ್ನು ತ್ವರಿತಪಡಿಸುವುದು. ಅಲ್ಲಿಗೆ ಹೋಗಿ ಸಮಾರಂಭ ಮುಗಿಯುವ ಮುನ್ನವೇ "ಹೋಗೋಣ ಹೊರಡಿ !" ಎಂದು ಚಡಪಡಿಸುವವರನ್ನು ಏನನ್ನಬೇಕು ?

ಮೃಗಾಲಯದಲ್ಲಿಯ ಬೋನಿನಲ್ಲಿ ತುಂಬಾ ತುರ್ತಿನ ಕೆಲಸವಿರುವಂತೆ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುವ ಕತ್ತೆ ಕಿರುಬನನ್ನು ನಾವೆಲ್ಲ 'ಅರ್ಜಂಟ್ ಮೇಷ್ಟ್ರು' ಎಂದು ಕರೆಯುತ್ತಿದ್ದೆವು. ಕಾಲಿನಮೇಲೆ ಗಂಜಿ ಸುರಿದುಕೊಂಡ ಹಾಗೆ ನಿಂತಲ್ಲಿ ನಿಲ್ಲದೇ ಎಲ್ಲ ಸಮಯದಲ್ಲೂ ಚಡಪಡಿಸುವ ವ್ಯಕ್ತಿಗಳಿಗೆ 'ಅರ್ಜಂಟ್ ಮೇಷ್ಟ್ರು' ಎಂಬ ಅಡ್ಡ ಹೆಸರು ಬಹಳ ಸೂಕ್ತ ಅನ್ನಿಸುತ್ತದೆಯಲ್ಲವೇ !

ಪೀಠಿಕೆ ಹೆಚ್ಚಾಯಿತೇ ? ಇಗೋ ! ಈಗಲೇ ಕಥೆಗೆ ಹೋಗುವ ಬನ್ನಿ.

ಕೃಷ್ಣಸ್ವಾಮಿ ಬೆಂಗಳೂರು ವಾಸಿ. ಒಂದು ತುರ್ತಿನ ಕೆಲಸದ ಸಲುವಾಗಿ ತನ್ನ ಧರ್ಮಪತ್ನಿ ರಾಧಮ್ಮನೊಂದಿಗೆ ಚೆನ್ನೈಗೆ ಹೋಗಿ ಬರುವುದಿತ್ತು. ವಯಸ್ಸಾದ

ತಾಯಿಯವರನ್ನು ಮನೆಯಲ್ಲಿ ಬಿಟ್ಟು ಬರಬೇಕಿದ್ದ ಕಾರಣ ಒಂದೇ ದಿನದಲ್ಲಿ ಕೆಲಸ ಮುಗಿಸಿಕೊಂಡು ವಾಪಸಾಗಬೇಕೆಂದು ತೀರ್ಮಾನಿಸಿದ್ದರು.

ಚೆನ್ನೈಯಲ್ಲಿ ಅವರುಗಳು ಅಂದುಕೊಂಡಿದ್ದಕ್ಕಿಂತ ಬೇಗನೆ ಕೆಲಸ ಮುಗಿದಿತ್ತು. ಅವರು ತಂಗಿದ್ದ ಪಾಮ್ಗ್ರೋವ್ ಹೋಟೆಲಿನಲ್ಲಿ ಊಟ ಮುಗಿಸಿ, ಚೆಕ್ ಔಟ್ ಆಗಿ, ನೇರವಾಗಿ ಚೆನ್ನೈ ಸೆಂಟ್ರಲ್ ಸ್ಟೇಷನ್ಗೆ ಹೋಗಿಬಿಡಬೇಕು ಎಂಬುದು ಕೃಷ್ಣಸ್ವಾಮಿ ಅವರ ತೀರ್ಮಾನ.

"ರಾತ್ರಿ ಟ್ರೈನ್ಗೆ ಈಗಲಿಂದ ಸ್ಟೇಷನ್ಗೆ ಹೋಗಿ ಕೂರುವುದು ಏಕೆ ? ಇನ್ನೂ ತುಂಬಾ ಟೈಮ್ ಇದೆಯಲ್ಲ ! ಶ್ರೀಪತಿಯವರ ಮನೆಗೆ ಹೋಗಿ ಒಂದು ಹಲೋ ಹೇಳಿ ಹೊರಡೋಣ ರೀ !" ಎಂದು ಕೇಳಿಕೊಂಡರು ರಾಧಮ್ಮ.

ಶ್ರೀಪತಿ ಎಂಬ ಹೆಸರನ್ನು ಕೇಳಿದೊಡನೆ, ರಾಧಮ್ಮನ ಕೋರಿಕೆಯನ್ನು ಸಂಪೂರ್ಣವಾಗಿ ಕೇಳಿಸಿಕೊಳ್ಳುವ ಮೊದಲೇ ತಲೆಯನ್ನು ಅಡ್ಡಡ್ಡ ಆಡಿಸಿದರು ಕೃಷ್ಣಸ್ವಾಮಿ.




"ಅದೆಲ್ಲ ಯಾರ ಮನೆಗೂ ಹೋಗೋದು ಬೇಡ. ಅಮ್ಮನನ್ನು ಬಿಟ್ಟು ಬಂದಿದ್ದೀವಿ ಜ್ಞಾಪಕ ಇದೆ ತಾನೇ ? ಸುಮ್ಮನೆ ಬಂದ ಹಾಗೆ ಹೊರಟುಬಿಡೋಣ. ಸ್ಟೇಷನ್ನಲ್ಲೇ ಕಾದಿದ್ದು ರಾತ್ರಿ ಒಂಬತ್ತು ಗಂಟೆಗೆ ಟ್ರೈನ್ ಹತ್ತಿಬಿಡೋಣ."

ರಾಧಮ್ಮನಿಗೆ ಗಂಡನ ಮಾತು ಒಪ್ಪಿಗೆಯಾಗಲಿಲ್ಲ.

"ಇಷ್ಟು ದೂರ ಬಂದು ಶ್ರೀಪತಿಯವರನ್ನು ಬೇಟಿಯಾಗದೆ ಹೋಗುವುದು ಸರಿಯಿಲ್ಲ ರೀ. ಅವರ ಮಗಳನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡಿದ್ದೀವಿ ! ಜ್ಞಾಪಕ ಇದೆಯೋ ಇಲ್ಲವೋ ? ಬೀಗರ ಮನೆಗೆ ಹೋಗದಿದ್ದರೆ ಚೆನ್ನಾಗಿರಲ್ಲ. ಅಷ್ಟೇ ನಾನು ಹೇಳೋದು."

"ನಿನಗೆ ಬೀಗರುಪಚಾರ ಮಾಡಿಸಿಕೊಳ್ಳಬೇಕೆಂಬ ಆಸೆ ಬಂದುಬಿಟ್ಟಿದೆ ಅನ್ನಿಸತ್ತೆ . ನೋಡಿದೆವಲ್ಲ ಮದುವೆಯಲ್ಲಿ ಅವರುಗಳು ಮಾಡಿದ ಉಪಚಾರ. ಮಗಳನ್ನ ಪಾರ್ಲರ್ಗೆ ಕಳಿಸಿದ್ದಲ್ಲದೆ, ಬೀಗತ್ತಿಯೂ ಅಲ್ಲೇ ಹೋಗಿ ಕೂತುಬಿಟ್ಟಿದ್ದರಲ್ಲ. ಆ ಕಾರಣದಿಂದ ಶಾಸ್ತ್ರದ ವೇಳೆಯನ್ನ ಮುಂದಕ್ಕೆ ಹಾಕ ಬೇಕಾಯಿತು. ಆದರೂ ಏನೂ ನಡೆಯಲಿಲ್ಲವೇನೋ ಎಂಬಂತೆ ಅದೆಷ್ಟು ಕೂಲಾಗಿ ಇದ್ದರು. ಅವರ ಮನೆಯಲ್ಲಿ ಯಾರಿಗೂ ಟೈಮ್ ಸೆನ್ಸ್ ಇಲ್ಲ. ಎಲ್ಲ ಲೇಟ್ ಲತೀಫ್ಗಳು."

"ನಿಮ್ಮ ಹಾಗೆ ಎಲ್ಲರೂ ಟೆನ್ಷನ್ ಪಾರ್ಟಿಯಾಗಿರಬೇಕೇನು ? ಪಾಪ ಸುಮಿ ! ಅಜ್ಜಿಯನ್ನು ಮಕುಂದ್ ಮತ್ತು ನಾನು ನೋಡಿಕೊಳ್ಳುತ್ತೇವೆ. ನೀವು ನಿರಾಳವಾಗಿ ಹೋಗಿ ಬನ್ನಿ ಎಂದಿದ್ದಳು. ಅವಳ ಮುಖಕ್ಕೆ ಹೊಡೆದ ಹಾಗೆ ನಿಮ್ಮ ಮನೆಗೆ ಹೋಗಲಿಲ್ಲ ಅಂತ ಹೇಳೋದೇ ?"

ಸೊಸೆಯ ಮುಖ ಕಣ್ಣಮುಂದೆ ಬಂದಂತಾಗಿ ಕೃಷ್ಣಸ್ವಾಮಿಯವರ ಮನಸ್ಸು ಸ್ವಲ್ಪ ಮೃದುವಾಯಿತೇನೋ !

"ಸರಿ ! ಹೋಗೋಣ ! ಆದರೆ ನಾನು ಹೊರಡು ಎಂದಾಕ್ಷಣ ನೀನು ಹೊರಟುಬಿಡಬೇಕು. ಅದೂ ಇದೂ ಮಾತಾಡಿಕೊಂಡು ನಿಲ್ಲಬಾರದು."

ಗಂಡನ ಶರತ್ತನ್ನು ಒಪ್ಪಿಕೊಂಡು ಕೋಲೆಬಸವನಂತೆ ತಲೆ ತೂಗಿದ ಕಾರಣ ರಾಧಮ್ಮಳ ಕೋರಿಕೆ ಮಂಜೂರಾಯಿತು ! ಹೂವು ಹಣ್ಣು ಕೊಂಡುಕೊಂಡು ದಂಪತಿಗಳು ಶ್ರೀಪತಿಯವರ ಮನೆ ತಲುಪಿದರು.

"ಇದೇನು ಬೀಗರೇ ಹೀಗೆ ಮಾಡಿಬಿಟ್ಟಿರಿ ? ಊಟವೂ ಮಾಡಿಯಾಯಿತು ಎನ್ನುತ್ತಿರುವಿರಿ ! ನಮ್ಮ ಮನೆಗೆ ನೇರವಾಗಿ ಬಂದುಬಿಡಬೇಕಿತ್ತು. ನಮ್ಮ ಕಾರಲ್ಲೇ ಹೋಗಿ ನಿಮ್ಮ ಕೆಲಸಗಳನ್ನ ಆರಾಮವಾಗಿ ಮುಗಿಸಿಕೊಂಡು ಬರಬಹುದಿತ್ತು."

'ಅಬ್ಬ ! ಇವರು ಆರಾಮ ಎಂದರೆ ಮನಸ್ಸು ಧಿಗ್ ಎನ್ನುತ್ತದೆ !' ಎಂದು ಮನಸ್ಸಲ್ಲೇ ಹೇಳಿಕೊಂಡರೂ, ಬಿಸಿ ಬಿಸಿ ಕಾಫಿ ಹೀರುತ್ತ ಹೀ ಹೀ ಎಂದು ಹಲ್ಲು ಕಿರಿಯುತ್ತ ಉಪಚಾರದ ಮಾತುಗಳನ್ನು ಆಡಿದರು ಕೃಷ್ಣಸ್ವಾಮಿ.

"ಇನ್ನು ನಾವು ಹೊರಡುತ್ತೇವೆ ! ವಯಸ್ಸಾಯಿತು ನೋಡಿ ! ಓಡುತ್ತಾ ಹೋಗಿ ಟ್ರೈನ್ ಹತ್ತಲು ಆಗುವುದಿಲ್ಲ. ಈಗ ಹೊರಟರೆ ಸರಿಯಾಗಿರುತ್ತದೆ."

"ಎಲ್ಲಾದರೂ ಉಂಟೆ ? ಒಂದು ಹೊತ್ತಾದರೂ ನಮ್ಮ ಮನೆಯಲ್ಲಿ ಒಂದು ತುತ್ತು ತಿಂದೇ ಹೋಗಬೇಕು. ನಾನೇ ನಿಮ್ಮನ್ನು ಸ್ಟೇಷನ್ನಲ್ಲಿ ಡ್ರಾಪ್ ಮಾಡಿ ಬರುವೆ."

"ಅಯ್ಯೋ! ನಿಮಗ್ಯಾಕೆ ತೊಂದರೆ? ಇಡೀ ದಿನಕ್ಕೆ ಕ್ಯಾಬ್ ಬುಕ್ ಮಾಡಿಕೊಂಡಿದ್ದೀವಿ. ಇನ್ನು ಹೊರಡುತ್ತೇವೆ."

"ಹಾಗೆಲ್ಲ ಹೇಳಬೇಡಿ ! ಹತ್ತಿರದ ಸಂಬಂಧಿಗಳಾಗಿ ಬಿಟ್ಟಿದ್ದೀವಿ ! ಕ್ಯಾಬ್ ಕಳಿಸಿಬಿಡಿ. ಎಂಟು ಗಂಟೆಗೆ ರಾತ್ರಿ ಊಟ ಮಾಡಿಕೊಂಡು ಹೊರಟರೆ ಸರಿಯಾದ ಸಮಯಕ್ಕೆ ಟ್ರೈನ್ ಹತ್ತಿಬಿಡಬಹುದು. ಸ್ಟೇಷನ್ಗೆ ಇಲ್ಲಿಂದ ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ತಲುಪಬಹುದು. ಏನಂತೀರಿ ರಾಧಮ್ಮ ?" ಎಂದು ಬೀಗತ್ತಿಯ ಕಡೆಯಿಂದ ಒತ್ತಾಯ ಬಂದಿತು.

ಏನೂ ಮಾತನಾಡದೆ ಪೆಚ್ಚು ನಗೆ ಬೀರುತ್ತಾ ನಿಂತಿದ್ದ ರಾಧಮ್ಮನ ಮುಖವನ್ನು ದುರುಗುಟ್ಟಿಕೊಂಡು ನೋಡಿದರು ಕೃಷ್ಣಸ್ವಾಮಿ. ಕೊನೆಗೂ ಒಂದು ದಿಡೀರ್ ಬೀಗರೂಟ ಮಾಡಿ ಹೊರಡಲು ಅಣಿಯಾದರು.

ಊಟೋಪಚಾರ ಮುಗಿದನಂತರ ಶ್ರೀಪತಿಯವರು ಬೀಗರನ್ನು ತನ್ನ ಕಾರಿನಲ್ಲಿ ಕೂರಿಸಿಕೊಂಡು ಲೌಕಿಕವಾಗಿ ಮಾತನಾಡುತ್ತ ಕಾರ್ ಚಲಿಸಿದರು. ಹತ್ತು ನಿಮಿಷದನಂತರ ಗ್ರಾಂಡ್ ಸ್ವೀಟ್ಸ್ ಅಂಗಡಿಯ ಮುಂದೆ ಕಾರ್ ನಿಂತಿತು. ಐದೈದು ನಿಮಿಷಗಳಿಗೊಮ್ಮೆ ಕೃಷ್ಣಸ್ವಾಮಿ ತನ್ನ ವಾಚ್ ನೋಡಿಕೊಳ್ಳುತ್ತಿದ್ದರು.

"ನಿಮ್ಮ ತಾಯಿಯವರಿಗೆ ಇಲ್ಲಿಯ ಕೈ ಮುರುಕ್ಕು ತುಂಬಾ ಇಷ್ಟ. ಅವರಿಗೆ ಇಷ್ಟವಾದ ಸ್ಪೆಷಲ್ ಸ್ವೀಟ್ಸ್‌ಗಳನ್ನೂ ಪ್ಯಾಕ್ ಮಾಡಿಸಿರುವೆ." ಎನ್ನುತ್ತ ಶ್ರೀಪತಿಯವರು ಅಂಗಡಿಯಿಂದ ಒಂದು ದೊಡ್ಡ ತಿಂಡಿ ಪಾರ್ಸಲ್ ತಂದು ರಾಧಮ್ಮಳ ಕೈಗಿಟ್ಟರು.

"ಇದೆಲ್ಲ ಯಾಕೆ ? ಟೈಮ್ ಆಗುತ್ತಿದೆ ! ಸೀದಾ ಸ್ಟೇಷನ್ಗೆ ಹೋಗೋಣ !" ಚಡಪಡಿಸುತ್ತಿದ್ದ ಕೃಷ್ಣಸ್ವಾಮಿಯ ಕಣ್ಣುಗಳು ಮಡದಿಯ ಮುಖವನ್ನು ಕುರಿತು ಕಿಡಿ

ಕಾರಿದವು .

ಶ್ರೀಪತಿಯವರು ಯಾರು ಕೇಳುವರೋ ಬಿಡುವರೋ ಎಂಬ ಗಮನವೇ ಇಲ್ಲದೆ ವಟ ವಟ ಮಾತನಾಡುತ್ತ ಕಾರ್ ಚಲಿಸುತ್ತಿದ್ದರು. ಹಾಗೂ ಹೀಗೂ ಇನ್ನೇನು ಸ್ಟೇಷನ್ ತಲುಪುತ್ತಿದ್ದ ಹಾಗೆಯೇ, ಟ್ರಾಫಿಕ್ ಪೋಲೀಸರು ಸಂಚಾರ ನಿಯಮವನ್ನು ಉಲ್ಲಂಘಿಸಿದ ಕಾರಣ ಶ್ರೀಪತಿಯವರ ಕಾರನ್ನು ನಿಲ್ಲಿಸಿದರು.

ಪೋಲೀಸರೊಂದಿಗೆ ವಾಗ್ವಾದಕ್ಕೆ ತೊಡಗಿದ್ದ ಶ್ರೀಪತಿಯವರನ್ನು ಕಂಡು ಕೃಷ್ಣಸ್ವಾಮಿಯವರ ಬಿ.ಪಿ. ಎಗರಿತು. ಕೊನೆಗೂ ಪೋಲೀಸವರಿಂದ ಬಿಡಿಸಿಕೊಂಡು ಬಂದ ಶ್ರೀಪತಿಯವರು "ದಿನಕ್ಕೊಂದು ರೂಲ್ ಹಾಕಿ ನಮ್ಮ ಪ್ರಾಣ ತಿನ್ನುತ್ತಾರೆ ಈ ಪೋಲೀಸರು. ಈಗಲೇ ಕಮಿಷ್ನರ್ ಜೊತೆ ಮಾತನಾಡಬೇಕು." ಎಂದು ಬೈದುಕೊಂಡೇ ಸ್ಟೇಷನ್ ಮುಂದೆ ಕಾರ್ ನಿಲ್ಲಿಸಿದರು.

"ಇಲ್ಲಿ ಪಾರ್ಕಿಂಗ್ ಇಲ್ಲ. ಇಲ್ಲೇ ಇಳಿದುಕೊಳ್ಳಿ. ಅಗೋ ಸ್ಟೇಷನಲ್ಲಿ ನೇರವಾಗಿ ಹೋಗಿ ಬಲಗಡೆ ಇರುವ ಪ್ಲಾಟ್ಫಾರ್ಮ್‌ಗೆ ಹೋದರೆ ನಿಮ್ಮ ಟ್ರೈನ್ ಸಿಕ್ಕುತ್ತದೆ." ಎಂದವರೇ ಸರ್ರೆಂದು ಹೊರಟೇ ಹೋದರು.

ದುಮುಗುಡುವ ಮುಖ ಹೊತ್ತ ಕೃಷ್ಣಸ್ವಾಮಿ ರಾಧಮ್ಮಳೊಂದಿಗೆ ಪ್ಲಾಟ್ಫಾರ್ಮ್ ತಲುಪುತ್ತಿದ್ದಂತೆ, ಅವರುಗಳು ಹೋಗಬೇಕಾದ ಟ್ರೈನು ಅವರುಗಳ ಕಣ್ಣ ಮುಂದೆಯೇ ವೇಗ ಹಿಡಿದು ಕಣ್ಮರೆಯಾಯಿತು !

"ಅಯ್ಯೋ ! ಈವಾಗ ಏನು ಮಾಡುವುದು ? ಬೀಗರಿಗೆ ಫೋನ್ ಮಾಡಿ...." ಭಯದಿಂದ ಕೂಗಿದ ರಾಧಮ್ಮಳನ್ನು ಕಣ್ಣಲ್ಲೇ ಸುಟ್ಟುಬಿಡುವಷ್ಟು ಕೋಪದಿಂದ ನೋಡಿದರು ಕೃಷ್ಣಸ್ವಾಮಿ. ಮರು ದಿನ ಮುಂಜಾನೆಯೇ ಹೊರಡಲಿದ್ದ ಟ್ರೈನಿಗೆ ಟಿಕೆಟ್ ಮಾಡಿಸಿಕೊಂಡರು.

ನಂತರ–ಸ್ಟೇಷನ್ ಸಮೀಪ ಒಂದ್ ಥರಾ ಇದ್ದ ಸುಮಾರಾದ ಲಾಡ್ಜ್‌ಲ್ಲಿ ರೂಮ್ ತೆಗೆದುಕೊಂಡ ಮಹಿಳೆ ಮತ್ತು ಗಂಡಸನ್ನು ಒಂಥರಾ ನೋಡುತ್ತಾ ರೂಮ್ ಕೀ ಕೊಟ್ಟನು ರಿಸೆಪ್ಷನಿಸ್ಟ್!

**ಹಿನ್ನುಡಿ :** ಸೂರ್ಯ ಚಂದ್ರರಿರುವವರೆಗೂ 'ಲೇಟ್ ಲತೀಫ್' ವರ್ಸಸ್ 'ಅರ್ಜಂಟ್ ಮೇಷ್ಟ್ರ' ಘರ್ಷಣೆ ಇದ್ದೇ ಇರುತ್ತದೆ !

■



# ಮಲ್ಲಯ್ಯನ ಮಾತು, ಜಾಹೀರಾತು, ಗುಟ್ಟು ರಟ್ಟು

ಸುಮನಾ

"ಆ ಜಾಹೀರಾತು ವೀಕ್ಷಕರ ಮನಸೂರೆಗೊಂಡಿತ್ತು. ಆ ಜಾಹೀರಾತಿನ ಪ್ರಕಟಣೆಯಾದ ನಂತರ ಇದ್ದಕ್ಕಿದ್ದಂತೆ ಆ ಸಿಹಿ ಅಂಗಡಿಯ ಮಾಲೀಕ ಮಲ್ಲಯ್ಯ ಊರಿನ ಸ್ವೀಟ್ ಸ್ಟಾಲ್‌ಗಳ ಟಾಪ್ ರೇಟ್ ಅಂಗಡಿಯ ಒಡೆಯನಾಗಿಬಿಟ್ಟಿದ್ದ. ದೊಡ್ಡ ದೊಡ್ಡ ಶ್ರೀಮಂತರು ಕ್ಯೂ ನಿಂತು ಶುದ್ಧ ತುಪ್ಪದ ತಯಾರಿಕೆಯ ಸಿಹಿ 'ಅಮೃತಕಳಶ' ಲಡ್ಡುವನ್ನು ಖರೀದಿಸುತ್ತಿದ್ದರು. ಮದುವೆ, ಮುಂಜಿ, ಗೃಹಪ್ರವೇಶ, ನಾಮಕರಣ ಇತ್ಯಾದಿ ಕಾರ್ಯಕ್ರಮಗಳಿಗೆ ಇವರದೇ ಸ್ವೀಟ್ ಸ್ಟಾಲಿನ 'ಅಮೃತಕಳಶ'ದ ಲಡ್ಡು, ಉಂಡೆಗೆ ಡಿಮ್ಯಾಂಡೋ ಡಿಮ್ಯಾಂಡು. ತಿಂಗಳ ಮುಂಚೇನೆ ಆರ್ಡರ್ ಬುಕ್ ಮಾಡಬೇಕಿತ್ತು.

ಆ ದಿನ ಈ ಅಪರೂಪದ ಅಮೃತಕಳಶದ ನಿಮ್ಮ ಸವಿ ಉಂಡೆಯ ರುಚಿಯ ಗುಟ್ಟೇನು ಅಂತ ಟಿ.ವಿ. ಕಾರ್ಯಕ್ರಮದ ಸಂದರ್ಶನವೊಂದರಲ್ಲಿ ಅಂಗಡಿಯ ಮಾಲೀಕ ಮಲ್ಲಯ್ಯರನ್ನು ಪ್ರಶ್ನಿಸಿದಾಗ ಅವರು ಹೇಳಿದ ಕಥೆ ಬಲೇ ತಮಾಷೆ ಎನಿಸಿತ್ತು. ಜೊತೆಗೆ ನಗೆಯ ಹೊನಲನ್ನೂ ಹರಿಸಿತ್ತು. ನೋಡಿ ಅದನ್ನು ನಿಮಗೆ ಕಥೆಯ ರೂಪದಲ್ಲಿ ಹೇಳ್ತೀನಿ, ಕೇಳಿ ಅಂತ ಆರಂಭಿಸಿದರು ಮಾಲೀಕ ಮಲ್ಲಯ್ಯ.

"ಆ ದಿನ ಸಂಜೆ ದೂರದೂರಿಗೆ ಹೊರಟಿದ್ರು ಸಂಜನಾ ಮತ್ತು ಅಮ್ಮ ಜಲಜಮ್ಮ. ಬಹಳ ದಿನಗಳ ನಂತರ ನೆಂಟರೆಲ್ಲರನ್ನೂ ಭೇಟಿ ಮಾಡುವ ಕಾರಣ ಅವರ ಆ ಊರಿನ ಸ್ವೀಟ್ ಸ್ಟಾಲಿನ ಸ್ಪೆಷಲ್ ಸಿಹಿ, ಶುದ್ಧ ತುಪ್ಪದಲ್ಲಿ ಮಾಡಿದ್ದ 'ಅಮೃತಕಳಶ'ದ ಉಂಡೆಗಳ ನಾಲ್ಕು ಪ್ಯಾಕೇಟ್ ತೆಗೆದುಕೊಂಡು ಅದನ್ನಿಡಲು ಹೊಸದೊಂದು ಪುಟ್ಟ ಕಿಟ್ ಬ್ಯಾಗನ್ನೂ (ಬ್ರಾಂಡೆಡ್) ಖರೀದಿಸಿ, ಅದರಲ್ಲಿ ಸಿಹಿ ಪ್ಯಾಕೆಟಗಳನ್ನು ಇಟ್ಟು ರೈಲಿನ ಪ್ರಯಾಣ ಹೊರಟಿದ್ದರು. ರೈಲಿನಲ್ಲಿ ಎಲ್ಲಾ ಸೀಟುಗಳು ಭರ್ತಿಯೋ ಭರ್ತಿ. ಹೆಜ್ಜೆ ಇಡೋಕೂ ಜಾಗವಿಲ್ಲ.

ರಾತ್ರಿಯೆಲ್ಲಾ ಪ್ರಯಾಣ ಮಾಡಬೇಕು ಅಂತ ಬಹಳ ಹುಷಾರಾಗಿ ತಾವು ಮಲಗಿದ್ದ ಸೀಟಿನಡಿಯಲ್ಲೇ ಇಟ್ಟಿದ್ದರು ಮಧ್ಯರಾತ್ರಿಯ ಒಂದು ಹೊತ್ತಿನಲ್ಲಿ ಏನೋ ಶಬ್ದವೆನಿಸಿ, ಕಳ್ಳ ಏನಾದ್ರೂ ಬಂದನೇನೋ ಅಂತ ಅಕ್ಕಪಕ್ಕ ನೋಡಿ, ಎಲ್ಲರೂ ಗಾಢನಿದ್ರೆಯಲ್ಲಿದ್ದುದು ನೋಡಿ, ಕಿಟ್ ಬ್ಯಾಗ್ ಇದೆಯೆಂದು ಖಾತ್ರಿ ಪಡಿಸಿಕೊಂಡು ಮತ್ತೆ ಮಲಗಿದ್ರು ಜಲಜಮ್ಮ. ಬೆಳಗ್ಗೆ ತಮ್ಮ ಊರಿನ ನಿಲ್ದಾಣ ಬಂದಾಗ ಮಗಳನ್ನು ಎಬ್ಬಿಸಿ ತಾವೂ  ತಮ್ಮ ಲಗೇಜ್ ತೊಗೊಂಡು ಇಳಿದು ಆಟೋ ಹತ್ತಿ ಕುಳಿತಾಗಲೇ ಗೊತ್ತಾಗಿದ್ದು ಹೊಚ್ಚಹೊಸ ಕಿಟ್ ಬ್ಯಾಗ್ ಕೆಳಗಿನ ಭಾಗದಲ್ಲಿ ಹರಿದಿತ್ತು. ಯಾರೋ ಕಳ್ಳರು ಚಾಕು ಹಾಕಿ ಕಟ್, ಕಟ್ ಮಾಡಿದಂತೆನಿಸಿತ್ತು..

"ಇದೇನು, ಇನ್ನೂ ಮೊನ್ನೆ ತೊಗೊಂಡ ಬ್ಯಾಗು ಮೊನ್ನೆಯಷ್ಟೇ ಓಪನ್ ಮಾಡಿದ್ದು" ಅಂತ, "ಡ್ರೈವರ್, ಆಟೋ ನಿಲ್ಲಿಸಪ್ಪ, ಒಂದೈದು ನಿಮಿಷ ಇರಪ್ಪ" ಅಂತ ಇಳಿದು ಬ್ಯಾಗು ತೆಗೆದು ನೋಡಿದಾಗ ಮತ್ತೊಂದು ಆಘಾತ ಕಾದಿತ್ತು. ಬ್ಯಾಗಿನಲ್ಲಿದ್ದ ಸ್ವೀಟು ಪ್ಯಾಕೇಟುಗಳು ತೆರೆದಿದ್ದವು. ಉಂಡೆಗಳು ಚೆಲ್ಲಾಪಿಲ್ಲಿಯಾಗಿದ್ದವು.

"ಅಯ್ಯೋ ದೇವ್ರೇ! ಹೀಗೇಕಾಯ್ತು? ಯಾರು ಈ ಘಮಘಮಿಸೋ ಉಂಡೆ ಕದಿಯಲು  ಪ್ರಯತ್ನಿಸಿದರು? ರೈಲಿನಲ್ಲಿ ಉಂಡೆಕಳ್ರು ಇದಾರಾ?ಅಥ್ವಾ ಹೊಸ ಬ್ಯಾಗು ಕದಿಯೋಕೆ ಬಂದಿದ್ರಾ? ಹಾಗಾದರೆ ಅಷ್ಟು ಚೆನ್ನಾಗಿ ಪ್ಯಾಕ್ ಮಾಡಿದ್ದ ಪ್ಯಾಕೇಟು ಓಪನ್ ಆಗಿದ್ದಾದ್ರೂ ಹೇಗೆ? ಈಗೇನು ಮಾಡೋದು" ಅಂತ ಅಮ್ಮ, ಮಗಳು

ಮಾತಾಡ್ತಿದ್ದಾಗ ಅಷ್ಟು ಹೊತ್ತು ಇದನ್ನೆಲ್ಲ ನೋಡ್ತಿದ್ದ ಆಟೋ ಡ್ರೈವರು ನಗಲಾರಂಭಿಸಿದ. ಜೊತೆಗೆ "ಅಮ್ಮೋರೆ, ಆ ಉಂಡೆ ಕಳ್ರು ಯಾರೂಂತ ನಾನು ಹೇಳ್ತೀನಿ ಬನ್ನಿ ಕೂತ್ಕೊಳಿ" ಅಂದ.

"ಏನಪ್ಪಾ? ನಿಜವಾಗಲೂ ಉಂಡೆ ಕಳ್ರು ಇದಾರಾ? ರೈಲಿನಲ್ಲಿ ದುಡ್ಡು, ಚಿನ್ನ ಇತ್ಯಾದಿ ಕದಿಯೋದು ಕೇಳಿದೀವಿ. ಇದೇನು ಹೊಸದಾಗಿದೆ?" ಅಂದ್ರು.



"ಅಯ್ಯೋ ಅದು ಮನುಷ್ಯರಲ್ಲಮ್ಮಾ. ಅದು ಇಲಿಗಳು, ಹೆಗ್ಗಣಗಳ ಕರಾಮತ್ತು! ಈ ಹಿಂದೆ ನನ್ನ ಗೆಳೆಯ ಹೇಳಿದ್ದು ನೆನಪು ಬಂತು. ನೋಡಿ, ನೀವು ಓಪನ್ ಮಾಡೋ ಮುಂಚೇನೆ ನನಗೂ ಘಂ ಅಂತ ತುಪ್ಪದ ವಾಸನೆ ಬಂದಿತ್ತು. ಯಾವುದೋ ಒಳ್ಳೆಯ ಸ್ವೀಟು ಇರಬಹುದು ಅಂದ್ಕೊಂಡೆ. ಇನ್ನು ರೈಲಿನ ಬೋಗಿಗಳಲ್ಲಿ ಸಂಸಾರ ಮಾಡೋ ಇಲಿಗಳಿಗೆ, ಹೆಗ್ಗಣಗಳಿಗೆ ಗೊತ್ತಾಗೋಲ್ವೇ? ಅವುಗಳೇ ಬಂದು ದಾಳಿ ಮಾಡಿವೆ" ಅಂತ ನಕ್ಕು ಹೇಳಿದ.

ಇದೇನು ಒಳ್ಳೆಯ ಜಾಹಿರಾತು ಕೊಡೋ ಹಾಗಿದೆ. ಅಂತ ಅನಿಸಿ ಅಮ್ಮ ಇದೇ ವಿಷಯವನ್ನು ಆ ಸಿಹಿ ಅಂಗಡಿಯ ಮಾಲೀಕರಿಗೆ ತಿಳಿಸಿ, ಜಾಹೀರಾತಿನ ಐಡಿಯಾ ಕೊಟ್ಟಾಗ ಅವರು ಯೋಚಿಸಿ, ಅಮ್ಮ, ಮಗಳ ಟ್ರೇನ್ ಪ್ರಯಾಣದಲ್ಲಿ ನಡೆದ ಘಟನೆಯನ್ನು. ಒಂದು ಜಾಹೀರಾತಿನಂತೆ ತಯಾರಿಸಿ ಮಾರ್ಕೆಟ್‌ಗೆ ರಿಲೀಸ್ ಮಾಡಿದ್ರು.

ಘಮಘಮಿಸುವ ಸಿಹಿಯನ್ನು ತಿನ್ನಲು, ಆ ಸಿಹಿ ಇರುವ ಜಾಗವನ್ನು ಅರಸಿ ಬಂದು ಸದ್ದಿಲ್ಲದೆ ಗುಂಪು ಗುಂಪಾಗಿ ಬಂದು ನಡುರಾತ್ರಿ ದಾಳಿ ನಡೆಸಿ ಕಿಟ್ ಬ್ಯಾಗನ್ನು ಚೂಪಾದ ಹಲ್ಲಿನಲ್ಲಿ ಕಟಕಟ ಕಡಿದು ಅದರಲ್ಲಿ ಇದ್ದ ಸ್ವೀಟ್ ಪ್ಯಾಕೆಟನ್ನೂ ಚಾಣಾಕ್ಷತೆಯಿಂದ ಕಡಿದು ಎರಡೂ ಕೈನಲ್ಲಿ ಉಂಡೆಯ ಸವಿಯನ್ನು ಕಣ್ಮುಚ್ಚಿ ಅನುಭವಿಸುವ ಇಲಿ, ಹೆಗ್ಗಣಗಳ ಅನಿಮೇಟೆಡ್ ಕಾರ್ಟೂನ್ ತಯಾರಿಸಿ ಜಾಹೀರಾತು ತಯಾರಿಸಿದರು.

ಜೊತೆಗೆ ಇಲಿಗಳು "ಆಹಾ ಅಮೃತಕಳಶ; ಸವಿ ಅನುಭವಿಸಿ ಪ್ರತಿ ನಿಮಿಷ" ಅಂತ ಇಲಿಗಳು ಹಾಡುತ್ತಿರುವ ಹಾಗೆ ಪಿಕ್ಚರೈಸ್ ಮಾಡಿದರು. ಜನಗಳಿಗೆ ಈ ಜಾಹೀರಾತು ಬಹಳ ಇಷ್ಟವಾಗಿ ನಮ್ಮ ಅಂಗಡಿಗೆ ಮುಗಿಬಿದ್ದು ಈ ಅಮೃತಕಳಶ ಉಂಡೆಯನ್ನು ಖರೀದಿಸಲಾರಂಭಿಸಿದ್ರು. ಇದು ನಡೆದ ಕಥೆ. ಅಂದಿನಿಂದ ನನ್ನ ಜೀವನದ ಭಾಗ್ಯದ ಬಾಗಿಲು ತೆರೆಯಿತು. ಶ್ರೀ ಲಕ್ಷ್ಮೀಕಟಾಕ್ಷ ಕನಕಧಾರೆಯಾಗಿ ಹರಿಯಿತು. ಇಂದಿಗೂ ಅದೇ ಭಾಗ್ಯದ ಮಹಾಲಕ್ಷ್ಮಿ ನನ್ನನ್ನು ಆಶೀರ್ವದಿಸಿ ಕಾಪಾಡುತ್ತಿದ್ದಾಳೆ ಅಂದರು ಮಾಲೀಕರು.


"ಇದೊಂದು ಎಂದೂ ಕೇಳಿರದ ವಿಶೇಷ ಅನುಭವ ಬಿಡಿ, ತುಂಬಾ ಚೆನ್ನಾಗಿದೆ" ಅಂತ ಅಂದ್ರು ಟಿವಿ ಆ್ಯಂಕರ್. ಆ ದಿನದ ಕಾರ್ಯಕ್ರಮಕ್ಕಾಗಿ ಕಾತರದಿಂದ ಕಾದಿದ್ದ ಸಹಸ್ರಾರು ವೀಕ್ಷಕರೆಲ್ಲರಿಗೂ ಈ ಕಥೆಯನ್ನು ಕೇಳಿ ಮಹದಾನಂದವೆನಿಸಿ. ಹೃತ್ಪೂರ್ವಕವಾಗಿ ಸಂತಸದ 24 ಕ್ಯಾರೆಟ್ 'ಅಪರಂಜಿ' ನಗೆ ಬೀರಿದ್ದರು. ಮಲ್ಲಯ್ಯನ ಅಂಗಡಿಗೆ ಮುಗಿಬಿದ್ದಿದ್ದರು.

■

# ಉತ್ತರಕ್ರಿಯೆ

ಮೂಲ: ಅಕ್ಬರ್ ಬೀರಬಲ್ ಕಥೆ     ವಿಶುಯಲ್ಸ್ : ರಾಂಕಿ




ಪಂಡಿತರೇ, ಹೇಳಿ... ನಿಮ್ಮ ಪ್ರಶ್ನೆಗಳೇನು?
ಚತುರ ಬೀರಬಲ್ಲ, ಹೇಳು...ಸಾವಿರ ಸುಲಭ ಪ್ರಶ್ನೆಗಳು ಕೇಳಲೋ... ಇಲ್ಲ ಎರಡೇ ಟ್ರಿಕ್ಕಿ ಕೊಶ್ಚನ್ಸ್ ಕೇಳಲೋ ?!?
ಪ್ರಭುಗಳು ಆಗಲೇ ಇಂಪೇಶಂಟ್ ಆಗಿದ್ದಾರೆ... ಸಾವಿರ ಪ್ರಶ್ನೆಗಳು ಬಿಲ್ಕುಲ್ ಬೇಡ !
ಪಂಡಿತರೇ ! ಎರಡು ಟ್ರಿಕಿ ಕೊಶ್ಚನ್ಸ್ ಓನ್ಲಿ ಪ್ಲೀಸ್ !
ಆಲ್ ರೈಟ್ ! ಯಾವುದು ಮೊದಲು ಬಂದದ್ದು? ದಿ ಹೆನ್ ಆರ್ ದಿ ಚಿಕನ್ ?
ಅದರಲ್ಲೇನು ಅನುಮಾನ.. ಮೊಟ್ಟೆ ಫಸ್ಟ್ ಬಂದಿದ್ದು !
ಅಷ್ಟು ಖಂಡಿತವಾಗಿ ಹೇಗೆ ಹೇಳ್ತ್ಯಾ?
530 ಮಿಲಿಯನ್ ವರ್ಷಗಳ ಹಿಂದೆ ಮೀನು ಮೊಟ್ಟೆ ಕಾಣಿಸ್ಕೊಂಡಿತು... 195 ಮಿಲಿಯನ್ ವರ್ಷಗಳ ಹಿಂದೆ ಡೈನಾಸೋರ್ ಮೊಟ್ಟೆ... ಚಿಕನ್ ಇವಾಲ್ವ್ ಆಗಿದ್ದು ಈಗ 58 ಸಾವಿರ ವರ್ಷಗಳ ಹಿಂದಷ್ಟೇ! ಸೋ ಆಫ್ ಕೋರ್ಸ್ ದಿ ಎಗ್ ಕೇಮ್ ಫಸ್ಟ್ , ಪಂಡಿತರೇ !
ನೀತಿ: ನಿಮಗೆ ವಾಕಿಂಗ್ ಮಾಡೋ ಹೊತ್ತಿಗೆ ಸಮಸ್ಯೆ ಬಂದ್ರೆ, ತಲೆ ಓಡಿಸಿ ಸಮಸ್ಯೆ ಬಗೆಹರಿಸಿ !

# ಸ್ಕೂಲ್ ಸಿಲಬಸ್ನಲ್ಲಿ ಕ್ರಿಕೆಟ್

ಇ.ಆರ್. ರಾಮಚಂದ್ರನ್

ಆವತ್ತು ಅಜ್ಜಿ ಹೊರಗಡೆ ಹೋಗಿ ಬಂದವರೇ ಒಂದು ಬಾಂಬ್ ಹಾಕಿದರು.

ದಿನಾ ದೇವಸ್ಥಾನಕ್ಕೆ ತಮ್ಮ ಫ್ರೆಂಡ್ಸ್ ಸಾಫ್ಟ್ವೇರ್ ಸೀತಮ್ಮ, ಹಾರ್ಡವೇರ್ ಹರಿಣಿ, ಮತ್ತು ಏಐ ಅಲಮೇಲು ಜೊತೆಗೆ ಹೋಗಿ ಗರುಡ ಪುರಾಣ ಕೇಳಿ ಬರುತ್ತಿದ್ದ ಅಜ್ಜಿ ಅವತ್ತು ಇದ್ದಕ್ಕಿದ್ದಂತೆ ಇದನ್ನು ಸಿಡಿಸಿದರು.

ಅವ್ರ ಬಾಯಲ್ಲೇ ಕೇಳಿ. 'ಅಲ್ವೋ ಹುಡುಗರು ಓದೋ ಸಬ್ಜೆಕ್ಟ್ಸ್ ಜೊತೆ  ಕ್ರಿಕೆಟ್ನ ಯಾತಕ್ಕೆ ಸೇರಿಸಬಾರದು? ಅದೂ ಕರಿಕ್ಯುಲಮ್ಗೆ ಸೇರಿಸಿದರೆ ಹುಡುಗರಿಗೆ ಹಾಲು, ಕಲ್ಲಕ್ಕರೆ ಜೇನುತುಪ್ಪ ಸೇರಿಸಿ ಕೊಟ್ಟಂಗೆ ಆಗುತ್ತೆ. ಪಾಠ ಓದ್ತಿದೀವಿ ಅಂತನೇ ಅವರಿಗೆ ಅನ್ನಲ್ಲ.'

ನನಗೆ ಶಾಕ್ ಆದರೂ ತಡವರಿಸಿಕೊಂಡು 'ಅಜ್ಜಿ ನೀನು ಏನು ಹೇಳ್ತಿದೀಯಾ ನಿನಗೇ ಗೊತ್ತಾ?' ಎಂದು ಒದರಿದೆ.

'ಗೊತ್ತು ಕಣೋ ಅದಕ್ಕೆ ನಿನ್ನ ಹತ್ತಿರ ಹೇಳಿದ್ದು... ಕ್ರಿಕೆಟ್ಗೆ ಇರೋ ಬೆಲೆ ಬೇರೆ ಯಾವುದಕ್ಕೂ ಈಗ ಇಲ್ಲ.. ಅಪ್ಪಂದಿರು ಕೆಲಸ ಬಿಟ್ಟು ಅವ್ರ ಮಕ್ಕಳ್ಜೊತೆ ದಿನಾ ಪ್ರಾಕ್ಟೀಸ್ ಮಾಡ್ಸಕ್ಕೆ ಹೋಗ್ತಿದಾರೆ.. ಅದೃಷ್ಟ ಇದ್ರೆ ಹುಡುಗ್ರು ಕೋಟಿಗಟ್ಲೆ ಸಂಪಾದನೆ ಮಾಡ್ತಾರೆ.. ಇಲ್ದಿದ್ದರೂ ಅಂಪೈರ್ ಆಗೋ, ಕಾಮೆಂಟೇಟರ್ ಆಗಿ ಕೆಲಸ ಮಾಡಿದ್ರೆ ಕೈತುಂಬ ಸಂಬಳ ಬರುತ್ತೆ.. ಅದಕ್ಕೇ ಬೆಳಿಗ್ಗೆ ಬೇಗ ಅಲಾರಂ ಇಟ್ಟು ಎದ್ದು ಅವ್ರ ಮಗನಿಗೆ ಚಾಕಲೇಟ್ ಹಾರ್ಲಿಕ್ಸ್ ಕುಡ್ಸಿ  ತಾಯಂದಿರು ಸ್ಕೂಟರ್ನಲ್ಲೋ ಕಾರಲ್ಲೋ ಅವರ್ನ ಕ್ರಿಕೆಟ್ ಕ್ಯಾಂಪ್ಗೆ ಕರಕೊಂಡು ಬಿಡೋದಕ್ಕೆ ಹೋಗ್ತಾ ಇದಾರೆ'.

'ಅಜ್ಜಿ! ನಿನಗೆ ಎಲ್ಲೋ ಭ್ರಾಂತು! ಕ್ರಿಕೆಟ್ ಒಂದು ಕಡೆ, ಓದು ಬರಿಯೊದು, ಡಿಗ್ರಿ ಇನ್ನೊಂದು ಕಡೆ.. ಎರಡನ್ನು ಹತ್ರ ತಪ್ಪಾಗಿಯೂ ಒಟ್ಟಿಗೆ ಸೇರಿಸ್ಬಾರ್ದು'.

'ಹಾಗಂತ ಯಾವ್ನೋ  ಹೇಳ್ದ? ಅದೆಲ್ಲಾ ಓಬೀರಾಯನ ಕಾಲದ ಮಾತಾಯ್ತು.. ಈಗ ಬಿಎಸ್ಸಿ, ಬಿಇ ಡಿಗ್ರಿ ಮಾಡ್ದೋವ್ರು ನೊಣ ಹೊಡೀತಾ ಕೂತಿದಾರೆ. ನಮ್ಮ ಗವರ್ನಮೆಂಟು ತಿಂಗಳಿಗೆ ಕೊಡೋ ಎರಡು ಸಾವಿರಕ್ಕೆ ಆಧಾರ್ ಕಾರ್ಡು, ಕೆಲಸ ಇಲ್ಲ ಅಂತ ಒಂದು ಸರ್ಟಿಫಿಕೆಟ್ ತೊಗೊಂಡು ಸರ್ಕಾರಕ್ಕೆ ಕೊಡೋಕ್ಕೆ ದಿನಬೆಳಗಾದರೆ ಕ್ಯೂನಲ್ಲಿ ನಿಂತಿರ್ತಾರೆ... ಅದಕ್ಕಿಂತ ಇದು ಸಾವಿರ ಪಾಲು ವಾಸಿ. ಐಪಿಎಲ್ ನಲ್ಲಿ ಕೆನ್ನೆಗೆ ಬಾವುಟದ ಕಲರ್ ಬಳಿಯೋವ್ನು ಎರಡೇ ತಂಗಳಲ್ಲಿ ವರ್ಷಕ್ಕೆ ಬರೋ ಸಂಪಾದ್ನೆ ದುಡೀತಾನಂತೆ.'

'ಅಜ್ಜಿ! ಕ್ರಿಕೆಟ್ನ ಕರಿಕ್ಯುಲಂಗೆ ಸೇರ್ಸೋದು ಅಷ್ಟು ಸುಲಭ ಅಲ್ಲ.. ಅದಕ್ಕೆ ಡಿಡಿಪಿಐ, ಎಜುಕೇಷನ್ ಸೆಕ್ರೆಟರಿ, ಮಿನಿಸ್ಟರ್ ಅವರೆಲ್ಲರ ಅಪ್ರೂವಲ್ ಬೇಕಾಗುತ್ತೆ. ಥಿಯರಿ ಹೇಳ್ಕೊಡೋಕ್ಕೆ ಮೇಷ್ಟ್ರುಗಳು, ಪ್ರಾಕ್ಟಿಕಲ್ಗೆ ಜಾಗ ಬೇಕಾಗುತ್ತೆ... ಇದನ್ನೆಲ್ಲಾ ಮಾಡಕ್ಕೆ ಬಹಳ ವರ್ಷ ಬೇಕಾಗುತ್ತೆ'.

'ಸೀತಮ್ಮನ ಮೊಮ್ಮೊಕ್ಕಳು ಸಾಫ್ಟ್ವೇರ್ ಹುಲಿಗಳು. ಅವ್ರು ಡ್ರಾವಿಡ್ ಮಗ ಸುಮಿತ್ನ ಕ್ಲಾಸ್ಮೇಟ್ಸು. ಅವನ  ಡೌಟ್ ಕ್ಲಿಯರ್ ಮಾಡಕ್ಕೆ ಅವನ ಮಗನ ಮನೆಗೆ ಹೋಗಿದ್ರು. ಸೀತಮ್ಮ ಹೇಳಿ ಒಂದು ಸರ್ತಿ ದ್ರಾವಿಡ್ ಇದ್ದಾಗ ಈ ಸಬ್ಜೆಕ್ಟ್ ಎತ್ತಿದ್ದಕ್ಕೆ ದ್ರಾವಿಡ್ಎಕ್ಸಲೆನ್ಟ್

ಐಡಿಯಾ ಅಂತ ಹೇಳಿದ್ನಂತೆ. ಇದರ ವಿಷಯ ಏನಾದ್ರೂ ಹೆಲ್ಪ್ ಬೇಕಾದ್ರೆ ಕೇಳಿ. ನಾನು ಮಾಡ್ತಿನಿ ಅಂತ ಅಶ್ಯುರೆಂಸ್ ಕೊಟ್ಟಿದಾನೆ.'

'ನಾಲ್ಕು ಫ್ಲೈ–ಓವರ್, ಬೆಂಗಳೂರಿನ ಸುತ್ತ ಟನಲ್ ಕೊರೆಯೋ ಪ್ರಾಜೆಕ್ಟ್ ಆದರೆ ಗವರ್ನಮೆಂಟ್ ಒಂದೇ ದಿನಕ್ಕೆ ಒಪ್ಪಿಗೆ ಕೊಡ್ತಾರೆ..ವರ್ಲ್ಡ್ ಬ್ಯಾಂಕ್ ಅಥವ ಯುಎಸ್ ಎಯ್ಡ್ ನಿಂದ ರಾತ್ರೋ ರಾತ್ರಿ ದುಡ್ಡು ಸಿಗುತ್ತೆ. ಕರಿಕ್ಯುಲಂನ ಬದಲಾಯಿಸೋದು ಬಹಳ ಕಷ್ಟ. ಅದನ್ನ ಒಂದು ಕಮಿಟಿಗೆ ಹಾಕ್ಬೇಕು, ಅದರಲ್ಲಿ ಮೆಂಬರ್ಸ್ ಯಾರೂಂತ ಸೆಟಲ್ ಆಗ್ಬೇಕು, ಡೆಲ್ಲಿಇಂದ ಎಸ್/ಎಸ್ಟಿ/ ಒಬಿಸಿ ಮೆಂಬರ್ಸ್ ಎಷ್ಟು ಅಂತ ರಾಹುಲ್ ಗಾಂಧಿಯಿಂದ ಕ್ವೆಯರಿ ಬರುತ್ತೆ.. ಅದಲ್ಲಾ ಬೇಗ ಆಗೋ ಮಾತಲ್ಲ..'




'ಒಪ್ದೇ ಕಣೋ ನಿನ್ ಮಾತು. ಆದ್ರೆ ಕೇಳು. ಹೋದ ತಿಂಗಳು ಕಿರ್ಮಾನಿ ಆಟೊ–ಬಯಾಗ್ರಫಿ ಬುಕ್ ರಿಲೀಸ್ ಮಾಡ್ತಾಗೆ ಕ್ರಿಕೆಟರ್ಸ್ ಮದ್ಯೆ ಇದ್ದ ನಮ್ಮ ಡೆಪ್ಯುಟಿ ಸಿಎಮ್ 'ನನ್ನನ್ನು ಮಿನಿಸ್ಟರ್ ಅಂತ ನೋಡ್ಬೇಡಿ. ನಾನು ಕ್ರಿಕೆಟ್ನ ಹುಚ್ಚಾಪಟ್ಟೆ ಫ್ಯಾನ್. ನಿಮಗೆ ಏನು ಬೇಕಾದ್ರೂ ಹೇಳಿ ನಾನು ಮಾಡಿಸಿಕೊಟ್ತಿನಿ' ಅಂತ ಹೇಳಿದ್ರಂತೆ. ನಮ್ಮ ಹರಿಣಿ ಗಂಡ ಡಿಕೆಶಿ ಮನೆಗೆ ಬಾತ್ರೂಮ್ ಫಿಟಿಂಗ್ಸ್ ಹಾರ್ಡವೇರ್ ಎಲ್ಲಾ ಚೇಂಜ್ ಮಾಡಿಕೊಟ್ಟರಂತೆ. ಕಿರ್ಮಾನಿ ಪಾರ್ಟಿಲಿ ಅವ್ರೂ ಇದ್ದರು. ಡಿಸಿಎಮ್ ಹತ್ತಿರ ಇದರ ವಿಷಯ ಪ್ರಸ್ತಾಪ ಮಾಡ್ತಾಗ, ಕರಿಕ್ಯುಲಂಗೆ ಹಾಕೋದಕ್ಕೆ ನೊ ಪ್ರಾಬ್ಲಂ. ನಾನೇ ಮಾಡಿಸ್ಕೊಡ್ತೀನಿ. ನಾನು ನಾಳೆ ಮಹಾಕುಂಭದಲ್ಲಿ 3 ಬಾರಿ ಮುಳುಗಿ ಸ್ನಾನ ಮಾಡಕ್ಕೆ ಹೋಗಿ ಬರ್ತೀನಿ. ಬಡತನ ಹೋಗುತ್ತೋ ಇಲ್ವೋ ಗೊತ್ತಿಲ್ಲ..ಇಲ್ಲಿ ತನಕ ಮಾಡಿದ್ದ ಪಾಪ ಹೋದರೆ ಸಾಕು..... ಬಂದ ಮೇಲೆ ಈ ವಿಷಯ ತೊಗೊಳ್ತಿನಿ.. ಮಕ್ಕಳಿಗೆ ಕ್ರಿಕೆಟ್ ವಿಷಯದಲ್ಲಿ ಸಹಾಯ ಮಾಡಕ್ಕೆ ನಾನು ಯಾವಾಗಲೂ ಸಿದ್ಧ. ಎಲ್ಲಾ ಕ್ರಿಕೆಟರ್ಸ್ ಸೇರಿಸ್ಕೊಳ್ಳೋಣ' ಅಂತ ಹೇಳಿದಾರೆ.

'ವಾ ಅಜ್ಜಿ'.

'ಜೊತೆಗೆ ಇದೂ ಹೇಳಿದ್ದರಂತೆ.. ಪ್ರಾಕ್ಟಿಕಲ್‌ಗೆ ಚಿನ್ನಸ್ವಾಮಿ ಸ್ಟೇಡಿಯಂನ ಯೂಸ್ ಮಾಡಕ್ಕೆ ವಿವಿಎಸ್ ಲಕ್ಷ್ಮಣ್‌ಗೆ ಮಾತಾಡ್ತಿನಿ..ಅಂತ..ಅವರೇ ಅದಕ್ಕೆ ಈಗ ಇನ್–ಚಾರ್ಜು. ಆಮೇಲೆ ಅವ್ರೇ ಫೋನ್ ಮಾಡಿ ಲಕ್ಷ್ಮಣ್ ಇದಕ್ಕೆ ಒಪ್ಪಿದಾರೆ ಮತ್ತೆ ದ್ರಾವಿಡ್ ಕ್ರಿಕೆಟ್ ಸಬ್ಜೆಕ್ಟ್‌ಗೆ ಸಿಲಬಸ್ ತಯ್ಯಾರಿ ಮಾಡಕ್ಕೆ ಒಪ್ಪಿಕೊಂಡಿದ್ದಾರೆ ಅಂತನೂ ಹೇಳಿದ್ರಂತೆ.'

'ಫಾಸ್ಟ್ ಆಗಿ ಮೂವ್ ಮಾಡಿದೀಯಾ ಅಜ್ಜಿ. ವಾವ್ ಅಂತ ಹೇಳಬೇಕಾದ್ದೇ.... ಇವೆಲ್ಲಾ ಕವರ್ ಮಾಡಕ್ಕೆ ಮಿನಿಮಮ್ ಮೂರು ವರ್ಷ ಆಗುತ್ತೆ .... ಕರ್ನಾಟಕದಲ್ಲಿ ಎಷ್ಟು ಸ್ಕೂಲ್ ಇದೆ ಗೊತ್ತಾ? ಪ್ರೈಮರಿಯಿಂದ, ಮಿಡಲ್, ಹೈ ಸ್ಕೂಲ್.. ಎಲ್ಲಾ ಕಡೆ ಹೇಗೆ ಮಾಡಕ್ಕೆ ಸಾಧ್ಯ? ಖರ್ಚು ಬಹಳ ಆಗುತ್ತೆ'.

'ನಿನಗೆ ಅಪಶಕುನ ಪಕ್ಷಿ ಅಂತ ಹೆಸರು ಇಡಬೇಕಾಗಿತ್ತು.. ನಾನು ತಪ್ಪು ಮಾಡ್ದೆ.. ನಮ್ಮ ಅಲಮೇಲು ಏಐನ ಅರೆದು ಕುಡಿದಿದ್ದಾಳೆ. ಛಾಟ್ ಜಿಪಿಟಿ ಅವಳ ಬೆರಳಂಚಿನಲ್ಲಿ ಇಟ್ಟಿದ್ದಾಳೆ. ಈಗ ಡೀಪ್ ಸೀಕ್ ಬಂದಮೇಲೆ ಎಲ್ಲಾನೂ ಕಡಿಮೆ ಖರ್ಚಿನಲ್ಲಿ ಮಾಡಬಹುದು ಅಂತ ಹೇಳಿದಾಳೋ.'

'ಎಲ್ಲಾ ರೆಡಿ ಮಾಡಿದೀಯ ಅಜ್ಜಿ. ವಾಟ್ ನೆಕ್ಸ್ಟ್?'

'ಮುಂದಿನ ವಾರ ಡೆಪ್ಯುಟಿ ಸಿಮ್ ಆಫೀಸಿನಲ್ಲಿ ಲಕ್ಷ್ಮಣ್, ದ್ರಾವಿಡ್ ಮತ್ತು ಡಿಡಿಪಿಐ ಅವರ ಜೊತೆ ನಮ್ಮ ಮೀಟಿಂಗ್ ಇದೆ. ಪ್ರಿಲಿಮಿನರಿ ಮೀಟಿಂಗ್. ಅದಾದ ಮೇಲೆ ಸಿಲಬಸ್, ಮೇಷ್ಟ್ರ ಕ್ವಾಲಿಫಿಕೇಷನ್, ಟ್ರೈನಿಂಗ್. ಕ್ಲಾಸ್ ಎಕ್ಸಾಮ್, ಮಿಡ್‌ಟರ್ಮ್, ಅದೆಲ್ಲಾ ಮೀಟಿಂಗ್ನಲ್ಲಿ ಡಿಸ್ಕಸ್ ಮಾಡಬೇಕು.. ರಿಟೈರ್ಡ್ ರಣಜಿ ಟ್ರೋಫಿ ಪ್ಲೇಯರ್ಸ್ನ ಮೇಷ್ಟ್ರನ್ನಾಗಿ ತೊಗೋಬೋದಂತೆ...ಅಕ್ಷಯ್ ಪಾತ್ರೆನವರು ಶನಿವಾರ ಪ್ರಾಕ್ಟಿಕಲ್ಸ್ ಇಟ್ರೆ ಗ್ರೌಂಡ್ಸ್ಗೇ ಹಾರ್ಲಿಕ್ಸ್ ಸಪ್ಲೈ ಮಾಡ್ತಾರಂತೆ...ಡ್ರೀಮ್ 11 ಕನ್ನಡಕ್ಕೆ ತರ್ಜುಮೆ ಮಾಡ್ಬೇಕು..ಕ್ರಿಕೆಟ್ ಮೇಲೆ ಚುಟುಕ ಪದ್ಯ ಹುಡುಗ್ರು ಹಾಡೋದಕ್ಕೆ ರಾಪ್ ಮ್ಯೂಸಿಕ್ ನವರು ಅದನ್ನು ಬರೆದು ಹಾಡಕ್ಕೆ ರೆಡಿಯಂತೆ. ಇನ್ನೂ ಏನೇನೋ... ಬೆಟ್ಟದಷ್ಟು ಕೆಲಸ ಇದೆ... ಅದಕ್ಕೆ ಮುಂಚೆ ಒಂದು ಕೆಲಸ ಇದೆ'.

'ಏನದು?'

'ಮೀಟಿಂಗ್ನಲ್ಲಿ ಡೆಪ್ಯುಟಿ ಸಿಎಮ್ ನಮ್ಮನ್ನು ಮಹಾಕುಂಭ್ನಲ್ಲಿ ಸ್ನಾನ ಮಾಡಿದೀರಾಂತ ಕೇಳ್ತಾರೆ.'

'ಖಂಡಿತ ನಿಮ್ಮ ಗುಂಪನ್ನ ಕೇಳೇ ಕೇಳ್ತಾರೆ.'

'ದ್ರಾವಿಡ್ ಮತ್ತು ಲಕ್ಷ್ಮಣ್ ಒಂದು ಬಾರಿ ಇಡೀ ದಿನ ಔಟಾಗದೆ ಕಲ್ಕತ್ತಾದಲ್ಲಿ ಆಡಿ ಭಾರತವನ್ನ ಸೇವ್ ಮಾಡಿದ್ರು ಜ್ಞಾಪಕ ಇದೆಯಾ?'

'ಅಜ್ಜಿ! ಆ ದಿನದ ಅವರಿಬ್ಬರ ಆಟ ಮರೆಯೋ ಹಾಗೇ ಇಲ್ಲ... ಅವರಿಂದಲೇ ಮತ್ತು ಹರ್ಭಜನ್ ಬೋಲಿಂಗ್ನಿಂದ ಭಾರತಕ್ಕೆ ಭರ್ಜರಿ ವಿಜಯ ಸಿಕ್ತು.... ಅದಕ್ಕೂ ಮಹಾಕುಂಭದಲ್ಲಿ ನಿಮ್ಮ ಸ್ನಾನಕ್ಕೂ ಏನು ಸಂಭಂದ?'

'ಲಕ್ಷ್ಮಣ್ ಮತ್ತು ದ್ರಾವಿಡ್ ಅವರೇ ನಮಗೆ ಮಹಾಕುಂಭಕ್ಕೆ ಹೋಗಿ ಬರಲು ಎಲ್ಲಾ ಸೌಕರ್ಯ ಮಾಡಿಕೊಡ್ತಿದಾರೆ! ಕ್ರಿಕೆಟ್ ಮತ್ತು ಹುಡುಗರ ಓದಿನ ಮೇಲೆ ಇರುವ ನಮ್ಮ ಇಂಟರೆಸ್ಟ್ ನೋಡಿ ಅವರೇ ನಾವು ಮಹಾಕುಂಭಕ್ಕೆ ಹೋಗಿ ಬರಬೇಕು ಅಂತ ವ್ಯವಸ್ಥೆ ಮಾಡಿದಾರೆ.'


'ವ್ಹಾ ಅಜ್ಜಿ! ವ್ಹಾ!' ■

# ಪದಬಂಧ

ರಾಜಾಸಂಗಮೇಶ ಎನ್.ಹಿರೇಮಠ

**ಎಡದಿಂದ ಬಲಕ್ಕೆ**

**ಉತ್ತರಗಳು ಪುಟ–28**




1. ಸಂಗೀತದಲ್ಲಿ ಧ್ವನಿಯ ಬಳುಕು(3)

3. ಉದ್ದನೆಂಯು ದಾರ ಹಿಡಿದವನಿಗಿರುವ ಧಾರಾಳತನ (3)

6. ನಮ್ಮ ಈ ಭಾವನು ಹಿರಿಮೆಯುಳ್ಳ ವ್ಯಕ್ತಿ(5)

7. ಎಣ್ಣೆ–ತುಪ್ಪದಲ್ಲಿ ಕಪ್ಪಾಗುವಂತೆ ಬೇಯಿಸು(2)

8. ಹಳ್ಳಕ್ಕಿಂತ ದೊಡ್ಡದು–ಸಮುದ್ರಕ್ಕಿಂತ ಚಿಕ್ಕದು(2)

10. ನಾನು ಕಡೆಯಲ್ಲಿ ಹೋಗಬೇಕಾದುದು ಈ ಸ್ವರ್ಗಕ್ಕೆ ತಾನೆ?(2)

13. ರಥವನ್ನು ನಡೆಸುವ ಕಾಯಕದವನು(2)

15. ಕೊರಳಲ್ಲಿನ ತಾಳಿ(5)

17. ಕೊಳೆಯಿಲ್ಲದಿರುವಿಕೆ(3)

18. ರಂಜಕ ತಂದ ಮಡಿವಾಳ(3)

**ಮೇಲಿನಿಂದ ಕೆಳಕ್ಕೆ**

1. ರಾಗದಿಂದ ಕೊನೆಗೊಂಡ ಹೂವಿನ ಧೂಳು(3)

2. ಮೈತುಂಬ ಉಣ್ಣೆಯುಳ್ಳ ಪ್ರಾಣಿಯ ಕೂಸು(4)

3. ಪವನನು ವಿಹರಿಸುತ್ತಿರುವ ಸಣ್ಣ ಉದ್ಯಾನ(4)

4. ಅಹಸ್ಯವಲ್ಲ; ಗುಪ್ತವಾದುದು(3)

5. ಮನುಜ ಕರೆತಂದ ಸಹೋದರ(3)

7. ಗುಂಪಿನ ಮುಂದಾಳು ತಿರುಗಿದ್ದಾನೆ(3)

9. ಆಕಾಶ–ಭೂಮಿ ಸೇರಿದಂತೆ ಕಾಣುವ ಸ್ಥಳ(3)

11. ಋಷಿಮುನಿಗಳ ನೀರಿನ ಪಾತ್ರೆ(4)

12. ಕಳವು ಆದ ಕಡಿಮೆ ದರ್ಜೆಯದು(3)

13. ರಂಗಪ್ರದರ್ಶನವನ್ನು ನಡೆಸಿಕೊಡುವವ(4)

14. ನೀನವನಿಗೆ ತೋರಿಸಬಾರದೆ ಈ ಭೂಮಿಯನ್ನು(3)

16. ಕಲಹವನ್ನು ಬಾಗಿ ನೋಡುತ್ತಿರುವ ಹುಡುಗ(3)

■

# ಸಲಾಂ ಬೀದಿನಾಯ್

✍ ನಳಿನಿ ಟಿ. ಭೀಮಪ್ಪ, ಧಾರವಾಡ

ಬೀದಿಗಳು ಇದ್ದ ಮೇಲೆ ಬೀದಿನಾಯಿಗಳಿರಲೇಬೇಕು. ಬೀದಿಗೆ ಅವೇ ಭೂಷಣ, ಲಕ್ಷಣ. ಯಾರಿಗಿಷ್ಟವಿರಲಿ ಬಿಡಲಿ, ಈ ಮಾತುಗಳನ್ನು ಎಲ್ಲರೂ ಒಪ್ಪಲೇಬೇಕು. ಏಕೆಂದರೆ ನಾವು ಅವುಗಳನ್ನು ಆಯ್ಕೆ ಮಾಡಲಿಕ್ಕಾಗುವುದಿಲ್ಲವಲ್ಲ! ಅವುಗಳೇ ನಮ್ಮ ಬೀದಿಯನ್ನು ಆಯ್ಕೆ ಮಾಡಿಕೊಂಡಿರುತ್ತಾವಾದ್ದರಿಂದ ಒಪ್ಪದೆ ವಿಧಿಯಿಲ್ಲ.

ಅದೆಲ್ಲಿಂದ ಬಂದು ಸೇರಿಕೊಳ್ಳುತ್ತವೆಯೋ ಬಲ್ಲವರಿಲ್ಲ. ತಮ್ಮ ಬೌಂಡರಿಯನ್ನು ದಿನಕ್ಕೆರಡು ಬಾರಿ ಅಲ್ಲಲ್ಲಿ ಕಾಲೆತ್ತಿ ಸ್ಪ್ರೇ ಹೊಡೆದು, ಗಟ್ಟಿಗೊಳಿಸುವ ಕಾರ್ಯ ಮರೆಯುವುದಿಲ್ಲ. ಒಂದಕ್ಕೆರಡು, ಎರಡಕ್ಕೆ ನಾಲ್ಕು, ನಾಲ್ಕಕ್ಕೆ ಎಂಟು; ಹೀಗೆ ಅದರ ವಂಶವೃಕ್ಷ ಮಲ್ಟಿಪ್ಲೈ ಆಗಿ, ತಮ್ಮ ಸ್ಥಾನಗಳನ್ನು ವಿಭಜನೆ ಮಾಡಿಕೊಂಡು ಬೀದಿಯಲ್ಲಿ ನಿಲ್ಲಿಸಿರುವ ಕಾರಿನ ಕೆಳಗೆ, ಗೇಟಿನ ಮುಂದೆ, ನಡುಬೀದಿಯಲ್ಲಿ ಹೀಗೆ ಎಲ್ಲೆಂದರಲ್ಲಿ ತಮ್ಮ ಹಕ್ಕುಸ್ವಾಮ್ಯ ಸ್ಥಾಪಿಸಿಕೊಂಡು, ಇಡೀ ಬೀದಿಯನ್ನೆಲ್ಲ ತಮ್ಮ ಕಾರಸ್ಥಾನವನ್ನಾಗಿ ಮಾಡಿಕೊಂಡು ಪಟ್ಟಾಗಿ ನಿದ್ರಿಸುತ್ತಿರುತ್ತವೆ. ಕಲ್ಲು, ಕೋಲಿನಿಂದ ಅದೆಷ್ಟು ಬಾರಿ ಹೊಡೆದು ಹೆದರಿಸಿ ಓಡಿಸಲು ಪ್ರಯತ್ನಿಸಿದರೂ, ಮುಖ ಸೊಟ್ಟ ಮಾಡಿಕೊಂಡು ಕುಯ್ಯೋ, ಮರ್ರೋ ಎನ್ನುತ್ತಾ ಎದ್ದುಬಿದ್ದು ಓಡುವಂತೆ ನಟಿಸಿ, ಸ್ವಲ್ಪ ಹೊತ್ತಿಗೆ ಮತ್ತೆ ಅದೇ ಗತ್ತಿನಿಂದ ತಮ್ಮ ಸ್ವಸ್ಥಾನಕ್ಕೆ ಮರಳುತ್ತವೆ. ನಡುಬೀದಿಯಲ್ಲಿ ಅದೆಂತಹ ಧ್ಯಾನಸ್ಥ ಸ್ಥಿತಿಯಲ್ಲಿ ನಿದ್ದೆ ಮಾಡುತ್ತಿರುತ್ತವೆ ಎಂದರೆ, ಅದೆಷ್ಟೇ ವೇಗದಲ್ಲಿ ವಾಹನ ಚಲಾಯಿಸಿಕೊಂಡು ಬಂದು, ಕಿವಿಗಡಚಿಕ್ಕುವಂತೆ ಹಾರನ್ ಹೊಡೆದರೂ ಕೆಪ್ಪದಂತೆ ಮಲಗಿದ್ದು, ಇನ್ನೇನು ಅದರ ಮೈಮೇಲೇ ಹತ್ತಿಸಿಕೊಂಡು ಹೋಗಬಹುದು ಎನ್ನುವ ಸಂದರ್ಭ ಬಂದಾಗ, ಸರಕ್ಕನೆ ಸರಿದು ನಿಂತು ಸವಾರರನ್ನು ಬೆಚ್ಚಿಬೀಳಿಸುತ್ತವೆ. ಕೆಲವೊಮ್ಮೆ ಅವುಗಳನ್ನು ಉಳಿಸಲು ಹೋಗಿ, ಸವಾರಿ ಪಲ್ಟಿ ಹೊಡೆಯುವುದಿದೆ.

ರಾತ್ರಿಯ ಹೊತ್ತು ಇವುಗಳ ಕೂಗಾಟ, ಹಾರಾಟ, ಓಡಾಟ, ಹೋರಾಟ ಬಲು ಜೋರು. ಅದೆಂತೆಂತಹ ಎತ್ತರದ ಕಾಂಪೌಂಡ್ ಇದ್ದರೂ, ಕಾಂಪೌಂಡಿಂದ ಕಾಂಪೌಂಡಿಗೆ ಹೈಜಂಪ್ ಲಾಂಗ್‌ಜಂಪ್ ಮಾಡುತ್ತಾ ಜೂಟಾಟ ಆಡುತ್ತಾ ಎಲ್ಲರ ನಿದ್ದೆಗೆಡಿಸುವುದಿದೆ. ಸಾಕಾದರೆ ಕೆಲವರ ಮನೆಯ ತಾರಸಿ ಏರಿ ನಿದ್ರಿಸುವುದಿದೆ. ಹೊರಗಡೆ ಬಿಟ್ಟಿರುವ ಚಪ್ಪಲಿಗಳನ್ನೇನಾದರೂ ನೋಡಿದರೆ, ಅವುಗಳನ್ನು ಕಾಂಪೌಂಡಿನಿಂದ ಆಚೆ ತಂದು, ಜರಾಸಂಧನನ್ನು ಇಬ್ಭಾಗವನ್ನಾಗಿ ಮಾಡಿ ಎಸೆದಂತೆ, ಕಡಿದು, ಕಿತ್ತು ಎಲ್ಲೆಲ್ಲೋ ಎಸೆದಿರುತ್ತವಾದ್ದರಿಂದ ಅದರ ಆಸೆಯನ್ನು ಕೈಬಿಡುವುದೊಳಿತು. ಕೆಲವೊಮ್ಮೆ ಕಾಂಪೌಂಡಿನಲ್ಲಿಟ್ಟಿರುವ ಕಸದ ಬುಟ್ಟಿಯನ್ನೂ ಎಳೆದಾಡಿ, ಹೊರತಂದು ಅವರವರ ಮನೆಯಲ್ಲಿ ತಿಂದಿದ್ದು ಬಿಟ್ಟಿದ್ದು ಬೀದಿಗೆ ತಿಳಿಯುವಂತೆ ಹರಾಜಿಗಿಡುತ್ತವೆ. ಬೀದಿಗೆ ಯಾರೇ ಹೊಸಬರು ಬಂದರೂ, ಅವರನ್ನು ಬೊಗಳುತ್ತಲೇ ಸ್ವಾಗತಿಸಿ, ಹೋಗುವ ಮನೆಯತನಕವೂ ಜೊತೆಗೂಡಿ ಗೇಟಿನೊಳಗೆ ಬೀಳ್ಕೊಡುತ್ತವೆ. ತಮ್ಮ ಬೀದಿಯಲ್ಲಿ ಎಂಟ್ರಿ ಕೊಡುವ ಹಸು, ಎಮ್ಮೆ, ಹಂದಿ ಯಾವುದನ್ನೂ ಬಿಡದೆ, ಗುಂಪಾಗಿ ಅಟ್ಟಿಸಿಕೊಂಡು ಹೋಗಿ ಓಡಿಸುತ್ತವೆ. ದ್ವಿಚಕ್ರ ವಾಹನ ಸವಾರರನ್ನು ಒಮ್ಮೊಮ್ಮೆ ಜೂಟುಮುಟ್ಟಾಟದಂತೆ ಬೆಂಬತ್ತಿ ಹೋಗುವುದಿದೆ. ಪಾರಾದರೆ ಅವರ ಪುಣ್ಯ, ಔಟಾದರೆ ಸೀದಾ ಆಸ್ಪತ್ರೆಯ ದಾರಿ ಹಿಡಿಯಬೇಕಾಗುತ್ತದೆ. ಇವುಗಳನ್ನು ಮನೆಯ ಸುತ್ತಮುತ್ತ ಬಾರದಂತೆ ತಡೆಯಲು ಏನೆಲ್ಲಾ ಪ್ರಯತ್ನಿಸಿದವರಿದ್ದಾರೆ. ಇತ್ತೀಚೆಗೆ ಕೆಂಪುಬಣ್ಣ ಇರುವ ಕಡೆ ನಾಯಿಗಳು

ಭಯದಿಂದ ಸುಳಿಯಲಾರವು ಎನ್ನುವ ನಂಬಿಕೆ ಬಾಯಿಯಿಂದ ಬಾಯಿಗೆ ಹರಡಿ, ನೀರಿನ ಬಾಟಲಿಗಳಲ್ಲೆಲ್ಲ ಕೆಂಪುನೀರನ್ನು ತುಂಬಿ ಮನೆಯ ಸುತ್ತಮುತ್ತ ಇಟ್ಟು, ಕೆಲವು ಬಾಟಲಿಗಳನ್ನು ಮರಕ್ಕೂ ಕಟ್ಟಿದವರಿದ್ದಾರೆ. ಅವುಗಳಿಗೆಲ್ಲ ಕ್ಯಾರೇ ಅನ್ನದೆ, ಬಾಟಲಿಗಳನ್ನು ಉರುಳಾಡಿಸಿ ಆಟವಾಡಿ, ಅವುಗಳ ಮೇಲೆಯೇ ಮೂತ್ರ ವಿಸರ್ಜಿಸಿ, ಮನುಷ್ಯರೇ ಅವುಗಳನ್ನು ಹೆದರಿ ಮುಟ್ಟದೆ ದೂರ ಓಡುವಂತಾಗಿದ್ದು ವಿಷಾದನೀಯ ಸಂಗತಿ.



ಇವುಗಳ ಜೀವನ ಒಂದು ರೀತಿಯಲ್ಲಿ ಹಳ್ಳಿಗಾಡಿನಲ್ಲಿ ಸ್ವಚ್ಛಂದ ಬೆಳೆಯುವ ಮಕ್ಕಳಂತೆ. ಗುಂಪು ಗುಂಪಾಗಿ ಒಂದಕ್ಕೊಂದು ಆಗಾಗ ಕಿತ್ತಾಡಿಕೊಳ್ಳುತ್ತ, ಜೊತೆಯಾಗುತ್ತ ಸೌಹಾರ್ದಯುತವಾಗಿ ಇರುತ್ತವೆ. ಇಡೀ ಊರಿನ ಬೀದಿಬೀದಿ ಸುತ್ತುವುದಕ್ಕೆ ಹೋಗುತ್ತವೆ. ಮಣ್ಣಲ್ಲೋ, ಕೊಚ್ಚೆಯಲ್ಲೋ ಖುಷಿಯಿಂದ ಹೊರಳಾಡುತ್ತವೆ. ಒಂದು ಹೋಟೆಲ್ ಇಷ್ಟವಾಗದಿದ್ದರೆ ಮತ್ತೊಂದನ್ನು ಹುಡುಕಿ ಹೋಗುವಂತೆ, ಇಷ್ಟವಾದ ಕಡೆ ತಿನ್ನುತ್ತವೆ, ಬೇಡವೆಂದರೆ ಮೂಸಿನೋಡಿ ಮುಖ ತಿರುಗಿಸಿಕೊಂಡು ಹೋಗುತ್ತವೆ. ಇವುಗಳಿಗೆ ಹೆಸರೇ ಇರಬೇಕೆಂದು ಕಂಡೀಷನ್ ಇಲ್ಲ. ಕುರ್‍ರಾ ಕುರ್‍ರಾ, ಚ್ಚು ಚ್ಚು ಚ್ಚು ಎಂದರೆ ಸಾಕು, ಎಲ್ಲವೂ ಭೇದಭಾವವಿಲ್ಲದೆ ಬಾಲ ಅಲ್ಲಾಡಿಸಿಕೊಂಡು ಓಡಿಬರುತ್ತವೆ. 'ಹಚ್ಚಾ' ಎನ್ನುತ್ತಿದ್ದಂತೆ ಓಡುತ್ತವೆ. ಅವರಿವರ ಮನೆಯ ಮುಂದೆ ಹೊಲಸು ಮಾಡದೆ, ಬಯಲು ಶೌಚಾಲಯದಲ್ಲೇ ಎಲ್ಲ ಮುಗಿಸಿಕೊಂಡು ಬರುತ್ತವೆ. ಹೆಣ್ಣುನಾಯಿಗಳಿಗೆ ಬೀದಿಕಾಮಣ್ಣರ ಹಾಗೆ ಗುಂಪಾಗಿ ಲೈನ್ ಹೊಡೆಯುತ್ತಿರುತ್ತವೆ. ಇವುಗಳ ನಿಯಂತ್ರಣಕ್ಕೆ ಸರ್ಕಾರ ಆಗಾಗ ಸಂತಾನಹರಣ ಚಿಕಿತ್ಸೆ ಕೈಗೊಳ್ಳುವುದೂ ಇದೆ. ಆದರೆ ಇವುಗಳ ಸಂತತಿ ಮಾತ್ರ ಕಡಿಮೆಯಾಗುವ ಲಕ್ಷಣಗಳು ಕಾಣುವುದಿಲ್ಲ.

ಇಂತಹ ಸುಖ ಸಾಕುನಾಯಿಗಳಿಗಿಲ್ಲ ಎನ್ನಬಹುದು. ಇವುಗಳಿಗೆ ನಗರದಲ್ಲಿ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ ಮಕ್ಕಳ ಹಾಗೆ ಎಲ್ಲ ಸ್ಪೂನ್ ಫೀಡಿಂಗ್. ಹೆಚ್ಚಾಗಿ ಆಂಗ್ಲ ಹೆಸರುಗಳನ್ನೇ ಇಟಿರುತ್ತಾರೆ. ಮನೆಯಲ್ಲಿ ಒಂಟಿಪಿಶಾಚಿಯ ಹಾಗೆ ಬೆಲ್ಟ್ ಕಟ್ಟಿಸಿಕೊಂಡು, ಮನೆಯನ್ನೇ ವಾಕಿಂಗ್ ಗ್ರೌಂಡ್ ತರಹ ತಿರುಗಾಮುರುಗಾ ಪ್ರದಕ್ಷಿಣೆ ಹಾಕುತ್ತ ಅಲ್ಲಲ್ಲೇ ಅಲೆಯುತ್ತಿರುತ್ತದೆ. ಯಾರಿಗೆ ಬೊಗಳಬೇಕು, ಯಾರಿಗೆ ಕಚ್ಚಬೇಕು ಎನ್ನುವ ಗೊಂದಲದಲ್ಲಿರುವುದು ಹೆಚ್ಚು. ಪ್ರತಿದಿನವೂ ನೋಡಿದವರನ್ನೇ ನೋಡುತ್ತ, ಆಡಿದ ಆಟವನ್ನೇ ಆಡುತ್ತ ಬದುಕುವ ನೀರಸ ಜಗತ್ತು. ಬಿಸಿ ಊಟ, ಸ್ನಾನ, ಮೆತ್ತನೆ ಹಾಸಿಗೆ, ಬೆಚ್ಚನೆಯ ಸೂರು, ಜೊತೆಗೆ ಈಗಿನ ಜಂಕ್ ಫೂಡ್ ತರಹ ಡಾಗ್ ಫುಡ್ ಕೂಡಾ

ತಿಂದುಂಡು ದಷ್ಟಪುಷ್ಟವಾಗಿರುತ್ತವೆ. ಹಾಗಾಗಿ ವಾಕಿಂಗ್ ಹೋಗುವಾಗ ಮಾಲೀಕನೇ ಇದನ್ನು ಎಳೆದುಕೊಂಡು ಹೋಗುತ್ತಿರುತ್ತಾನೋ, ಇವುಗಳೇ ಮಾಲೀಕನನ್ನು ಎಳೆಯುತ್ತಿರುತ್ತವೆಯೋ ತಿಳಿಯುವುದು ಕಷ್ಟ. ಒಂದು, ಎರಡು ಏನೇ ಅವಸರವಾದರೂ ಮಾಲೀಕರು ಕರೆದೊಯ್ಯುವತನಕ ನಂಬರ್ ಕೌಂಟ್ ಮೊರೆಹೋಗುವಂತೆ ತಡೆದುಕೊಂಡು ಒದ್ದಾಡುತ್ತಿರುತ್ತವೆ. ಪ್ರತಿದಿನ ಅದೇ ದಾರಿ ಅದೇ ಬೀದಿಗೆ ಕರೆದುಕೊಂಡು ಹೋಗುವವರೇ ಹೆಚ್ಚು. ಹಾಗಾಗಿ ಇವುಗಳೂ ಸಹ ತಮ್ಮ ತಮ್ಮ ಶೌಚವನ್ನು ಇಂತಿಂಥವರ ಮನೆಯ ಮುಂದೆಯೇ ಮಾಡಬೇಕೆಂದು ಫಿಕ್ಸ್ ಮಾಡಿಕೊಂಡುಬಿಟ್ಟಿರುತ್ತವೆ. ಡೇಟಿಂಗ್, ಮೇಟಿಂಗ್ ಎಲ್ಲದಕ್ಕೂ ಅಪಾಯಿಂಟ್ಮೆಂಟ್ ತೆಗೆದುಕೊಂಡು ಕರೆದುಕೊಂಡು ಹೋಗಬೇಕು. ಎಲ್ಲಿಗಾದರೂ ಕೆಲದಿನಗಳು ಹೋಗುವುದಿದ್ದರೆ, ನಾಯಿಯನ್ನು ಮನೆಕಾಯಲು, ಒಬ್ಬರನ್ನು ನಾಯಿಗೆ ಕಾವಲು ಬಿಟ್ಟು ಹೊರಡಬೇಕು. ಅಥವಾ ಮಕ್ಕಳನ್ನು ಕೇರ್ ಸೆಂಟರ್‌ಗೆ ಬಿಡುವ ಹಾಗೆ ಇವುಗಳನ್ನೂ ಡಾಗ್ ಕೇರ್ ಸೆಂಟರ್‌ಗೆ ಬಿಟ್ಟು ಹೋಗಬೇಕು. ಹಾಗಾಗಿ ಇವುಗಳ ಚಾಕರಿಗೆ ಸಿದ್ಧರಿರುವವರು ಮಾತ್ರ ಸಾಕಬೇಕು.

ಬೀದಿನಾಯಿಗಳ ಮೇಲೆ ಅತಿ ಹೆಚ್ಚು ಕಂಪ್ಲೇಂಟ್ ಹೋದಾಗ ಮಾತ್ರ, ಕಾರ್ಪೋರೇಷನ್ ಗಾಡಿಗಳಲ್ಲಿ ಅವುಗಳನ್ನು ಎತ್ತಿಹಾಕಿಕೊಂಡು ಹೋಗುವ ಶೋ ನಡೆಯುತ್ತದೆ. ಹಾಗಂತ ಇವುಗಳ ಹಾವಳಿ ಕಡಿಮೆಯಾಯಿತು ಎಂದು ನಿಶ್ಚಿಂತೆಯಿಂದಿರಲಾಗದು. ಬಾಡಿಗೆ ಮನೆ ಖಾಲಿಯಾಗುತ್ತಿದ್ದಂತೆ, ಹೊಸ ಬಾಡಿಗೆದಾರರು ಬಂದು ಸೇರಿಕೊಂಡಂತೆ, ಬೀದಿಯನ್ನು ಖಾಲಿ ಬಿಡದೆ ಕೆಲವೇ ದಿನಗಳಲ್ಲಿ ಹೊಸ ಹೊಸ ಸದಸ್ಯರು ಸೇರಿಕೊಳ್ಳುವುದಿದೆ. ಬೀದಿನಾಯಿಗಳು ಆಗಾಗ ಕಂಡಕಂಡವರ ಮೇಲೆ ದಾಳಿ ಮಾಡಿ ಪೇಪರಿನಲ್ಲಿ ಸುದ್ದಿಯಾಗುತ್ತಲೇ ಇರುತ್ತವೆ. ಸಾಕುನಾಯಿಗಳು ಕೆಲವೊಮ್ಮೆ ಮನೆಯವರ ಮೇಲೆಯೇ ದಾಳಿ ಮಾಡುವುದರಿಂದ ಅಷ್ಟು ಸುದ್ದಿಯಾಗುವುದಿಲ್ಲ. ಅವುಗಳು ಕಳೆದುಹೋಗಿ, ಮಾಲೀಕ ಹುಡುಕಿಕೊಡಲು ಜಾಹೀರಾತು ಕೊಟ್ಟಾಗ ಅಥವಾ ಡಾಗ್‌ಶೋ ಅಂತ ಕಡೆಗೆ ಡ್ರೆಸ್ಸಪ್ ಆಗಿ ಹೋದಾಗ ಮಾತ್ರ ಪೇಪರಿನಲ್ಲಿ ಸುದ್ದಿಯಾಗಬಹುದು. ಬೀದಿನಾಯಿಯ ತರಹ ಅದೆಲ್ಲಿ ಅಂಡಲೆದರೂ ಮತ್ತೆ ಅದೇ ಬೀದಿಗೆ ಬರುವಷ್ಟು ಜಾಣತನ ಇರುವಂತೆ, ಸಾಕುನಾಯಿಗಳಿಗಿರುವುದು ಕಡಿಮೆ. ಅಕಸ್ಮಾತ್ ಕಳೆದುಹೋದರೆ ಋಣ ತೀರಿತು ಎಂದು ಕೈಮುಗಿದು ಸುಮ್ಮನಾಗಬೇಕು. ಸಾಕುನಾಯಿಗಳಿಗೆ ಲಸಿಕೆ ಹಾಕಿಸಿರುತ್ತಾದ್ದರಿಂದ ಕಡಿದರೂ ಅಷ್ಟೇನು ಗಾಬರಿಯಾಗುವುದಿಲ್ಲ. ಬೀದಿನಾಯಿಗಳು ಕಡಿದರೆ ಮಾತ್ರ ಹೋಲ್‌ಸೇಲ್ ಆಗಿ ಚುಚ್ಚುಮದ್ದುಗಳಿಗೆ ದೇಹವನ್ನೊಡ್ಡಬೇಕು.

ಕೊನೆಗಾಲದಲ್ಲಿ ಸಾಕುನಾಯಿಗಳಿಗೆ ವಿಧಿವಿಧಾನದ ಮೂಲಕ ಅಂತ್ಯಸಂಸ್ಕಾರ ಮಾಡುವವರಿದ್ದಾರೆ. ಬೀದಿನಾಯಿಗಳು ಮಾತ್ರ ಅಂತ್ಯಕಾಲದಲ್ಲಿ ಎಲ್ಲಿಗೆ ಹೋಗುತ್ತವೆಯೋ, ಹೇಗೆ ಅಂತ್ಯ ಕಾಣುತ್ತವೆಯೋ ತಿಳಿಯುವುದು ಕಡಿಮೆ. ಆದರೆ ಜೀವಂತ ಇರುವ ತನಕ ಬೀದಿಯನ್ನು ಸದಾ ಚಟುವಟಿಕೆಯಿಂದ ಇಡುವುದರಲ್ಲಿ ಬೀದಿನಾಯಿಗಳ ಪಾತ್ರ ದೊಡ್ಡದು. ಬೀದಿ ಬೀದಿಗಳ ಕಳೆ ಹೆಚ್ಚಿಸುವ ಬೀದಿಭೂಷಣ ಬೀದಿನಾಯಿಗಳಿಗೂ ಒಮ್ಮೆ ಜೈ ಎನ್ನೋಣವೇ? ■

---

**ಪದಬಂಧದ ಉತ್ತರಗಳು :**

**ಎಡದಿಂದ ಬಲಕ್ಕೆ :** 1.ಪರಾಕು 3.ಉದಾರ 6.ಮಹಾನುಭಾವ 7.ಕರಿ 8.ನದಿ 10.ನಾಕ 13.ಸೂತ 15.ಮಂಗಳಸೂತ್ರ 17.ನಿರ್ಮಲ 15.ರಜಕ

**ಮೇಲಿನಿಂದ ಕೆಳಕ್ಕೆ :** 1.ಪರಾಗ 2.ಕುರಿಮರಿ 3.ಉಪವನ 4.ರಹಸ್ಯ 5.ಅನುಜ 7.ನಾಯಕ 9.ದಿಗಂತ 11.ಕಮಂಡಲ 12.ಕಳಪೆ 13.ಸೂತ್ರಧಾರ 14.ಅವನಿ 16.ಬಾಲಕ

# ಆನ್‌ಲೈನ್ ಮತ್ತು ಆನ್ ಲೇನ್ ಪಂಥಾಹ್ವಾನ

**ಕೆ.ಎಸ್.ಸೋಮೇಶ್ವರ**

ಈಗ ಯಾರ ಕೈಲ್ನೋಡಿದರೂ ಮೊಬೈಲುಗಳೇ ರಿಂಗಣಿಸುತ್ತ ನಲಿಯುತ್ತಿರುತ್ತವೆ. ತಂತ್ರಜ್ಞಾನದ ಮುಂದುವರಿಕೆ ಅಂದರೆ ಇದೇ ಅಲ್ಲವೇ? ಈ ಮೊಬೈಲ್ ಎಲ್ಲ ರೀತಿಯ ಆಟಗಳನ್ನು ನಮ್ಮಿಂದ ಆಡಿಸಲಾರಂಭಿಸಿದೆ. ಅದರ ಒಂದು ಭಾಗವಾದ್ದು ಆನ್‌ಲೈನ್ ಷಾಪಿಂಗ್. ಮೊದಮೊದಲು ಬರಿಯ ಕಂಪ್ಯೂಟರಿನಿಂದ ಕೆಲವು ನಿರ್ದಿಷ್ಟ ವಸ್ತುಗಳನ್ನು ತರಿಸುವ ಕೆಲಸ ಮಾತ್ರ ನಡೆಯುತ್ತಿತ್ತು. ಈಗ ಮೊಬೈಲೇ ನಮಗೆ ಪ್ರಾಣಾಧಾರವೆಂಬಂತಾಗಿದೆ. ಅದರಲ್ಲಿ ಬಹು ಮುಖ್ಯವಾದುದು ಆನ್‌ಲೈನ್ ಕೊಳ್ಳುವಿಕೆ. ಇದಂತೂ ದೇಶದ ಯಾವುದೇ ಭಾಗಗಳಿಂದಲಾದರೂ (ಕೆಲವು ವಿದೇಶದವೂ) ಬಂದು ನಮ್ಮ ಕೈ ಸೇರಿಸುತ್ತದೆ. ಇದಕ್ಕಾಗಿಯೇ ಟೊಂಕ ಕಟ್ಟಿ ನಿಂತಿರುವ ಅಮೆಜಾನ್, ಫ್ಲಿಪ್‌ಕಾರ್ಟ್ ಜೊತೆಗೆ ಬಿಗ್ ಬ್ಯಾಸ್ಕೆಟ್, ಜೊಮ್ಯಾಟೊ ಹೀಗೆ ಹತ್ತು ಹಲವು ನಿಮಗೆ ಬೇಕಾದುದನ್ನು ಹೆಕ್ಕಿ ತರುತ್ತವೆ. ಇದು ಬಟ್ಟೆ ಬರೆಗಳಾಗಿರಬಹುದು ಹಲವು ಉಪಕರಣಗಳು, ದಿನಸಿ, ತರಕಾರಿ ಇವೇ ಅಲ್ಲದೇ ಬಗೆ ಬಗೆಯ ತಿನಿಸುಗಳೂ ಹಾಟ್ ಆಗಿ ನಿಮಗೆ ತಲುಪುತ್ತಿರುತ್ತವೆ. ಇದಕ್ಕೆ ದಿನದ ಕಾಲಮಿತಿಯಂತೂ ಇಲ್ಲವೆ ಇಲ್ಲ. ಹಗಲೇನು ಇರುಳೇನು ಎಂಬಂತೆ ಇವು ನಾವು ಮನೆಯಲ್ಲೇ ಆರಾಮ ಕುರ್ಚಿಯಲ್ಲಿ ಕುಳಿತು ಆನಂದಿಸಲು ಅನುವು ಮಾಡುತ್ತದೆ. ಈಗಂತೂ ವೈದ್ಯರ ಸಲಹೆ ಮತ್ತು ಅವರ ಸಲಹೆಯ ಔಷಧ ಕೂಡ (ಚುಚ್ಚುಮದ್ದು?) ಮನೆಬಾಗಿಲಿಗೇ ಬಂದು ಬೀಳುತ್ತವೆ. ಎವೆರಿಥಿಂಗ್ ಅಟ್ ಯುವರ್ ಡೋರ್ ಸ್ಟೆಪ್. ಇನ್ನು ಹಬ್ಬಗಳ ಧಮಾಕ ಎಂದು ಬಗೆಬಗೆಯ ರಿಯಾಯಿತಿಗಳೂ ಕಣ್ಣ ಮುಂದೆ ತೇಲಾಡುತ್ತಿರುತ್ತವೆ. ಈ ರೀತಿಯ ಆನ್‌ಲೈನ್‌ನಲ್ಲಿನ ಕೆಲವು ಗುಣಗಳನ್ನು ಹೇಳ ಹೊರಟರೆ ಇವುಗಳಲ್ಲಿ ನೀವು ಆಯ್ದ ವಸ್ತುಗಳು ಬರುವ ವರೆಗೂ ಅದರ ಮೈದಡವಿ ಅನುಭವಿಸುವ ಸೌಭಾಗ್ಯ ಇರುವುದಿಲ್ಲ. ಎಲ್ಲ ಚಿತ್ರಗಳ ಚಿತ್ತಾರದಿಂದ ಮಾತ್ರ. ಆನ್‌ಲೈನ್ ವಹಿವಾಟಿನಿಂದಾಗಿ ಅನೇಕ ಸಣ್ಣ ಪುಟ್ಟ ವ್ಯಾಪಾರಿಗಳು ಅದರಲ್ಲೂ ದಿನಸಿಯವರುಗಳು ಲಕ್ಷ್ಮೀಕಟಾಕ್ಷದಿಂದ ದೂರವಾದರು. 'ಈ ದೇಹದಿಂದ ದೂರವಾದೆ ಏಕೆ ಲಕುಮಿಯೇ...' ಅಂತ ಹಾಡುತ್ತಿದ್ದಾರೆ ಅಂತ ಅನೇಕ ಮಾರುಕಟ್ಟೆ ಸಮೀಕ್ಷೆಗಳು ಹೇಳುತ್ತಿವೆ. ಇಷ್ಟೊಂದು ಆನ್‌ಲೈನ್ ವಹಿವಾಟಿನಲ್ಲಿ ಜನಗಳು ಮನೆಯೊಳಗೇ ಇದ್ದು ಕಳೆದು ಹೋಗಿದ್ದಾರೇನೋ ಅಂತ ನೋಡುತ್ತ ಹೋದರೆ ಅದೇನೂ ಕಾಣುತ್ತಿಲ್ಲ. ಇದಕ್ಕೆ ಈಗ ಬಂದಿರುವ ಪ್ರಯಾಣಿಕರನ್ನು ಮನೆಬಾಗಿಲಿನಿಂದಲೇ ಕರೆದೊಯ್ಯಲು ವ್ಯವಸ್ಥೆ ಮಾಡುವ ಅನೇಕ ಮೋಟಾರ್ ಬುಕಿಂಗ್ ಆಪ್‌ಗಳು. ಅದೊಂದು ಪೀಠೋಪಕರಣಗಳ ಮಾರಾಟ ಸಂಸ್ಥೆ ಯಾವಾಗಲೂ ಮನೆಗೆ ಬನ್ನಿ' ಎಂದು 'ತೆರೆದಿದೆ ಮನೆ ಓ ಬಾ ಅತಿಥಿ, ಹೊಸ ಬೆಳಕಿನ ಹೊಸ ರಾಗ' ಎನ್ನುತ್ತ ಆಹ್ವಾನಿಸುತ್ವದೆ

ಇದನ್ನು ಒಂಚೂರು ಸರಿಸಿ ಈಗ ನಮ್ಮ ತಲೆತಲಾಂತರದ ಆನ್ ಲೇನ್‌ಗೆ ಬಂದು ಸೇರೋಣವೇ. ಇದನ್ನು ಕೆಲವೊಮ್ಮೆ ಬೀದಿಬದಿ ವ್ಯಾಪಾರ ಎಂತಲೂ ಹೇಳಬಹುದಾಗಿದೆ. ಮನೆಯ ಮುಂದೆ ಗಾಡಿಯಲ್ಲಿ ಹಣ್ಣು, ತರಕಾರಿ ಮುಂತಾದವು ಬರೋಲ್ವೆ. ಇದನ್ನು ನಾವುಗಳು ತಲೆಮಾರಿನಿಂದ ನೋಡಿ ನಲಿದು ಅನುಭವಿಸಿ ಮಾಡುವ ಕೊಳ್ಳಾಟ ಅಲ್ಲವೇ. ರಸ್ತೆಬದಿಯಲ್ಲಿ ವ್ಯಾಪಾರ ಮಾಡುವಾಗ ಸರಿಯಾದ ತೂಕ, ಹೂವಾದರೆ ಮೊಳದ ಅಳತೆ ಇವೆಲ್ಲ ಆನ್ ಲೇನ್‌ನಲ್ಲಿ ಮಾತ್ರ ಲಭ್ಯವೇ ಹೊರತು ಆನ್‌ಲೈನ್‌ನಲ್ಲಿ ಅಲ್ಲವೇ ಅಲ್ಲ. ಇದು ಬರಿಯ ರಸ್ತೆಬದಿ ವ್ಯಾಪಾರಕ್ಕೆ ಸೀಮಿತವಲ್ಲ. ಮೊದಲೆಲ್ಲಾ ದಿನಸಿ


ಅಂಗಡಿಗೆ ನಾವು ಮುಗಿಬಿದ್ದು ಹೋಗುತ್ತಿದ್ದೆವು. ಕಾರಣ ಅಲ್ಲಿ ಅವರುಗಳು ಕಟ್ಟುತ್ತಿದ್ದ ಶಂಖಾಕೃತಿಯ ಪೇಪರ್ ಪೊಟ್ಟಣಗಳು. ಬಟ್ಟೆ ಅಂಗಡಿಗಳು, ಆಭರಣಗಳು ಇವೆಲ್ಲವನ್ನು ಕಣ್ಣಾರೆ ನೋಡಿ ಅವುಗಳ ಸ್ಪರ್ಶವನ್ನು ಅನುಭವಿಸಿ ಮಾಡುವ ವ್ಯಾಪಾರ ಬೇರೆಡೆ ಹೇಗೆ ದೊರೆಯಲು ಸಾಧ್ಯ ಹೇಳಿ. ಇಲ್ಲಿ ತಿನಿಸುಗಳು ಎಕ್ಸೆಪ್ಷನ್. ಏಕೆಂದರೆ, ಅಲ್ಲಿ ಸ್ಯಾಂಪಲ್ ಸವಿದು ಮುಂದುವರಿಯಲಾಗಲ್ಲ. ಅದರಲ್ಲೂ ಕೆಲವು ಚಿಪ್ಸ್, ಚುರುಮುರಿ, ಕಾರಸೇವೆ ಇಂತಹ ಎಡೆಗಳಲ್ಲಿ ನಮಗೆ ಒಂಚೂರು ಸ್ಯಾಂಪಲ್ ಕೈಗೆ ಹಾಕಿ ಅದು ನಮ್ಮ ರಸನವನ್ನು ಹೇಗೆ ತಣಿಸಿದೆ ಎಂದು ಆಸೆಗಣ್ಣುಗಳಲ್ಲೇ ನೋಡುತ್ತ ನಮ್ಮ ಕ್ಯಾರಿ ಬ್ಯಾಗ್ ತುಂಬಿಸುವ ಕೆಲಸ ಮಾಡಿ ಧನ್ಯೋಸ್ಮಿ ಆಗುತ್ತಾರೆ. ಬಟ್ಟೆ ಕೊಳ್ಳುವಾಗಲಂತೂ ಹತ್ತು ಹಲವು ಮಾದರಿಯವುಗಳನ್ನು ತೆಗೆಸಿ ತಡವಿ ಅವುಗಳ ಮಧುರ ವಾಸನೆಯನ್ನು ಅನುಭವಿಸಿ ಮೈಮೇಲೆ ಇರಿಸಿ ಕನ್ನಡಿಯಲ್ಲಿ ಅವಲೋಕನ ಮತ್ತು ಟ್ರಯಲ್ ರೂಂ ಧಾರಣೆ ಇವೆಲ್ಲ ಆನ್ ಲೇನ್‌ನಲ್ಲೇ ಸಾಧ್ಯವೇ ಹೊರತು ಆನ್‌ಲೈನ್‌ನಲ್ಲಿ ಆಗುವುದಿಲ್ಲ. ಇನ್ನು ಹತ್ತಾರು ತೆಗೆಸಿ, ಅದರ ಬೆಲೆ ಕೇಳಿ ಚೌಕಾಸಿ ಮಾಡಿ ವ್ಯಾಪಾರವೋ ಇಲ್ಲ ರಿಜೆಕ್ಟ್ ಮಾಡುವುದು ಇಲ್ಲಿ ಸಾಧ್ಯ. ಇದು ಸಾಮಾನ್ಯ ಮಾರುಕಟ್ಟೆಗಳಲ್ಲಿ ಮಾತ್ರ ಲಭ್ಯ. ಈ ಚೌಕಾಸಿ ವ್ಯವಹಾರ ನಿಪುಣತೆ ದೊಡ್ಡ ವ್ಯಾಪಾರಿ ಸಂಕೀರ್ಣಗಳಲ್ಲಿ ದೊರೆಯುವುದಿಲ್ಲ. ಹಬ್ಬ ಹರಿದಿನಗಳು ಬಂದರೆ ಸಾಕು, ಲಕ್ಷ್ಮೀಕಟಾಕ್ಷ ನಿಮ್ಮಗಳ ಮೇಲಿರಲಿ ಎಂಬಂತೆ ಜಾಹೀರಾತುಗಳು ದೃಶ್ಯ, ಮುದ್ರಣ ಮಾಧ್ಯಮಗಳಲ್ಲಿ ದಿನಗಟ್ಟಲೆ, ಪುಟಗಟ್ಟಲೆ ಬರುತ್ತಿರುತ್ತವೆ



ಇನ್ನು ಆನ್‌ಲೈನ್‌ನಿಂದ ರಸ್ತೆಗಳಲ್ಲಿ ಜನಜಂಗುಳಿ ಕಡಿಮೆಯಾಗಿಹೋಗಿದೆಯೇ? ಉಹುಂ. ಅದು ಸುತರಾಂ ಇಲ್ಲವೇ ಇಲ್ಲ. ಹಬ್ಬ ಹರಿದಿನಗಳು, ಸಾಲು ಸಾಲು ರಜೆ ಈ ಸಮಯದಲ್ಲಿ ನೋಡಿ; ಯಾವುದೇ ಮಾರುಕಟ್ಟೆಯಾಗಿರಲ್ಲಿ ಜನಗಳ ಗೌಜು ನೋಡಲಸದಳ. ಬನಶಂಕರಿಯ ಮಾರುಕಟ್ಟೆಯಿಂದ ಮೊದಲಾಗಿ ಜಯನಗರ, ಗಾಂಧಿಬಜಾರ, ಸಿಟಿ ಮಾರುಕಟ್ಟೆ, ಮೆಜೆಸ್ಟಿಕ್, ಮಲ್ಲೇಶ್ವರ, ಶಿವಾಜಿನಗರ, ಅಲಸೂರು ಎಲ್ಲೇ ಹೋದರೂ ಆಕಾಶವೇ ಸೂರು, ಭೂಮಿಯೇ ಮೈದಾನವೆಂಬಂತೆ ಜನಗಳು ಸೇರಿರುತ್ತಾರೆ. ಇನ್ನು ದೊಡ್ಡ ದೊಡ್ಡ ಮಾಲ್‌ಗಳು ಅಂದರೆ ವ್ಯಾಪಾರಿ ಸಂಕೀರ್ಣಗಳಲ್ಲಿ ನೋಡಿ ಸಂಜೆಗೆಂಪು ಮೂಡಿದರೆ ಸಾಕು ಅಲ್ಲಿಗೆ ಬರುವ ಕೊಳ್ಳುಬಾಕರು. ಇಲ್ಲಿ ಕೆಲವರು ವಿಂಡೋ ಷಾಪಿಂಗ್ ಕೂಡ ಮಾಡುವವರಿರುತ್ತಾರೆ. ಇನ್ನು ಈ ಮಾಲ್‌ಗಳಲ್ಲಿ ಸೇರಿರುವ ಜನಜಾತ್ರೆಯನ್ನು ಅಳೆಯಬೇಕಾದರೆ ಅಲ್ಲಿ ತಿನಿಸುಗಳ ಹವಾಕ್ಕೆ ಹೋಗಬೇಕು. ಅದು ಸಾಮಾನ್ಯ ಅತಿ ಮೇಲಿನ ಮಹಡಿಯಲ್ಲಿರುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿ, ಬಂಗಾಳದಿಂದ ಬಾಂಬೆವರೆಗೂ ಬಗೆಬಗೆಯ ತಿನಿಸುಗಳು ಸಿಗುತ್ತವೆ. ಅಲ್ಲಿನ ತಿನಿಸು ಮಂದಿರಗಳ ಹೆಸರೇ ರಮ್ಯ ಚೈತ್ರ ತಾಣ. ಕೈಲಾಷ್ ಪರ್ವತ್, ಶಿವ ಸಾಗರ, ರಾಜಧಾನಿ, ಪುರಾನಿ ದಿಲ್ಲಿ, ಆಲ್ ಬೆಕ್, ಹಳ್ಳಿ ಮನೆ ಇನ್ನೂ ಮತ್ತಷ್ಟು ಇರುತ್ತವೆ.

ಇನ್ನು ತಿನಿಸುಗಳಿಗೆ ಬಂದರೆ ರಸ್ತೆಗಳು ತುಂಬಿ ತುಳುಕುತ್ತಿರುತ್ತವೆ. ಮನೆಬಾಗಿಲಿಗೆ ತಲುಪಬಹುದಾದರೂ ಅಲ್ಲೇ ತಮಗಳ  ಪಾದಯಾತ್ರೆ ಮಾಡಿ ಸವಿಯುವ ಗ್ರಾಹಕರೇನು ಕಡಿಮೆಯಾಗಿಲ್ಲ ಮೊದಲೆಲ್ಲಾ ಸ್ಟ್ರೀಟ್ ಫುಡ್‌ಗಳು ಸಮಯದ ಪರಿಮಿತಿಯಲ್ಲಿದ್ದವು. ಅದೂ ಸಂಜೆ ವೇಳೆ. ಈಗ ಹಾಗಿಲ್ಲ. ಹಗಲಿರುಳು ಅವುಗಳು ಜನಸೇವೆಯೇ ಜನಾರ್ದನ ಸೇವೆ ಮಾಡುತ್ತಿರುತ್ತವೆ. ಈಗಂತೂ ಕೆಲವು ರಿಂಗ್  ರಸ್ತೆಗಳಲ್ಲಿ ಮಧ್ಯರಾತ್ರಿಯಿಂದ ಆರಂಭವಾಗಿ ಬೆಳಗಿನ ಜಾವವೂ ಉಣಿಸುವ ತಾಣಗಳಿವೆ. ಇವೇನೂ ಖಾಲಿ ದೋಸೆಯಂತೆ ಖಾಲಿ  ಕುಳಿತಿರುವುದಿಲ್ಲ. ಜನಗಳ ಸಾಲು ಸಾಲೇ ಇರುತ್ತದೆ. ಅದರ ಮುಂದುವರಿದ ಭಾಗವಾಗಿ ಬೆಳಗಿನ ವೇಳೆ ಮತ್ತು ಮಧ್ಯಾಹ್ನ ತಿನಿಸುಮನೆಗಳಲ್ಲಿ ತಿನ್ನಲು ಸ್ಲಾಟ್ ದೊರೆಯಲೇ ಸಮಯ ಬೇಕಾಗುತ್ತದೆ.

ಇಷ್ಟೆಲ್ಲಾ ಸುಗುಣಗಳನ್ನು ಹೊಂದಿರುವ ಆನ್‌ಲೇನ್ ವ್ಯಾಪಾರ ಹೇಗೆ ಕಡಿಮೆ ಎನ್ನಲು ಸಾಧ್ಯ? ಅಲ್ಲಿರುವ ಜನಜಂಗುಳಿಯೇ ಅದಕ್ಕೆ ಟಿ.ಆರ್.ಪಿ ಕೊಟ್ಟು ಜೈಸಿರುತ್ತಾರೆ. ಹೀಗಿರುವಾಗ ಆನ್‌ಲೈನ್ ಎಂಬುದು ಎಂದಿಗೂ ಆನ್ ಲೇನ್‌ಗೆ ಸರಿಸಾಟಿಯಲ್ಲ, ಅಲ್ಲ, ಅಲ್ಲವೇ ಅಲ್ಲ. ■



# ಬೊಚ್ಚಬಾಯಿ ಬಕಾಸುರ

ಪ್ರಭಾ

ಹಲ್ಲು ಕಿತ್ತಿಸಿಕೊಂಡ ಕರುಣಾಜನಕ ಪ್ರಸಂಗವನ್ನು ಕೆಲವು ತಿಂಗಳುಗಳ ಹಿಂದೆ ನಿಮಗೆ ಹೇಳಿದ್ದೆ ನೆನಪಿದೆಯೇ? ಮತ್ತೆ ಹಲ್ಲು ಕಟ್ಟಿಸಿಕೊಂಡ ಕತೆಯನ್ನು ಇನ್ನೊಮ್ಮೆ ನಿಮಗೆ ಬಿಡುವು ಮಾಡಿಕೊಂಡು ಹೇಳುತ್ತೇನೆ ಅಂತಲೂ ಹೆದರಿಸಿದ್ದೆ ತಾನೇ? ಈಗ ಹಲ್ಲು ಕಟ್ಟಿಸಿಕೊಂಡ ಕತೆಯ ಬದಲು ಒಂದು ಇಂಟರಮಿಡಿಯೇಟ್ ಕತೆಯನ್ನು ನಿಮಗೆ ಹೇಳಲೇಬೇಕು ಎನ್ನುವ ಒತ್ತಡ ಒದೀತಾ ಇದೆ. ಈಗ ಅದಕ್ಕೇ ಬಂದೆ.

ಬಾಯಲ್ಲಿ ಎರಡು ಹಲ್ಲು ಕೆಳಗಡೆ ದವಡೆದು ಒಂದು ಮತ್ತು ಮೇಲಿನ ಸಾಲಿನ ಎಡ ಕೋರೆಹಲ್ಲು ಬಿಟ್ಟು ಮಿಕ್ಕಿದ್ದು ಕಿತ್ತುಹಾಕಿದ್ದರು. ಇವೆರಡನ್ನು ಯಾಕೆ ಬಿಟ್ಟರು ಅಂದರೆ ದವಡೆಹಲ್ಲು ಇನ್ನೂ ಅಷ್ಟು ವರ್ಷ ಇರುತ್ತೆ ಅಂತ. ಇನ್ನು ಕೋರೆಹಲ್ಲು ಯಾಕೆ ಬಿಟ್ಟಿದ್ದರು ಅಂದರೆ ಅದಕ್ಕೆ ಐದು ವರ್ಷ ಹಿಂದೆಯೇ ರೂಟ್ ಕೆನಾಲ್ ಎನ್ನುವ ಸಂಸ್ಕಾರ ಆಗಿತ್ತಂತೆ. ಹಲ್ಲು ಗಟ್ಟಿಯಿದೆ. ಇರಲಿ ಅನ್ನುವ ಉದ್ದೇಶ ಅಂತ ತಿಳಿಸಿದರು. ಹೇಗಿದ್ದರೂ ಇಂಪ್ಲಾಂಟ್ ಮಾಡಿಸ್ಕೋತಿರಲ್ಲಾ, ಆಗ ಇವೆರಡರ ಉಪಯೋಗ ಆಗುತ್ತೆ ಅಂತ ಹಲ್ಲಿಗೆ ಒಂದು ಜಾಗ ಮಾಡುವುದಾಗಿ ಹೇಳಿದ್ದರು. ಹಲ್ಲಿನ ಅಳತೆ ತೆಗೆದುಕೊಳ್ಳುವ ಮೊದಲು ಹಲ್ಲು ಕಿತ್ತು ಗುಳಿ ಬಿದ್ದಿರುವ ಜಾಗ ತುಂಬಿಕೊಳ್ಳಬೇಕು, ಅದರಿಂದ ಈ ಪ್ರಕ್ರಿಯೆಗೆ ಆರು ವಾರ ಹಿಡಿಯಬಹುದು ಎಂದು ಹೇಳಿದ್ದರು ತಾನೇ. ನನ್ನ ಪ್ರಾಬ್ಲಂ ಶುರು ಆಗಿದ್ದು ಈಗ!

ಮುಕ್ಕಾಲು ಶತಮಾನ ಅಭ್ಯಾಸ ಆಗಿರೋ ಊಟ ತಿಂಡಿಯನ್ನು ಬದಲಾಯಿಸಬೇಕಾದ ಸ್ಥಿತಿ ಯಾವ ಶತ್ರುವಿಗೂ ಬೇಡ.

ಗಟ್ಟಿ ಪದಾರ್ಥ ತಿನ್ನಲು ಆಗದೇ ಇರೋದು ದೊಡ್ಡ ಸಮಸ್ಯೆ ಆಯಿತು ಅಂದೆನಲ್ಲಾ, ಅದರ ಪರಿಹಾರ ಹೇಗೆಂದು ಕಂಡುಹಿಡಿದುಕೊಂಡೆ ಅಂದರೆ ಕುಟ್ಟನಿ ತಂದು ಇಟ್ಟುಕೊಂಡ ಕತೆ ನಿಮಗೆ ಹೇಳಿದೀನಿ ಅಂತ ಕಾಣುತ್ತೆ. ಚಕ್ಕಲಿ ಕೋಡುಬಳೆ ಪುಡಿ ಮಾಡಿಕೊಂಡು ತಿಂತಾ ಇದ್ದೆ, ಇದನ್ನೂ ನಿಮಗೆ ಹೇಳಿದ ನೆನಪು. ಅದು ಬಿಡಿ; ಊಟದ ಕತೆಗೆ ನಿಮ್ಮನ್ನು ಒಡ್ಡಬೇಕು. ಅದೇ ದೊಡ್ಡ ಕತೆ. ಈಗ ಅದಕ್ಕೆ ಬರಲೇ...?

ನಮ್ಮ ಮನೆಯ ಹಿಂದೆ ಹೋಳಿಗೆಮನೆ ಅಂತ ಒಂದು ಒಬ್ಬಟ್ಟು ತಯಾರು ಮಾಡುವ ಅಂಗಡಿ. ಅಲ್ಲಿ ಒಂದು ಮೂವತ್ತು ರೀತಿಯ ಹೋಳಿಗೆ ತಯಾರಿಸ್ತಾರೆ. ಕ್ಯಾರಟ್, ಬೀಟ್ರೂಟ್ ಇಂದ ಹಿಡಿದು ಕಾಯ್ದು, ಹಲವು ರೀತಿಯ ಬೇಳೆದು, ಹಲಸು, ಮಾವು... ಹೀಗೆ ಅದೇನೇನೋ ನೀವು ಈ ತನಕ ಕೇಳಿರದ ವೈವಿಧ್ಯಮಯ ಒಬ್ಬಟ್ಟು ಅಲ್ಲಿ ತಯಾರಾಗುತ್ತೆ. ಅಲ್ಲಿ ಹೋಗಿ ಐದು ಕಾಯಿಒಬ್ಬಟ್ಟು, ಐದು ಬೇಳೆಒಬ್ಬಟ್ಟು ಆರ್ಡರ್ ಮಾಡ್ತೀರಿ. ಹೆಚ್ಚು ರಷ್ ಇಲ್ಲ ಅಂದರೆ ಐದಾರು ಅಥವಾ ಹತ್ತು ನಿಮಿಷದಲ್ಲಿ ನಿಮ್ಮ ಆರ್ಡರ್ ರೆಡಿ. ಜನ ಜಾಸ್ತಿ ಇದ್ದರೆ ಕಾಯಬೇಕು. ಏನು ಅಂತ ಗಂಟೆಗಟ್ಟಲೆ ಕಾಯಬೇಕಿಲ್ಲ, ಸ್ವಲ್ಪ ಹೊತ್ತು ಅಷ್ಟೇ.

ಈ ಸ್ವಲ್ಪ ಹೊತ್ತಿನಲ್ಲಿ ನೀವೇನು ಮಾಡ್ತೀರಿ? ನಾನೂ ಸಹ ಅದನ್ನೇ ಮಾಡೋದು. ಅಂಗಡಿಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿ ಇಟ್ಟಿರುವ, ನೀವು ಮೊದಲ ಬಾರಿಗೆ ನೋಡುತ್ತಿರುವ, ಕೆಲವು ನಿಮಗೆ ಗೊತ್ತಿರುವ ತಿಂಡಿಸಾಮ್ರಾಜ್ಯದ ಕಡೆ ಕುತೂಹಲದ ನೋಟ ಹರಿಸುತ್ತೀರ ತಾನೇ?

ಅಲ್ಲಿ ನೀಟಾಗಿ ಪೇರಿಸಿಟ್ಟಿರುವ ತಿಂಡಿಗಳನ್ನು ನೋಡುತ್ತಾ ಇದ್ದರೆ ನನಗೆ ನನ್ನ ಮೇಲೆ ಹಾಗೂ ನನ್ನ ದೈವದ ಮೇಲೆ ಅಸಾಧ್ಯ ಕೋಪ ಉಕ್ಕಿ ಹರಿಯುತ್ತದೆ.



ಅಲ್ಲಿ ನೀಟಾಗಿ ಪೇರಿಸಿಟ್ಟಿರುವ ತಿಂಡಿಗಳ ಕತೆ ಏನು ಅಂದರೆ, ಹಲ್ಲಿರುವ ಹುಲು ಮಾನವರಿಗೆ ಮಾಡಿರು–ವಂತಹುದು! ಚಕ್ಕಿ, ಕೋಡುಬಳೆ, ನಿಪ್ಪಟ್ಟು, ಕಡಲೆ ಬೀಜ, ತೆಂಗೋಳು, ಖಾರಾ ಮಿಕ್ಚರು, ಕಡುಬು... ಹೀಗೆ ಹೆಸರು ಗೊತ್ತಿರೋ ಕೆಲವು ಮತ್ತು ಹೆಸರು ಗೊತ್ತಿಲ್ಲದಿರುವ ಹಲವು ಸಾವಿರ ತಿನಿಸು ಓನ್ಲಿ ಫಾರ್ ಪೀಪಲ್ ವಿತ್ ಥರ್ಟಿ–ಫೋರ್ ಟೀತ್(ಇದು ಟೀತಾ ಅಥವಾ ಟೂತಾ...? ಯಾರಾದರೂ ಇಂಗ್ಲಿಷ್ ಪಂಡಿತರನ್ನು ವಿಚಾರಿಸಬೇಕು.) ಅಂದರೆ ಯಾವನಿಗೆ ತಾನೇ ಹೊಟ್ಟೇಲಿ ಬೆಂಕಿ ಬೀಳುಲ್ಲ ಹೇಳಿ? ಹಾಗೇ ಇಡೀ ಜೋಡಿಸಿರೂ ತಿಂಡಿ ನೋಡ್ತಾ ಇದ್ದೆನಾ?

"ಸಾರ್ ತೊಗೊಳ್ಳಿ ಐದು ಬೇಳೆ, ಐದು ಕಾಯಿ" ಅಂತ ಕೂಗು ಕೇಳಿಸಿತಾ? ಪಾಕೆಟ್ ತಗೊಂಡು ಹೊರಗೆ ಬರ್ತಾ ಗಲ್ಲಾಪೆಟ್ಟಿಗೆಯ ಹಿಂದೆ ಕೂತಿದ್ದ ಹುಡುಗನಿಗೆ ಒಂದು ಖಾಲಿ ರೋಫ್ ಹಾಕಬೇಕು ಅನಿಸ್ತಾ...?

"ಏನಪ್ಪಾ, ಎಲ್ಲಾ ಹಲ್ಲು ಮುರಿಯೋ ತಿಂಡಿ ಮಾತ್ರ ಇಟ್ಟಿದ್ದೀ... ಸೀನಿಯರ್ಸ್ ಲೆಕ್ಕ ಬೇಡವಾ..." ಅಂತ ಒಂದು ಖಾಲಿ ರೋಫ್ ಹಾಕಿದೆ ನೋಡಿ... ಅವನು ನನ್ನ ಮುಖ ನೋಡಿದ. ಹಲ್ಲುರಹಿತ ಬಾಯಿ ಅವನಿಗೆ ಕಾಣ್ತಾ? ನನ್ನನ್ನು ನೋಡಿ ಅವನಿಗೆ ಹೃದಯ ಕರಗಿ ನೀರಾಯಿತಾ; "ಅಯ್ಯೋ ಅಜ್ಜಾ! ಆ ಮೂಲೆ ರ್‍ಯಾಕ್ ನೋಡಲಿಲ್ಲವೇ?" ಅಂತ ಸೀದಾ ಅಲ್ಲಿಗೆ ಕರಕೊಂಡು ಹೋಗಿ ನಿಲ್ಲಿಸಿದ. ಆಲ್ಲಿ ಅದೇನು ನೋಡಿದೆ ಅಂತೀರಿ?

ಬೇಸನ್ ಲಾಡು, ರವೆಉಂಡೆ, ಗೋಧಿಹಿಟ್ಟಿನ ಉಂಡೆ, ತಂಬಿಟ್ಟು... ಯಾವುದಕ್ಕೂ ಹಲ್ಲಿನ ಅವಶ್ಯಕತೆ ಬೇಡವೇ ಬೇಡ!

ಎಂತಹ ಖುಷಿ ಆಯ್ತು ಅಂತೀರಿ? ಆಗಲೇ ಇವನ್ನೆಲ್ಲ ಎರಡೆರಡು ಡಜನ್ ಪ್ಯಾಕ್ ಮಾಡಿಸಿ ತಂದೆ. ಆರು ವಾರ ಪೂರ್ತಿ ನನ್ನ ಫುಡ್ ಇದೇ ಆಗ್ಹೋಯ್ತು. ಬೆಳಿಗ್ಗೆ ಕಾಫಿ ಜತೆ ಒಂದು ಡಜನ್ ಬೇಸಿನ್ ಲಾಡು, ಮಧ್ಯಾಹ್ನ ಮುದ್ದೆಯ ಜತೆ ಅರ್ಧ ಡಜನ್ ರವೆಉಂಡೆ, ಸಂಜೆ ಟೀ ಜತೆ ಮುಕ್ಕಾಲು ಡಜನ್ ಗೋಧಿಹಿಟ್ಟಿನ ಉಂಡೆ, ರಾತ್ರಿ ಊಟಕ್ಕೆ ಮುದ್ದೆ, ಒಂದಾರು ತಂಬಿಟ್ಟು...

ನಾನು ಹೀಗೆ ಉಂಡೆಗಳನ್ನು ಎದುರಿಗೇ ಜೋಡಿಸಿ ರಾಶಿ ರಾಶಿ ಇಟ್ಟುಕೊಂಡು ತಿನ್ನೋದನ್ನು ನೋಡಲಿಕ್ಕೇನೆ ನನ್ನ ನೆಂಟರು ಮನೆಗೆ ಬರ್ತಾ ಇದ್ದರು. ಅಷ್ಟು ಫೇಮಸ್ ಆಗಿಬಿಟ್ಟೆ. ನನ್ನ ರಿಲೇಶನ್ಸ್ ನಮ್ಮ ಮನೆಯನ್ನ ಒಂದು ಪಿಕ್ನಿಕ್ ಸ್ಪಾಟ್ ಮಾಡಿಕೊಂಡುಬಿಟ್ಟರು. ನನ್ನ ಮೊಮ್ಮಕ್ಕಳು ನಾನು ತಿಂಡಿ ಲಂಚು ಡಿನ್ನರ್ ಮಾಡಬೇಕಾದರೆ ಎದುರು ಕೂತು ಒಂದು ಎರಡು ಮೂರು ಅಂತ ಲೆಕ್ಕ ಬಾಯಿಪಾಠ ಮಾಡೋವು.

'ಅಯ್ಯೋ! ಮಕ್ಕಳಿಗೆ ಲೆಕ್ಕ ಅಂದರೆ ಎಷ್ಟು ಇಷ್ಟ!' ಅಂತ ಅಂದುಕೊಂಡಿದ್ದೆ. ಆಮೇಲೆ ಗೊತ್ತಾಯ್ತು, ಮುಂಡೇವು ನಾನು ಮುಕ್ತಾ ಇದ್ದ ಉಂಡೆ ಎಣಿಸುತ್ತಾ ಕುಕ್ಕರಿಸಿಕೊಳ್ಳೋವು ಅಂತ. ನನ್ನ ಹಿಂದೆ ಅವು ನನಗೊಂದು ನಿಕ್ ನೇಮ್ ಬೇರೆ ಇಟ್ಟಿದ್ದವಂತೆ, 'ಬೊಚ್ಚುಬಾಯಿ ಬಕಾಸುರ' ಅಂತ. ಇದು ಆಮೇಲೆ ನನಗೆ ಗೊತ್ತಾಗಿದ್ದು.

ಹಲ್ಲು ಇಲ್ಲದೇ ಸಾವಿರ ವರ್ಷ ಬೇಕಾದರೂ ಜೀವಿಸಬಲ್ಲೆ ಎನ್ನುವ ಕಾನ್ಫಿಡೆನ್ಸ್ ಬಂದುಬಿಡ್ತು...! ಹಲ್ಲುಬೇಡ, ಹೀಗೇ ಇರೋಣ ಅನಿಸಿಬಿಡ್ತು!

ಹೀಗೇ ಆರುವಾರ ಆಯ್ತಾ...

ಡಿನ್ನರ್ ಮಾಡ್ತಾ ಇದ್ದೆ. ಎಂಟನೇ ತಂಬಿಟ್ಟು ಮುರಿದು ಬಾಯಲ್ಲಿ ಹಾಕಿಕೊಂಡಿದ್ದೆ.

"ಹಲ್ಲಿಗೆ ಯಾವತ್ತು ಹೋಗೋಣ...?" ಅಂದಳು ಹೆಂಡತಿ.

"ನೀನೂ ಹಲ್ಲು ತೋರಿಸಬೇಕಾ?" ಅಂದೆ.

"ನನಗಲ್ಲ, ನಿಮಗೆ. ಹಲ್ಲು ರೆಡಿ ಇದೆ ಅಂತ ಅವರು ಆಗಲೇ ಆರ್ಸಲ ಫೋನ್ ಮಾಡಿದ್ದರು..."

"ನನಗೆ ಅದು ಬೇಡ. ಅದಿಲ್ಲದೇ ಈಗ ರಾಜಾ ತರಹ ಇದೀನಿ..." ಅಂದೆ.

"ನೀವು ರಾಜಾ ತರಹ ಇದೀರಿ. ಮನೆ ಈಗ ಒಂದು ಸಿಟಿಮಾರ್ಕೆಟ್ ಆಗಿದೆ. ನಿಮ್ಮನ್ನು ನೋಡೋಕ್ಕೆ ಅಂತ ಎಷ್ಟು ಜನ ಬರೋದು! ಅವರಿಗೆ ಅಡುಗೆ ಮಾಡಿರುತ್ತೀನಿ. ನಾನು ಅಷ್ಟು ಕಷ್ಟ ಪಟ್ಟು ಮಾಡಿದ್ದು ತಿನ್ನಲ್ಲ. ಬಂದವರು ನಮಗೂ ಅವನು ತಿನ್ನೋದನ್ನೇ ಕೊಡು ಅಂತ ಕೇಳ್ತಾರೆ. ಅಂಗಡೀಲಿ ಕೆಲವು ಸಲ ಅದು ಇರೋಲ್ಲ. ಮೊದಲೇ ಆರ್ಡರ್ ಮಾಡಬೇಕಂತೆ. ನಮಗೆ ಸಪ್ಲೈ ಮಾಡೋದಕ್ಕೇನೆ ಅಂಗಡಿಯವರು ಬೇರೆಬೇರೆ ಕಡೆಯಿಂದ ತರಿಸ್ತಾ ಇದಾರಂತೆ, ನಿಮ್ಮ ಪುಡ್ಡಾ. ನನಗೆ ನಿಭಾಯಿಸಕ್ಕೆ ಆಗ್ತಾ ಇಲ್ಲ" ಅಂತ ಮುಖ ಚಿಕ್ಕದು ಮಾಡಿಕೊಂಡಳು. ಕಣ್ಣಂಚಿನಲ್ಲಿ ಎರಡು ಹನಿ ಇತ್ತಾ? ತಂಬಿಟ್ಟು ಬಾಯಲ್ಲಿತ್ತು, ಗಮನಿಸಲು ಆಗಲಿಲ್ಲ.

ನನಗೆ ಮನೇಲಿ ಹೆಂಗಸರು ಸಂತೋಷದಿಂದ ಇರಬೇಕು ಅನ್ನುವ ಸಿದ್ಧಾಂತದಲ್ಲಿ ನಂಬಿಕೆ ಜಾಸ್ತಿ. ನನ್ನ ಕಾರಣಕ್ಕೆ ಪಾಪ, ಹೆಂಗಸರು ಮನಸು ಚಿಕ್ಕದು ಮಾಡಿಕೊಳ್ಳೋದು, ವ್ಯಥೆ ಪಡೋದು, ಅದರಿಂದ ರಾತ್ರಿ ನಿದ್ದೆ ಕೆಡೋದು, ಇದೆಲ್ಲಾ ನನಗೆ ಇಷ್ಟ ಇಲ್ಲ. ಅಂದರೆ ನನ್ನ ವೇ ಆಫ್ ಥಿಂಕಿಂಗ್ ಹೀಗೆ ಲಾಗಾಯ್ತಿನಿಂದ ಬೆಳೆದು ಬಂದಿರೋದು.

ಆದ್ದರಿಂದ ಆಗಲೇ ಡಿಸೈಡ್ ಮಾಡಿಬಿಟ್ಟೆ "ನಾಳೇನೇ ಹೋಗೋಣ ಹಲ್ಲು ಸಿಕ್ಕಿಸಿಕೊಂಡು ಬಂದ್ಬಿಡಾಣ" ಅಂತ.

ಹೀಗೆ ಒಂದು ಸಾರ್ವಜನಿಕ ಹಿತಕ್ಕಾಗಿ ನಾನು ನನಗೆ ಇಷ್ಟವೇ ಇಲ್ಲವಾದರೂ, ಮನಸು ಬದಲಾಯಿಸಿದೆ. ಈಗ ಅಂಗಡಿಯವರೆಲ್ಲಾ ಸೇರಿ ಅವರ ಮೂಲಭೂತ ಹಕ್ಕು ವ್ಯಾಪಾರ ಮಾಡಿ ಲಾಭ ಮಾಡುವುದು ನನ್ನಿಂದ ಹಾನಿಗೆ ಒಳಗಾಗಿದೆ ಅಂತ 'ಮುಷ್ಕರ, ರಸ್ತೆ ರೊಕೋ, ಬೆಂಗಳೂರು ಬಂದ್, ಇಂಡಿಯಾ ಬಂದ್ ಮಾಡಬೇಕು ಅಂತ ತೀರ್ಮಾನ ಮಾಡಿದ್ದಾರಂತೆ. ಇದಕ್ಕೆ ಪಂಜಾಬಿನ ರೈತರು ಮತ್ತು ಕೆನಡಾ ದೇಶ ಬೆಂಬಲ ಕೊಟ್ಟಿದೆಯಂತೆ!

ಮುಂದೆ ಏನಾಗಬಹುದು ಅಂತ ದಿಗ್ಭ್ರಮೆ ಆಗಿದೆ ನನಗೆ!

■

# ಮಲೆನಾಡಿನ ಚಿತ್ರಗಳು

ಪುಷ್ಪಲತಾ.ಟಿ.ಜಿ

ಮಲೆನಾಡು ಎಂದ ಮೇಲೆ ಚಳಿಗಾಲದ ಹೊಡೆತವೂ ಜೋರಾಗಿಯೇ ಇರುತ್ತದೆ. ಕಾಡಿನ ದಟ್ಟ ಹಸಿರಿನ ನಡು ಸೀಳಿ ಬೆಳೆದ ತಿಳಿ ಹಸಿರಿನ ಅಡಿಕೆ ತೋಟ, ಕೇಸರಿ ಮಡಿ ಉಟ್ಟು ಹಣ್ಣಾದ ಅಡಿಕೆ ಗೊಂಚಲಿಗೆ ನೆಗೆಯುವ ಮಂಗಗಳ ಹಿಂಡು, ಕೆಳಗೆ ಬೀಳುತ್ತವೇನೋ ಎಂಬಂತೆ ಹೊಂಚು ಹಾಕಿ ಮೇಲೆ ನೋಡುತ್ತಾ ನಿಂತ ಕೆಂಪು ಬಣ್ಣದ ಎರಡು ನಾಯಿ ಹೀಗೆ ಚಳಿಗಾಲದ ದೃಶ್ಯ ಗಣಪತಿ ಮನೆಯಲ್ಲಿ ಕಾಣುತ್ತದೆ. ಬೆಟ್ಟದ ತುದಿಯಿಂದ ಇಳಿಯುವ ಮಣ್ಣಿನ ರಸ್ತೆಯಲ್ಲಿ ಬರುತ್ತಲೇ ಅತ್ತಿತ್ತ ಹುಡುಕುತ್ತ ಗಿಡ ಪೊದೆಯನ್ನೆಲ್ಲ ಕೋಲಿನಿಂದ ಪರೀಕ್ಷಿಸುತ್ತಾ ಬರುತಿದ್ದ ಈಶ್ವರಪ್ಪನಿಗೆ ಕಳೆದು ಹೋದ ಹೋರಿಯದ್ದೆ ಚಿಂತೆ.

ಈ ಹಾಳಾದ ಕುರ್ಕಿಯಿಂದ ಉಪದ್ರ ತಪ್ಪಿದ್ದಲ್ಲ ಎನ್ನುತ್ತಲೇ ಬಂದವ ಕಡಿಮಾಡಿನಲ್ಲೇ ಕುಳಿತ.ಅಷ್ಟು ಹೊತ್ತಿಗೆ ತೋಟದಲ್ಲಿದ್ದ ನಾಯಿಗಳು ಪರ ಮನುಷ್ಯನ ವಾಸನೆಗೇನೋ ಅಂಗಳಕ್ಕೆ ಲಗ್ಗೆ ಇಟ್ಟವು.

ಈಶ್ವರಪ್ಪನ ಗುರುತು ಸಾಮಾನ್ಯವಾದ್ದರಿಂದ ನೆಪ ಮಾತ್ರಕ್ಕೆ ಕೂಗಿ ಅಲ್ಲಿಂದ ಅಂತರ್ಧಾನವಾದವು.

ಇಷ್ಟು ಬೇಗ ಚಳಿ ಸುರು ಅಲ್ರಿ ಎನ್ನುತ್ತಾ ಬಂದ ಗಣಪತಿ ಬಾವ ಬಂದ ಕುಶಿಗೆ ಅಡಿಕೆ ಸುಲಿಯುತಿದ್ದ ಯಂತ್ರವನ್ನು ನಿಲ್ಲಿಸಿದ.

ನಮ್ದು ಒಂದು ಕರು ಬಂದಿಲ್ಲ ನಾಕು ದಿನ ಆತು ಮಾರಾಯ್ನೆ....ಎನ್ನುತ್ತಾ ಬಂದ ಕೆಲಸದ ಪೀಠಿಕೆ ಎತ್ತಿದ ಈಶ್ವರಪ್ಪ.

ಗಣಪತಿ ಎಲೆ ಅಡಿಕೆ ಹರಿವಾಣವನ್ನು ಎಳೆದು ಕೊಳ್ಳುತ್ತ ಈಶ್ವರಪ್ಪನ ಕತೆ ಕೇಳಿ, ಈ ಕಡೆ ಕುರ್ಕಿ ಬಂದಾಗಿಲ್ಲ ಸೀಳು ನಾಯಿ ಹಿಂಡು ಮಾತ್ರ ನಿನ್ನೆ ಬರುವಾಗ ಕಂಡಿತ್ತು ನೋಡಿ ಎಂದು ಉಪಸಂಹಾರ ಕೊಟ್ಟಿದ್ದೆ ಈಶ್ವರಪ್ಪನ ದಿಗಿಲು ಹೆಚ್ಚಾಯಿತು.

ಅವನಿಗೆ ದಿಗಿಲಾದದ್ದು ಹೋರಿಯ ಹುಡುಕಾಟಕ್ಕೇನು ಆಗಿರಲಿಲ್ಲ. ಹುಸಿ ಧೈರ್ಯ ಮಾಡಿ ಬಂದಿದ್ದೇನೋ ಆಗಿತ್ತು ಮರಳಿ ರಾತ್ರಿ ಹೋಗುವುದು ಹೇಗೆ....ಹೇಗಾದರೂ ಪುಸಲಾಯಿಸಿ ಗಣಪತಿಯನ್ನು ಕರೆದೊಯ್ಯಬೇಕೆಂದು ನಿರ್ಧರಿಸಿ ಕವಳ ಹಾಕಿದವ ಮೊನ್ನೆ ಕತೆ ಕೇಳು ಎನ್ನುತ್ತಾ ತನ್ನ ಬತ್ತಳಿಕೆಗೆ ಕೈ ಹಾಕಿದ.

ಮೊನ್ನೆ ಲಕ್ಷ್ಮಣ ಸೊಪ್ಪಿಗೆ ಹೋದಾಗ ಕುರ್ಕಿ ಮನೆ ಹಿಂದೆ ಕೂತಿತ್ತಂತೆ. ಅವನ ಮನೆ ನಾಯಿ ಕಟ್ಟಿ ಹಾಕಿದಕ್ಕೆ ಉಳಿದಿದೆ ಅಂತಿದ್ದ .ನಮ್ ಕಡೆ ಕುರ್ಕಿ ಇರೋದು ಸುಳ್ಳಲ್ಲವಯ್ಯ.

ಅವು ಒಂದೇ ಕಡೆ ಇರಲ್ರಿ...ಈಗ ಹೊಳೆ ತುಂಬಿದೆ ನೋಡಿ ಆ ದಿಂಬದಿಂದ ಈ ದಿಂಬಕ್ಕೆ ಅಡ್ಡಾಡ್ತವೆ.

ಗಣಪತಿ ತಾನು ತಿಳಿದದ್ದು ಹೇಳುತ್ತಿದ್ದರೆ ಈಶ್ವರಪ್ಪ ಕೇಳುವ ಸ್ಥಿತಿಯಲ್ಲಂತೂ ಇರಲಿಲ್ಲ ಇದು ಕುರ್ಕಿ ಜಾತಿ ಅಲ್ಲ ವಯ್ಯಾ...ಹೋರಿ ಹಿಡಿಯವು ಹುಲಿನೆ ಸೈ...

ಅದೇಗೆ ಹೇಳೋಕಾಗತ್ತೆ...ನೋಡದೆ...ಪೇಟೆ ಕಡೆ ಹೋದ್ರೆ ಲಾರಿ ಪಾಲದದ್ದು

ಇರಬಹುದು ಎನ್ನುತ್ತಾ ಒಳಗಿನಿಂದ ಗಣಪತಿ ಮಗ ಹೊರ ಬಂದ.

ಇಲ್ಲ ಮಾರಾಯಾ...ಮೊನ್ನೆ ನಮ್ ಸೇಡಿಗದ್ದೆ ಭಟ್ರು ಹೇಳಿದ್ರಲ್ಲ.....ನಿನ್ ಗ್ರಹದಲ್ಲಿ ಬುಧ ಇರೋದ್ರಿಂದ ಹುಲಿ ಕಾಟ ನರಿ ಅನ್ನೋ ಮೃತ್ಯು ಕಾಟ ಇದೆಯಂತ. ಅಷ್ಟು ಹೇಳಿದವ್ರು ಪರಿಹಾರ ಹೇಳಿಲ್ಲನ ಮಾವ...ಗಣಪತಿ ಮಗಳ ಕಿವಿ ಈಗ ನೆಟ್ಟಗಾಗಿದ್ದವು.

ಅವ್ರು ಹೇಳೋ ಪರಿಹಾರ ಹೋಮಕ್ಕೆಲ್ಲ ಕೊನೆ ಕೊಯ್ಲಾಗದೆ ದುಡ್ಡು ಎಲ್ಲಿದೆ. ಹಾಗಿದ್ರೆ ಏನ್ ಮಾಡ್ತೀಯ ನಿನ್ ಹೋರಿದು ಒಳ್ಳೆ ಕತೆ ಆಯ್ತಲ್ಲ. ಹೋರಿ ಹೋಗ್ಲಿ ನಮ್ಗೆ ಸೊಪ್ಪು ಸದೆ ಅಂತ ಓಡಾಡೋಕೆ ಭಯ.

ಗದ್ದೆ ಬೇರೆ ಹಂದಿ ತಿನ್ನೋಕೆ ಸುರು ಮಾಡಿ ನಾಳೆ ನಾಡಿದ್ದು ಕೊಯ್ಲು ಅಂದ್ರೆ ಆಗಲ್ಲ. ಹಕ್ಕೆ ಕಾಯೋಕೆ ಹುಲಿ ಕಾಟ. ಹಾಗೆ ಬಿಟ್ರೆ ಹಂದಿ ಕಾಟ. ಪಜೀತಿ ಆಗೋಗಿದೆ.

ಆ ಹಂದಿ ಬರದೆ ಇರೋ ಹಾಗೆ ಒಂದು ದಿಗ್ಬಂಧನ ಹಾಕ್ಸೊದಲ್ಲನ ಮಾವ...ಗಣಪತಿ ಮಗಳ ಪ್ರಶ್ನೆಗೆ ಈಶ್ವರಪ್ಪನದು ಸಿದ್ದ ಉತ್ತರ. ಹಾಕವ್ರು ಇದಾರೆ....ಅದೆಲ್ಲ ಇಲ್ಲ ಅನ್ನೋದು ಸುಳ್ಳು ....ದುಡ್ಡು ಇದ್ರೆ ನೋಡು...

ಅಷ್ಟರಲ್ಲಿ ಗೌರಿ ಚಾ ತಂದದ್ದರಿಂದ ಮಾತಿಗೆ ಭಂಗವಾದಂತೆ ಈಶ್ವರಪ್ಪ ಕವಳ ಉಗಿಯಲು ಬ್ಯಾಟರಿ ಹಿಡಿದು ಹೊರಗೆ ನಡೆದವ ತಟ್ಟನೆ ಒಳ ಬಂದು ಪಿಸು ದನಿಯಲ್ಲಿ ಇಲ್ಲೇ ಇದ್ಯಲ್ಲ ಮಾರಾಯ....ಅದ್ರ ಬಗ್ಗೆನೇ ಮಾತಾಡ್ತಾ ಇದೀವಿ... ಬೇಗ ಬಾ ನಿಮ್ ಗೇಟ್ ಹತ್ರ ಕಣ್ಣು ಕೊಡ್ತು ಎಂದ. ಎಲ್ಲರೂ ಹೊರ ಅಂಗಳಕ್ಕೆ ಬಂದರು.

ಗಣಪತಿ ಹಣೆಗೆ ತನ್ನ ಬ್ಯಾಟರಿ ಕಟ್ಟಿಕೊಂಡು ಮುಂದೆ ಹೋದ. ಒಂದೇ ಕಣ್ಣು ಕೊಡ್ತಾ ಇದೆ...ಒಂದೇ ಕಣ್ಣು ಕೊಡವು ಹುಲಿ ಅಲ್ಲದೆ ಕುರ್ಕಿ ಅಲ್ಲವಯ್ಯ....ಎನ್ನುತ್ತಾ ಗಣಪತಿ ಹಿಂದೆ ಹಿಂದೆ ನಡೆದ.

ಹುಲಿ ಒಂದೇ ಕಣ್ಣು ಬ್ಯಾಟರಿಗೆ ಕೊಡುವುದು ಎಂದು ಗಣಪತಿಗೂ ತಿಳಿದಿತ್ತು. ಹೀಗಾಗಿ ಗೇಟಿನ ಹತ್ತಿರದ ಪೊದೆಯಲ್ಲಿ ಹೊಳೆಯುವ ಒಂದು ಕಣ್ಣು, ಬ್ಯಾಟರಿಗೆ ಹೊಳೆಯುವ ಕಪ್ಪು ಮಿಂಚಿನ ಪಟ್ಟಿ ಈಶ್ವರಪ್ಪನ ಜೀವವನ್ನು ಬಾಯಿಗೆ ತರಿಸಿದ್ದಂತೂ ಸುಳ್ಳಲ್ಲ.

ಉಳಿದವರೆಲ್ಲರೂ ಸ್ತಬ್ಧರಾಗಿ ಅಂಗಳದಲ್ಲಿ ನಿಂತಿದ್ದರು.ನೀವು ಹತ್ತಿರ ಹೋಗ್ಬೇಡಿ ಎನ್ನುತ್ತಾ ಗೌರಿ ಕರೆದದ್ದು ಗೇಟಿನವರೆಗೂ ತಲುಪಲಿಲ್ಲ. ಗಣಪತಿ ಇನ್ನೂ ಹತ್ತಿರ ಹೋದಂತೆ ಪೊದೆಯಿಂದ ಹಾರಿ ಬಂದಿದ್ದು ಅವನೇ ಸಾಕಿದ ಒಂದು ಕಣ್ಣಿನ ಬೆಕ್ಕು "ಬುದ್ಧಿ"

ಈಶ್ವರಪ್ಪನಿಗೆ ಒಂದು ಕಡೆ ಅದು ಬೆಕ್ಕು ಎಂಬ ಸಮಾಧಾನ. ಇನ್ನೊಂದು ಕಡೆ ತನ್ನ ಪುಕ್ಕಲುತನ ಹೊರ ಬಂದ ಅವಮಾನ ಎಲ್ಲವೂ ಸೇರಿ ಬೆಕ್ಕಿಗೆ ಬಯ್ಯುತ್ತಾ ಮರಳಿ ಬಂದ. ಆ ದರಿದ್ರ ಬೆಕ್ಕು ಒಂದೇ ಕಣ್ಣು ಕೊಡ್ತಾ ಮಟ್ಟಿ ಒಳಗೆ ಕೂತಿದೆ ಎಂದದಕ್ಕೆ ಏ ಮಾವ ನನ್ನ ಬೆಕ್ಕಿಗೆ ಯಾಕೆ ಬೈತಿಯ ಅದಿಕ್ಕೆ ಇದ್ದಿದ್ದೇ ಒಂದು ಕಣ್ಣು ನಿಂಗಾಗಿ ಎರಡನೇ ಕಣ್ಣು ಎಲ್ಲಿಂದ ತಂದು ಬ್ಯಾಟರಿಗೆ ಹಿಡಿಯತ್ತೆ ಎಂದಾಗ ಪೆಚ್ಚು ಮುಖದಿಂದ ಗೌರಿ ಕೊಟ್ಟ ಚಾ ಲೋಟ ಎತ್ತಿಕೊಂಡ. ಆ ಚಳಿಗೆ ಚಾ ತಣಿದು ತಂಪು ಪಾನೀಯ ವಾಗಿತ್ತು. ಗಣಪತಿಯೊಂದಿಗೆ ಬಂದಿದ್ದ "ಬುದ್ಧಿ" ಬೆಕ್ಕು ಮೀಯವ್ ಎನ್ನುತ್ತಾ ಈಶ್ವರಪ್ಪನ ಕುರ್ಚಿ ಅಡಿ ಕುಳಿತು ಗೌರಿ ತಂದ ತಿಂಡಿ ಪೊಟ್ಟಣ ನೋಡುತ್ತಿತ್ತು.

■

# ಧೂಮ್ ಮಚಾಲೆ ಧೂಮ್ ಮಚಾಲೆ.... ಧೂಮ್.....

ಸುಮಾ ರಮೇಶ್, ಹಾಸನ.

ಇಪ್ಪತ್ತೊಂದನೆಯ ಶತಮಾನದ ಆದಿಯಲ್ಲಿ ಧೂಮ್ ಚಿತ್ರದ ಈ ಗೀತೆಯ ಧೂಮ ಎಲ್ಲೆಡೆ ವ್ಯಾಪಿಸಿ ಹೊಸ ಆಯಾಮವನ್ನೇ ಸೃಷ್ಟಿಸಿತು. ಅದೇ ಶೈಲಿಯ ಇನ್ನಷ್ಟು ಪ್ರಯೋಗಗಳು ನಡೆದು ಹಲವು ಗೆದ್ದರೆ ಕೆಲವು ಹೊಗೆ ಹಾಕಿಸಿಕೊಂಡವು.

ಮಾನವನು ಪೀಳಿಗೆಯಿಂದ ಪೀಳಿಗೆಗೆ ವಿಕಾಸ ಹೊಂದುತ್ತಾ ಹೋದಂತೆ ಭಾಷೆಯೂ ವಿಸ್ತಾರಗೊಳ್ಳುತ್ತಾ ಹಲವು ಮಗ್ಗಲುಗಳಿಗೆ ಹೊರಳಿಕೊಂಡಿತು. ಪಂಡಿತರು, ಸಾಹಿತಿಗಳು, ಪಾಮರರು, ಪಡ್ಡೆಗಳು, ಜನಸಾಮಾನ್ಯರು, ತಮ್ಮ ಜ್ಞಾನಕ್ಕೆ, ಅನುಕೂಲಕ್ಕೆ ತಕ್ಕಂತೆ ಪದಗಳನ್ನು ಬಿಡಿಸಿ, ಎಳೆದು, ತಿರುಚಿ, ಇತರ ಭಾಷೆಯ ಪದಗಳನ್ನು ಅಲ್ಲಲ್ಲಿ ಬೆರೆಸಿ ಅಪಭ್ರಂಶಗೊಳಿಸಿ ಬಳಸತೊಡಗಿದಂತೆ ಪದಗಳೂ ಅವರವರ ಅನುಕೂಲಕ್ಕೆ ತಕ್ಕಂತೆ ಕಲಬೆರಕೆಯಾಗಿ ವಿವಿಧಾರ್ಥಗಳನ್ನು ಬಿಂಬಿಸತೊಡಗಿದವು.

ಅಂತಹ ಹಲವು ಪದಗಳಲ್ಲಿ 'ಹೊಗೆ' ಪದವೂ ಒಂದು. 'ಈ ಕೇಸ್ ಸ್ಟ್ಯಾಂಡ್ ಆಗಲ್ಲ. ಸಾಕ್ಷಿಗಳ ಅಭಾವದಿಂದ ಹೊಗೆ ಹಾಕ್ಕೊಳುತ್ತೆ' ಪ್ರಭಾವೀ ವ್ಯಕ್ತಿಗಳ ಪ್ರಕರಣಗಳ ಬಗ್ಗೆ ಜನಸಾಮಾನ್ಯರ ಅಭಿಪ್ರಾಯವಿದು. 'ಬೀಡಿ ಸೇದಿದ್ರೆ ಹೊಗೆ ಬರುತ್ತೆ ಹೊರ್ತು ಹೊಗೆಯಿಂದ ಬೀಡಿ ಬರಲ್ಲ....' ಎಂಬ ವಿಶಿಷ್ಟ ಹೇಳಿಕೆಯ ಮುಖೇನ ಕನಸುಗಾರ ರವಿಚಂದ್ರನ್ ದೊಡ್ಡಣ್ಣನನ್ನು ಯಾಮಾರಿಸಲು ಪ್ರಯತ್ನಿಸಿ ಅಂತ್ಯದಲ್ಲಿ ಅದು ಹೊಗೆ ಹಾಕಿಕೊಂಡು ಅವರು ಕಳ್ಳರೆಂದು ಸಾಬೀತಾಗುವುದು.

ದಹನ ಕಾಲದಲ್ಲಿ ಬಿಡುಗಡೆ ಹೊಂದುವ ಹೊಗೆ, ಅರ್ಥಾತ್ ಸ್ಮೋಕ್ ಬೆಂಕಿಯ ಅನಪೇಕ್ಷಿತ ಉಪ ಉತ್ಪನ್ನ. ಹಿಂದೆ ಅಡುಗೆಗೆ ಸೌದೆ ಒಲೆಯನ್ನು ಬಳಸುವಾಗ ಬುಸ್ಸನೆ ಮೇಲೇಳುತ್ತಿದ್ದ ಹೊಗೆಯಿಂದ ಮನೆಯೆಲ್ಲಾ ಧೂಮಾವೃತವಾಗುತ್ತಿತ್ತು. ಬೃಹತ್ ವೆಂಟಿಲೇಶನ್ ಕಾನ್ಸೆಪ್ಟ್ ಇನ್ನೂ ಕಣ್ಣು ಬಿಟ್ಟಿರದಿದ್ದ ಆ ಕಾಲಘಟ್ಟದಲ್ಲಿ ಕೇವಲ ಇಲಿಯ ಬಿಲದಂತಿರುತ್ತಿದ್ದ ಕಿಟಕಿಯಿಂದ ಅದರ ಔಟ್ ಲೆಟ್ ಗೆ ಅವಕಾಶವಿಲ್ಲದೆ ಅಲ್ಲೇ ಸುತ್ತುತ್ತಾ, ಸುತ್ತಲಿನ ಜೀವಿಗಳ ನವರಂಧ್ರಗಳನ್ನೂ ಹೊಕ್ಕು, ನಂತರ ಗೋಡೆಗಳ ಮೇಲೆ ತನ್ನ ಕಲಾಪ್ರದರ್ಶನ ನಡೆಸುತ್ತಿತ್ತು. ಟಿಯರ್ ಗ್ಯಾಸ್ ಬಿಟ್ಟಂತೆ ಕಣ್ಣು ಮೂಗಿನೊಳಗೆ ಸೇರಿದ ಹೊಗೆ ಧಳಧಳನೆ ನೀರುಕ್ಕಿಸುತ್ತಿತ್ತು. ಇಂಧನದ ಸಂಪೂರ್ಣ ದಹನಕ್ಕೆ ಸಾಕಷ್ಟು ಆಮ್ಲಜನಕ ಇಲ್ಲದೆ ದಹನಕ್ರಿಯೆ ಅಪೂರ್ಣವಾಗಿ ಹೊಗೆಗೆ ಮೂಲವಾಗುತ್ತಿತ್ತು. ಅಪೌಷ್ಟಿಕ ತಳಿಗಳಿಗೆ ಪೂರಕ ಪೌಷ್ಟಿಕಾಂಶ ಒದಗಿಸುವಂತೆ ಹೆಂಗಳೆಯರು ಊದುಕೊಳವೆ ಮುಖೇನ ಉರುವಲಿಗೆ ಆಮ್ಲಜನಕದ ಸಪ್ಲಿಮೆಂಟ್ಸ್ ನೀಡಿ ಬಗ್ಗನೆ ಬೆಂಕಿಯ ಜ್ವಾಲೆ ಮೇಲೇಳಿಸುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಅವರ ಮುಖ ಕೆಂಪಡರುತ್ತಿತ್ತು. ಹೊಗೆಯ ಕಾಟದಿಂದ ಪಾರ್ವತಿಯ ಕಣ್ಣುಗಳು ಕೇಪಳದ ಹೂವಿನಂತಾಗಿದ್ದವು ಎಂದು ಒಂದೆಡೆ ಕಾರಂತರು ಹೇಳಿರುವರು.

ಬೀಡಿ, ಸಿಗರೇಟುಗಳ ಹೊಗೆಕಾರರು ಮೂಗು ಬಾಯಿ ಕಿವಿಗಳ ಮೂಲಕವೂ ಹೊಗೆ ಹೊಮ್ಮಿಸಿ ಆ ಹೊಗೆಯಲ್ಲೇ ಹಲವು ಆಕಾರಗಳನ್ನು ರಚಿಸಿ ತಮ್ಮ ಕಲಾಪ್ರದರ್ಶನ ಮೆರೆಯುವುದಿದೆ. ಇಂತಹ ಸ್ಮೋಕ್ ಆರ್ಟಿಸ್ಟ್ ಗಳೆದುರು ಮೂಗೊಡ್ಡಿ ಕುಳಿತವರದ್ದು 'ಪ್ಯಾಸಿವ್ ಸ್ಮೋಕಿಂಗ್'. ಇದು ಮತ್ತೂ ಹಾನಿಕಾರಕ. ಚೈನ್ ಸ್ಮೋಕರ್ ಗಳ ಬಾಯಲ್ಲಿ ನಿರಂತರ ಬುಸುಗುಡುವ ಸಿಗರೇಟಿನ ಧೂಮದಿಂದ ದೇಹಸ್ವಾಸ್ಥ್ಯ ನಲುಗಿ ತುರ್ತಾಗಿ ಹೊಗೆಹಾಕಿಸುವ ದಿನ ಫಿಕ್ಸ್ ಆಗುವುದು.

ಆವಿಯಾದ ನೀರು ಸಣ್ಣ ಹನಿಗಳ ಮೋಡ ಸೃಷ್ಟಿಸಿ ಹೊಗೆಯ ರೂಪ ತಾಳುವುದು. ಬಂಡೆಗಳ ಮೇಲೆ ಅಪ್ಪಳಿಸುವ ನೀರು ಹೊಗೆಯಂತೆ ಗೋಚರಿಸುವುದರಿಂದ ಹೊಗೇನಕಲ್ ಫಾಲ್ಸ್ ಸೃಷ್ಟಿಯಾಗಿದೆ. ಮೆಕ್ಯಾನಿಕ್ಸ್, ಎಲೆಕ್ಟ್ರಾನಿಕ್ಸ್ ಸಂಯೋಗಗೊಂಡು ಮೆಕೆಟ್ರಾನಿಕ್ಸ್ ಆದಂತೆ ಚಳಿಗಾಲದಲ್ಲಿ ಸ್ಮೋಕ್ ಹಾಗು ಫಾಗ್ ಗಳು ಜಂಟಿಯಾಗಿ ಸ್ಮಾಗ್ ಉಂಟಾಗುವುದು.

ಜೆಟ್ ವಿಮಾನಗಳು ಹಾರುವಾಗ ಹಿಂಬದಿಯಲ್ಲಿ ಬಾಲಂಗೋಚಿಯಂತಹ ಬಿಳಿಯ ಹೊಗೆಯ ಟ್ರ್ಯಾಕ್ ಹಿಂಬಾಲಿಸುವುದು. ಜೆಟ್‌ನಿಂದ ಬಿಡುಗಡೆಯಾದ ಆವಿ ತಂಪಾದ ಗಾಳಿಯೊಂದಿಗೆ ಬೆರೆತು ಇಬ್ಬನಿಯ ಬಿಂದುಗಳನ್ನು ರೂಪಿಸಿ ಮೇಲ್ನೋಟಕ್ಕೆ ಹೊಗೆಯಂತೆ ಗೋಚರಿಸುತ್ತದೆ. ಇದು ಹಿಂಬದಿಯ ಹೊಗೆಯಾದರೆ, ಮಾಗಿ ಕಾಲದಲ್ಲಿ ಮುಂಜಾನೆ ವಾಯುವಿಹಾರಕ್ಕೆ ಮುಂದಾದಾಗ ಮೂಗು ಬಾಯಿಗಳಿಂದ ಇದೇ ರೀತಿ ಮುಂಬದಿಯ ಹೊಗೆ ಹೊರಹೊಮ್ಮುವುದು.

ಸಂಸಾರದ ತಾಪತ್ರಯಗಳಿಂದ ನಲುಗಿ ಅಸ್ವಾಭಾವಿಕವಾಗಿ ವರ್ತಿಸುವವರಿಗೆ ಭೂತ ಮೆಟ್ಟಿಕೊಂಡಿದೆಯೆಂದು ಭ್ರಮಿಸಿ ಅದನ್ನು ರಿಲೀಸ್ ಮಾಡಲು ಸ್ಪೆಷಲಿಸ್ಟ್ ಗಳ ಬಳಿಗೆ ಕರೆದೊಯ್ದರೆ ಆ ಮಹಾತ್ಮರು ' ಹ್ರಾಂ... ಹ್ರೀಂ...ಜಟ್...ಪಟ್... ' ಎಂಬ ವಿಶಿಷ್ಟ ಮಂತ್ರಘೋಷದೊಂದಿಗೆ ಹವಿಸ್ಸನ್ನು ಬೊಗಸೆಯಿಂದ ಬೆಂಕಿಗೆ ತೂರಿ ಬುಸ್ಸನೆ ಹೊಗೆ ಎಬ್ಬಿಸುವರು. ಬೇವಿನೆಲೆಯ ಗುಚ್ಛದಿಂದ ಚಾಮರ ಬೀಸಿ ರಪ್ಪನೆ ಬಾರಿಸತೊಡಗಿದಾಗ ಬೇರೆಲ್ಲಾ ಕಾಟಗಳೂ ಅದರ ಮುಂದೆ ಕ್ಷುಲ್ಲಕವೆನಿಸಿ ಅಸ್ವಸ್ಥರಿಗೆ ಅಂಟಿದ ಭೂತ ಪೇರಿ ಕೀಳುವುದು.

ಪ್ರತಿದಿನ ಕರ್ಪೂರದ ಹೊಗೆ ಗರ್ಭಗುಡಿಯಲ್ಲಿ ಅಲೆಯಾಡಿದರೆ ವಿಶೇಷ ದಿನಗಳಲ್ಲಿ ಹೋಮ ಹವನದ ಹೊಗೆ ದೇವಾಲಯದ ಪರಿಸರದಲ್ಲಿ ಗುಣಾತ್ಮಕ ಶಕ್ತಿಯನ್ನು ಪಸರಿಸುವುದೆಂಬ ನಂಬಿಕೆಯಿದೆ. ಹತ್ತು ಹಿಂದೂ ತಾಂತ್ರಿಕ ದೇವರುಗಳಲ್ಲಿ ಧೂಮಾವತಿಯು ಒಂದು. ದುಷ್ಟಶಕ್ತಿಗಳ ನಿಗ್ರಹಕ್ಕೆ ಪ್ರತ್ಯಂಗಿರಾ ದೇವಿಗೆ ಮೆಣಸಿನಕಾಯಿಯ ಹೋಮವನ್ನು ಮಾಡುವ ರೂಢಿಯಿದೆ.

ಅಂತರಂಗದ ಗವಾಕ್ಷಗಳ ತೆರೆದಿಡಲಲ್ಲಿ ಚಿಂತೆ ಕುಮುಲುವುದು ಹೊಗೆಗಳೊತ್ತ–ವಾತ್ಮವನು ಡಿವಿಜಿಯವರು ಹೇಳುವಂತೆ ಮನದ ಎಲ್ಲಾ ಕದ ಕಿಟಕಿಗಳನ್ನು ಮುಚ್ಚಿಕೊಂಡು ಬಿಟ್ಟರೆ ನಮ್ಮ ಚಿಂತೆ ಒಳಗೊಳಗೆ ಸುಟ್ಟು ಹೊಗೆಯಾಡುತ್ತದೆ. ಅಸೂಯೆಯ ಬೆಂಕಿ ಭುಗಿಲೆದ್ದಾಗ ಸಂಬಂಧಗಳ ನಡುವೆ ದ್ವೇಷ ಹೊಗೆಯಾಡುವುದು.

ಬದುಕಿನ ಪ್ರತಿ ಹೆಜ್ಜೆಯೂ ಹೊಗೆಯೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ದಿನದ ಆರಂಭಕ್ಕೆ ಕಾಫಿ, ಚಹಾದ ಘಮ್ಮೆನ್ನುವ ಹೊಗೆ ಮುನ್ನುಡಿ ಬರೆದರೆ ಕೆಲಸದ ನಿಮಿತ್ತ ಹೊರಗೆ ಕಾಲಿಟ್ಟಾಗ ಎಲ್ಲೆಲ್ಲೂ ಹೊಗೆಯದ್ದೇ ಕಾರುಬಾರು. ದೇಹವೇ ಹೊಗೆ ಅಬ್ಸಾರ್ಬರ್. ರಸ್ತೆಯುದ್ದಕ್ಕೂ ವಾಹನದ ಎಕ್ಸಾಸ್ಟ್ ಪೈಪ್ ಗಳು ಉಗುಳುವ ದಟ್ಟ ಹೊಗೆಗೆ ನಮ್ಮ ಮೂಗು ಬಾಯಿಗಳೇ ಚಿಮಣಿಗಳು ! ರಾತ್ರಿ ಸಮಯ ಬಾರುಗಳಲ್ಲಿ ಬುಸಬುಸನೆ ಬಾಯಿಗಿರಿಸಿದ ಪೈಪ್ ಮುಖೇನ ಚಟವೀರರು ಉಗುಳುವ ಹೊಗೆ ಯಾವ ಕಾರ್ಖಾನೆಯ ಚಿಮಣಿಗಿಂತಲೂ ಕಡಿಮೆ ಇರದು. ಸೊಳ್ಳೆಗಳನ್ನು ಹೊಡೆದೋಡಿಸಲು ಗುಡ್ ನೈಟ್ ಗುಂಡಿ ಒತ್ತಿಯೋ, ಆಮೆ ಛಾಪವೆಂಬ ಚಕ್ಕುಲಿಯಾಕಾರದ ಬತ್ತಿಗಳಿಂದ ಹೊಗೆ ಎಬ್ಬಿಸಿಯೋ, ದಿನದ ಅಂತ್ಯಕ್ಕೆ ತೆರೆ ಬೀಳುವುದು. ಒಟ್ಟಾರೆ ಇಡೀ ದಿನ ಧೂಮ್ ಮಚಾಲೆ ಧೂಮ್ ಮಚಾಲೆ ಧೂಮ್....!!

■

ದಂನಆ

✓ ದಿಕ್ಕೆಟ್ಟು ನಿಂತ ನರನಿಗೆ ನಾರಾಯಣ ತೋರಿದ ರಸ್ತೆ ಕರ್ಮಣ್ಯೆವ್ಯಾಧಿಕಾರಸ್ಥೆ.

✓ ಮೊದಲು ಯಾರಿಗೂ ತಿಳಿಯದಂತೆ ಕೆಲಸ ಮಾಡಿ. ಅದೇ ಕೆಲಸ ನಿಮ್ಮನ್ನು ಎಲ್ಲರಿಗೂ ತಿಳಿಯುವಂತೆ ಮಾಡುತ್ತದೆ.

✓ ಬೇರೆಯವರ ಬಗ್ಗೆ ಕೆಟ್ಟದಾಗಿ ಮಾತನಾಡುವ ಜಾಗದಲ್ಲಿ ಯಾವತ್ತೂ ಕುಳಿತುಕೊಳ್ಳದಿರಿ. ಏಕೆಂದರೆ ಅಲ್ಲಿಂದ ನೀವು ಎದ್ದು ಹೋದ ನಂತರ ಮುಂದಿನ ಚರ್ಚೆ ನಿಮ್ಮ ಬಗ್ಗೆಯೇ ಆಗಿರುತ್ತದೆ.

✓ ರೆಫ್ಯೂಸ್ ವಾಟ್ ಯು ಡು ನಾಟ್ ನೀಡ್. ರೆಡ್ಯೂಸ್ ವಾಟ್ ಯು ನೀಡ್. ರಿಯೂಸ್ ವಾಟ್ ಯು ಕನ್‌ಸ್ಯೂಮ್. ರಿಸೈಕಲ್ ವಾಟ್ ಯು ಕೆನಾಟ್ ರೆಫ್ಯೂಸ್, ರೆಡ್ಯೂಸ್ ಆರ್ ರಿಯೂಸ್. ಅಂಡ್ ರಾಟ್ ದಿ ರೆಸ್ಟ್.

✓ ತಪ್ಪು ಮಾಡಿದ ವ್ಯಕ್ತಿ ಜಾಸ್ತಿ ವಾದ ಮಾಡುತ್ತಾನೆ. ತಪ್ಪೇ ಮಾಡದ ವ್ಯಕ್ತಿ ಮೌನಕ್ಕೆ ಶರಣಾಗುತ್ತಾನೆ.

**ಥರೂರ್ ಉವಾಚ:**

* ಇಂಡಿಯಾ ಈಸ್ ದಿ ಓನ್ಲಿ ಕಂಟ್ರಿ ವೇರ್ ಯು ಕಿನ್ ಪಿಸ್ ಆನ್ ದಿ ರೋಡ್ ಬಟ್ ಯು ಕೆನಾಟ್ ಕಿಸ್ ಇನ್ ಪಬ್ಲಿಕ್.

* ಇಂಡಿಯಾ ಈಸ್ ದಿ ಓನ್ಲಿ ಕಂಟ್ರಿ ವೇರ್ ಇಟ್ ಈಸ್ ಡೇಂಜರಸ್ ಟು ಟಾಕ್ ಟು ಎ ಸ್ಟ್ರೇಂಜರ್ ಬಟ್ ಓಕೆ ಟು ಮ್ಯಾರಿ ಒನ್.

* ಇಫ್ ಯು ವಾಕ್ಡ್ ಆನ್ ಅನ್ ಇಂಡಿಯನ್ ಸ್ಟ್ರೀಟ್ ಯು ವುಡ್ ಥಿಂಕ್ ಎವೆರಿಬಡಿ ಈಸ್ ಇನ್ ಎ ಹರಿ ಬಟ್ ನೊಬಡಿ ಈಸ್ ಆನ್ ಟೈಂ.

✓ ಐ ಸೀ ಯು ಎಂದರೆ ನಾನು ನಿನ್ನನ್ನು ನೋಡುತ್ತೇನೆ ಎಂದು ಅರ್ಥ. ICU ಎಂದರೆ ಬೇರೆಯವರು ನಿನ್ನನ್ನು ನೋಡುತ್ತಾರೆ ಎಂದರ್ಥ.

✓ ಅಪರಾಧ ಮಾಡುವವನಿಗೆ ನೀವು ನೆರವಾದರೆ ಆಗ ಶಾಮೀಲುದಾರನಾಗುತ್ತೀರಿ. ನಂತರ ನೆರವಾದರೆ ಲಾಯರ್ ಆಗುತ್ತೀರಿ.

✓ ವಿ ಆರ್ ನಾಟ್ ಫ್ಯಾಟ್ ವಿ ಆರ್ ಗ್ರೇಟ್ಲಿ ಕಲ್ಟಿವೇಟಡ್.

✓ ಬಿಸಿ ಬೇಳೆ ಹುಳಿ ಅನ್ನವನ್ನು ತಿಂದೇ ಇಲ್ಲದವನಿಗೆ ಅದನ್ನು ಹೇಗೆ ವರ್ಣಿಸುತ್ತೀರಿ?

✓ ದಿ ರಿಯಲ್ ಪ್ರಾಬ್ಲಮ್ ಈಸ್ ನಾಟ್ ವೆದರ್ ಮೆಷೀನ್ಸ್ ಕೆನ್ ಥಿಂಕ್ ಬಟ್ ವೆದರ್ ಮೆನ್ ಡು.

✓ ನಾವು ತೀರಿಕೊಂಡಿದ್ದೇವೆ ಎಂದು ನಮಗೆ ಹೇಗೆ ತಿಳಿಯುತ್ತದೆ?

✓ ಐ ಥಿಂಕ್, ದೇರ್‌ಫೋರ್ ಐ ಅಮ್ ಟೈರ್ಡ್.

■

Statement About Ownership And Other Particulars About Newspaper "Aparanji" To Be Published In The First Issue Every Year After Last Day of February.

Form IV

(See Rule 8)

| | | |
|---|---|---|
| 1. Place of Publication | : | Bangalore |
| 2. Periodicity of Publication | : | Monthly |
| 3. Printer's Name | : | V.R. Bharath |
| Nationality | : | Indian |
| Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. Publisher's Name | : | Koravanji Aparanji Trust |
| Address | : | No 36, 6th Main Road<br>Malleswaram<br>Bangalore - 560003 |
| 5. Editor's Name | : | M. Shiva Kumar |
| Nationality | : | Indian |
| Address | : | 36, 6th Main Road<br>Malleswaram<br>Bangalore - 560003 |
| 6. Name and Address of Individuals who own The Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I Ullas Rayasam hereby declare that the particulars given above are true to the best of my knowledge and belief.

Ullas Rayasam
Managing Trustee
(Signature of the Publisher)

Date : 1-3-2025
Place : Bangalore